ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 31 ಗುರುವಾರ 2022

ಸಂಪುಟ: 43 | ಸಂಚಿಕೆ: 341 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೇಂದ್ರ ಸರ್ಕಾರಿ ನೌಕರರ ತುಟ್ಟಿಭತ್ಯೆ ಶೇ.3ರಷ್ಟು ಹೆಚ್ಚಳ

ನವದೆಹಲಿ: ಕೇಂದ್ರ ಸರ್ಕಾರಿ ನೌಕರರಿಗೆ ಸಿಹಿಸುದ್ದಿ ನೀಡಿದ್ದು, ನೌಕರರ ತುಟ್ಟಿಭತ್ಯೆ(ಡಿಎ)ಯನ್ನು ಶೇ.3ರಷ್ಟು ಹೆಚ್ಚಳ ಮಾಡಿದ್ದು, 1.16 ಕೋಟಿ ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರು ಇದರ ಲಾಭ ಪಡೆಯಲಿದ್ದಾರೆ.

ಪ್ರಧಾನಿ ಮೋದಿ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರಿ ನೌಕರರ ಡಿಎ ಶೇ.3ರಷ್ಟು ಹೆಚ್ಚಳಕ್ಕೆ ಅನುಮೋದನೆ ನೀಡಲಾಗಿದೆ. ಇದರೊಂದಿಗೆ ಮೂಲ ವೇತನದ ಶೇ.31ರಷ್ಟಿದ್ದ ತುಟ್ಟಿಭತ್ಯೆ ಈಗ ಶೇ.34ಕ್ಕೆ ಏರಿಕೆ ಮಾಡಲಾಗಿದೆ. ಕ್ಯಾಬಿನೆಟ್ ಅಧಿಸೂಚನೆಯಂತೆ ಮೂಲ ವೇತನ ಎಂಬ ಪದವು 7ನೇ ವೇತನ ಆಯೋಗದ ಮ್ಯಾಟ್ರಿಕ್ಸ್ ಪ್ರಕಾರ ಪಾವತಿಸುವ ವೇತನ ಎಂದರ್ಥ ಮತ್ತು ವಿಶೇಷ ವೇತನದಂತಹ ಯಾವುದೇ ರೀತಿಯ ವೇತನವನ್ನು ಒಳಗೊಂಡಿಲ್ಲ.

ಶೇ.3ರಷ್ಟು ತುಟ್ಟಿಭತ್ಯೆ ಹೆಚ್ಚಳದಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 9,544.50 ಕೋಟಿ ರೂ. ಹೊರೆಯಾಗಲಿದೆ. ಆದರೆ ಇದರಿಂದ ಸುಮಾರು 47.68 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 68.62 ಲಕ್ಷ ಪಿಂಚಣಿದಾರರು ಪ್ರಯೋಜನ ಪಡೆಯಲಿದ್ದಾರೆ. 2021ರ ಜುಲೈ 1ರಿಂದ ಅನ್ವಯವಾಗುವಂತೆ ತುಟ್ಟಿಭತ್ಯೆಯನ್ನು ಕಳೆದ ವರ್ಷ ಅಕ್ಟೋಬರ್‌ನಲ್ಲಿ ಮೂಲವೇತನದ ಶೇ.31ಕ್ಕೆ ಹೆಚ್ಚಿಸಲಾಗಿತ್ತು.

ನಾಳೆಯಿಂದ ಶಾಲೆಗಳಲ್ಲಿ 12–14 ವರ್ಷದ ಮಕ್ಕಳಿಗೆ
ಕೋವಿಡ್ ಲಸಿಕೆ

ಬೆಂಗಳೂರು, ಮಾ. 30– ಏಪ್ರಿಲ್ 1ರಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲಿ 12ರಿಂದ 14 ವರ್ಷದೊಳಗಿನ ಮಕ್ಕಳಿಗೆ ಕೊರ್ಬಾವ್ಯಾಕ್ಸ್ ಲಸಿಕೆ ನೀಡಲಾಗುತ್ತದೆ.

2010 ಮಾರ್ಚ್ 28ರೊಳಗೆ ಜನಿಸಿರುವ ಮಕ್ಕಳು



ಲಸಿಕೆ ಪಡೆಯಲು ಅರ್ಹರಾಗಿರುತ್ತಾರೆ. ರಾಜ್ಯ ಸರ್ಕಾರವು ಮಾರ್ಚ್ 16ರಿಂದ ಲಸಿಕಾ ಅಭಿಯಾನ ಆರಂಭಿಸಿದ್ದು 20 ಲಕ್ಷ ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಿದೆ. ಆದರೆ ಇದುವರೆಗೆ ಕೇವಲ 6.3 ಲಕ್ಷ ಮಕ್ಕಳಿಗೆ ಮಾತ್ರ ವ್ಯಾಕ್ಸಿನ್ ನೀಡಲಾಗಿದೆ. 12–14 ವರ್ಷ ವಯಸ್ಸಿನವರಿಗೆ ಕೋವಿಡ್ ಲಸಿಕೆ ಅಭಿಯಾನವು ನಿಧಾನ ಗತಿಯಲ್ಲಿ ನಡೆಯುತ್ತಿದೆ. ಇದನ್ನು ವೇಗಗೊಳಿಸಲು ಸರ್ಕಾರ ಎಲ್ಲಾ ಶಾಲೆಗಳಲ್ಲಿ ಲಸಿಕೆ ಹಾಕಲು ನಿರ್ಧರಿಸಿದೆ ಎಂದು ಆರೋಗ್ಯ ಸಚಿವ ಡಾ.ಸುಧಾಕರ್ ಹೇಳಿದರು.

ಮಂಗಳವಾರ ಸರ್ಕಾರ ಹೊರಡಿಸಿದ ಸುತ್ತೋಲೆಯಲ್ಲಿ ಕೊರ್ಬಾವ್ಯಾಕ್ಸ್ ಪ್ರಯೋಜನಗಳ ಬಗ್ಗೆ ಜಾಗೃತಿ



ಮೂಡಿಸಲು ವ್ಯಾಕ್ಸಿನೇಷನ್‌ಗೆ ಮೊದಲು ಪೋಷಕ–ಶಿಕ್ಷಕರ ಸಭೆಗಳನ್ನು ನಡೆಸಲಾಗುವುದು ಎಂದು ಹೇಳಿದೆ.

ಲಸಿಕೆ ಹಾಕುವ ಪೂರ್ವಭಾವಿಯಾಗಿ ಮೈಕ್ರೋ–ಪ್ಲಾನಿಂಗ್ ನಡೆಸುವಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ. ಅರ್ಹ ಮಕ್ಕಳಿಗೆ ಲಸಿಕೆ ಹಾಕುವ ದಿನಾಂಕವನ್ನು ಮುಂಚಿತವಾಗಿ ತಿಳಿಸಲು. ಆರೋಗ್ಯ ಮತ್ತು ಶಿಕ್ಷಣ ಇಲಾಖೆಗಳು ಜಂಟಿಯಾಗಿ ಈ ಅಭಿಯಾನವನ್ನು ಕೈಗೊಳ್ಳಲಿವೆ. ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಲಸಿಕೆ ಹಾಕಲು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವಿವರಗಳನ್ನು ನೀಡುವಂತೆ ಶಿಕ್ಷಣ ಇಲಾಖೆಗೆ ಸರ್ಕಾರ ಸೂಚಿಸಿದೆ.

ಶಾಲೆಗಳಲ್ಲಿನ ಲಸಿಕಾ ಕೇಂದ್ರಗಳಲ್ಲಿ ವೀಕ್ಷಣಾ ಕೊಠಡಿ ಸೇರಿದಂತೆ ಮೂರು ಕೊಠಡಿಗಳನ್ನು ಅಳವಡಿಸಲಾಗುವುದು. ಮಾಸ್ಕ್ ಧರಿಸುವುದು, ಸ್ಯಾನಿಟೈಸರ್ ಬಳಸುವುದು ಮತ್ತು ಕೋವಿಡ್ ನಿಯಮ ಅನುಸರಿಸುವುದು ಕಡ್ಡಾಯವಾಗಿದೆ. ನೋಂದಣಿಗಾಗಿ ಪೋಷಕರ ದೂರವಾಣಿ ಸಂಖ್ಯೆಯನ್ನು ಬಳಸಬೇಕು ಮತ್ತು ಪೋಷಕರು ಮೊಬೈಲ್ ಫೋನ್ ಹೊಂದಿಲ್ಲದಿದ್ದಲ್ಲಿ ಮುಖ್ಯೋಪಾಧ್ಯಾಯರ ಫೋನ್ ಸಂಖ್ಯೆಯನ್ನು ಬಳಸಬೇಕು ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಶಾಲೆಯಿಂದ ನೀಡಿದ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅನ್ನು ಚಾಲನೆಯ ಸಮಯದಲ್ಲಿ ಫೋಟೋ ಐಡಿ ಪುರಾವೆಯಾಗಿ ಬಳಸಬೇಕು. ನೋಂದಣಿ ಆನ್‌ಲೈನ್‌ನಲ್ಲಿ ನಡೆಯಲಿದ್ದು ಪೋಷಕರ ಅನುಮತಿ ಕಡ್ಡಾಯವಾಗಿದೆ.

'ಹಲೋ ಕಂದಾಯ ಸಚಿವರೇ' ಸಹಾಯವಾಣಿಗೆ ಕರೆ ಮಾಡಿದರೆ 72 ಗಂಟೆಯಲ್ಲಿ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ಪತ್ರ

ಬೆಂಗಳೂರು, ಮಾ.30(ಕೆಎಂಶಿ)– 'ಹಲೋ ಕಂದಾಯ ಸಚಿವರೇ' ಎಂದು ಸಹಾಯವಾಣಿಗೆ ಕರೆ ಮಾಡಿದ 72 ಗಂಟೆಯಲ್ಲಿ ಅರ್ಹ ಪಿಂಚಣಿದಾರರ ಮನೆ ಬಾಗಿಲಿಗೆ ಮಂಜೂರಾತಿ ಪತ್ರ ತಲುಪಿಸಬೇಕು ಎಂಬ ವಿನೂತನ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ವಿಧಾನಪರಿಷತ್‌ನಲ್ಲಿಂದು ಘೋಷಿಸಿದರು.



ಪ್ರಶ್ನೋತ್ತರ ವೇಳೆ ಮುನಿರಾಜು ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ರಾಜ್ಯದಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲರಿಗೆ ನೀಡುವ ನೆರವು ಸೇರಿದಂತೆ ಮಾಸಾಶನ ಯೋಜನೆಗಳು ತಲುಪಿಲ್ಲ ಎಂಬ ದೂರುಗಳು ಸಾಮಾನ್ಯವಾಗಿವೆ. ಪಿಂಚಣಿ ಸೌಲಭ್ಯವನ್ನು ಮನೆ ಬಾಗಿಲಿಗೆ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಹೊಸ ತಂತ್ರಾಂಶ ರೂಪಿಸಲಾಗುವುದು ಎಂದರು. ಕಂದಾಯ ಇಲಾಖೆಯಲ್ಲಿ ಅರ್ಹ ಫಲಾನುಭವಿಗಳ ವಯೋಮಿತಿ ದಾಖಲೆ, ಆದಾಯ ಮಾಹಿತಿ ಸೇರಿ ಎಲ್ಲವೂ ಲಭ್ಯ ಇವೆ. ಆಧಾರ್ ಸಂಖ್ಯೆ ಬಳಕೆ ಮಾಡಿಕೊಂಡು ಫಲಾನುಭವಿಯ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ.

ಯೋಜನೆ ಲಾಭ ಪಡೆಯದಿದ್ದವರು ಹೊಸದಾಗಿ ಸ್ಥಾಪಿಸುವ ಸಹಾಯವಾಣಿಗೆ ಕರೆ ಮಾಡಿದರೆ 72 ಗಂಟೆಯಲ್ಲಿ ಮಾಸಾಶನ ಮಂಜೂರಾದ ಆದೇಶ ಪ್ರತಿಯನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ ಎಂದರು. ರಾಜ್ಯದಲ್ಲಿ ಆರಂಭಿಸಲಾದ ಗ್ರಾಮ ವಾಸ್ತವ್ಯ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಈ ಅನುಭವದಿಂದ ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುವ ಯೋಜನೆ ರೂಪಿಸಲಾಗಿತ್ತು ಎಂದರು.

ರಾಜ್ಯದಲ್ಲಿ 60 ಲಕ್ಷ ರೈತರಿಗೆ ಮನೆ ಬಾಗಿಲಿಗೆ ಜಾತಿ, ಆದಾಯ, ಪಹಣಿ ಮತ್ತು ಅಟ್ಲಾಸ್ ದಾಖಲೆಗಳನ್ನು ಉಚಿತವಾಗಿ ತಲುಪಿಸಲಾಗಿದೆ. ಈ ದಾಖಲೆಗಳ ವಾಯಿದೆ ಒಂದು ವರ್ಷದವರೆಗೂ ಇರಲಿದೆ. ಮುಂದಿನ ವರ್ಷ ಮತ್ತೆ ದಾಖಲೆಗಳನ್ನು ನೀಡುವ ಚಿಂತನೆ ಇದೆ. ಮನೆ ಬಾಗಿಲಿಗೆ ದಾಖಲೆ ನೀಡುವುದರಿಂದ ಆಸ್ತಿ ಯಾರ ಹೆಸರಿನಲ್ಲಿದೆ ಎಂಬ ಬಗ್ಗೆ ತಳ ಹಂತದಲ್ಲೇ ಅರಿವು ಮೂಡಲಿದೆ ಎಂದರು.

ಸಮುದಾಯ ಸಂಘರ್ಷಕ್ಕೆ ಮಾಧ್ಯಮದವರೇ ಕಾರಣ

● ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ● ಟಿಆರ್‌ಪಿಗಾಗಿ ಕಲುಷಿತ ವಾತಾವರಣ ನಿರ್ಮಾಣ

ಬೆಂಗಳೂರು, ಮಾ.30(ಕೆಎಂಶಿ)– ಟಿಆರ್‌ಪಿಗಾಗಿ ಎರಡು ಸಮುದಾಯಗಳ ನಡುವೆ ಸಂಘರ್ಷ ಹುಟ್ಟುಹಾಕಿ ಸಮಾಜದಲ್ಲಿ ಕಲುಷಿತ ವಾತಾವರಣ ನಿರ್ಮಾಣ ಮಾಡುತ್ತಿರುವವರು ಮಾಧ್ಯಮದವರೇ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದ್ದಾರೆ.



ಸಮಾಜ ಹಾಳಾದರೆ ರಾಜಕಾರಣಿಗಳು ಕಾರಣ ಎಂದು ಆರೋಪ ಮಾಡುತ್ತಾರೆ. ಆದರೆ, ಇಂದು ಪ್ರಗತಿಪರ ಚಿಂತಕರು, ಮಾಧ್ಯಮ ಸೇರಿದಂತೆ ಎಲ್ಲಾ ಕ್ಷೇತ್ರಗಳಿಂದ ವ್ಯವಸ್ಥೆ ಹಾಳಾಗುತ್ತಿದೆ. ಇವರನ್ನು ಸುಧಾರಿಸುವವರು ಯಾರು ಎಂದು ಪ್ರಶ್ನಿಸಿದರು. ವಿಧಾನಸಭೆಯಲ್ಲಿಂದು ಚುನಾವಣಾ ಸುಧಾರಣೆ ವಿಷಯದ ಮೇಲೆ ಮಾತನಾಡಿದ ಅವರು, ದೂರು ಕೊಡುವವರು ಮಾಧ್ಯಮದವರೇ, ಅಭಿಪ್ರಾಯ ಮೂಡಿಸುವವರೂ ಅವರೇ, ಅಂತಿಮ ತೀರ್ಪು ಬರೆಯುವವರೂ ಅವರೇ, ಇವರ ಟಿಆರ್‌ಪಿಗಾಗಿ ಸಮುದಾಯಗಳ ನಡುವೆ ಸಂಘರ್ಷ ಸೃಷ್ಟಿಸುತ್ತಿದ್ದಾರೆ ಎಂದರು. ಸಮಾಜದಲ್ಲಿ ಕಲುಷಿತ ವಾತಾವರಣ ಮೂಡಿದ್ದರೆ ಅದಕ್ಕೆ ಮಾಧ್ಯಮದವರೇ ನೇರ ಕಾರಣ ಎಂದು ಕಿಡಿಕಾರಿದರು.

ಕಳೆದ ಮೂರು ದಿನಗಳಿಂದ ಹಲಾಲ್ ವಿಷಯ ಮುಂದಿಟ್ಟುಕೊಂಡು ಚರ್ಚೆಯೊಂದನ್ನು ಪ್ರಾರಂಭಿಸಿದ್ದಾರೆ. ಯಾರಿಗೆ ● 9ನೇ ಪುಟಕ್ಕೆ


ಮುಸ್ಲಿಂ ಶಿಲ್ಪಿಗಳ ಯಾವಾಗ ಬಹಿಷ್ಕರಿಸುತ್ತೀರಿ?
ದಲಿತರೂ ನನ್ನ ಜೊತೆಯಲ್ಲೇ ಕುಳಿತು ಊಟ ಮಾಡ್ತಾರೆ

ರಾಮನಗರ,ಮಾ.30–ಕೋಲಾರದ ಶಿವಾರಪಟ್ಟಣ ಎಂಬ ಹಳ್ಳಿಯಲ್ಲಿ ಕಳೆದ 35–40 ವರ್ಷಗಳಿಂದ ದೇವರ ಪ್ರತಿಮೆ ಮಾಡಿಕೊಂಡು ಬಂದಿರುವುದು ಮುಸ್ಲಿಂ ಕುಟುಂಬದವರೇ. ಇಂದಿಗೂ ಅವರು ಶಿಲ್ಪಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರನ್ನು ಯಾವಾಗ ಬಹಿಷ್ಕರಿಸುತ್ತೀರಿ? ಎಂಬುದನ್ನು ಬಿಜೆಪಿಯವರು ಹೇಳಬೇಕು ಎಂದು ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದ್ದಾರೆ.

ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮುಂದೊಂದು ದಿನ ಆರ್‌ಎಸ್‌ಎಸ್ ಒಪ್ಪಿಕೊಳ್ಳುತ್ತೀರಾ ಎನ್ನುವ ಸಭಾಪತಿಗಳು ಇದನ್ನೇಕೆ ನೋಡುತ್ತಿಲ್ಲ. ಇದೆಲ್ಲವೂ ಸುಧಾರಣೆ ಆಗೋದು ಯಾವಾಗ ಎಂದು ಕಿಡಿಕಾರಿದ್ದಾರೆ. ನಾನು ಜಾತಿ ಕೇಳುವುದಿಲ್ಲ, ಈಚೆಗಷ್ಟೇ ನಾನು 'ದೇವಸ್ಥಾನಗಳಲ್ಲಿ ದಲಿತರಿಗೆ ಪೂಜೆ ಮಾಡುವುದಕ್ಕೆ ಬಿಡುತ್ತಾರೆಯೇ? ಎಂದು ಪ್ರಶ್ನಿಸಿದ್ದೆ. ಇದಕ್ಕೆ ಈ ವಿವಾದವನ್ನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಅವರ ಮನೆಯೊಳಗೂ ದಲಿತರನ್ನೂ ಹೀಗೇ ಸೇರಿಸುತ್ತಾರೆಯೇ ಎಂದು ಸ್ವಾಮೀಜಿಯೊಬ್ಬರು ಪ್ರಶ್ನಿಸಿದ್ದರು. ಆ ಸ್ವಾಮೀಜಿ ಅವರು ಬೇಕಿದ್ದರೆ ಬಂದು ನನ್ನ ಮನೆಯ ವಾತಾವರಣ ನೋಡಲಿ, ಅವರಿಗೂ ಉಳಿದುಕೊಳ್ಳಲು ಆಶ್ರಮದ ಪದ್ಧತಿಯಂತೆಯೇ ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ತಿರುಗೇಟು ನೀಡಿದ್ದಾರೆ. ದಲಿತರೂ ಸೇರಿದಂತೆ ಎಲ್ಲ ವರ್ಗದ ಜನರು ನಮ್ಮ ತೋಟದ ಕೆಲಸಕ್ಕೆ ಬೆಳಗ್ಗೆ 5:30ರಿಂದಲೇ ಬರುತ್ತಾರೆ. ಪ್ರತಿದಿನ ನಾನು ಅವರ ಕಷ್ಟಗಳನ್ನು ವಿಚಾರಿಸುತ್ತೇನೆಯೇ ಹೊರತು ಯಾವ ಜಾತಿ ಎಂದು ಕೇಳುವುದಿಲ್ಲ. ಇಂದಿಗೂ ಅವರಿಗೆ ನನ್ನ ಮನೆಯಲ್ಲಿ ಮುಕ್ತವಾಗಿ ಓಡಾಡಿಕೊಂಡು ಕೆಲಸ ಮಾಡುವ ವಾತಾವರಣ ಕಲ್ಪಿಸಿಕೊಟ್ಟಿದ್ದೇನೆ ಎಂದರು.

ಪರಿಶಿಷ್ಟರು, ಪಂಚಮಸಾಲಿ, ಹಿಂದುಳಿದವರಿಗೆ ಮೀಸಲಾತಿ ಹೆಚ್ಚಳ

ಬೆಂಗಳೂರು,ಮಾ.30(ಕೆಎಂಶಿ)–ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಪಂಚಮಸಾಲಿ ಹಾಗೂ ಹಿಂದುಳಿದವರು ಸೇರಿದಂತೆ ಮತ್ತಿತರರಿಗೆ ಸಂವಿಧಾನ ಬದ್ಧ ಮೀಸಲಾತಿ ಹೆಚ್ಚಳಕ್ಕೆ ಸರ್ಕಾರ ಸಿದ್ಧ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದರು.



ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಚುನಾವಣಾ ಸುಧಾರಣಾ ಕ್ರಮಗಳ ಚರ್ಚೆಗೆ ಅವಕಾಶ ನೀಡಿದರು. ಈ ವೇಳೆ ಮುಖ್ಯಮಂತ್ರಿ ಬೊಮ್ಮಾಯಿ ಮಾತನಾಡಿ, ಸರ್ಕಾರ ಎಲ್ಲ ವರ್ಗದವರಿಗೂ ಸಾಮಾಜಿಕ ನ್ಯಾಯ ಒದಗಿಸಲು ಬದ್ಧವಾಗಿದೆ. ಈಗಾಗಲೇ ಪರಿಶಿಷ್ಟ ವರ್ಗದವರ ಮೀಸಲಾತಿ ಹೆಚ್ಚಳ ಸಂಬಂಧ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಸಮಿತಿ ಸರ್ಕಾರಕ್ಕೆ ವರದಿ ನೀಡಿದೆ. ಪಂಚಮಸಾಲಿ ಸಮುದಾಯವನ್ನು 2ಎ ವರ್ಗಕ್ಕೆ ಸೇರ್ಪಡೆ ಮಾಡುವ ಕುರಿತು ಹಿಂದುಳಿದ ವರ್ಗಗಳ ಆಯೋಗ ಅಧ್ಯಯನ ನಡೆಸುತ್ತದೆ. ಜನಸಂಖ್ಯೆಗೆ ಅನುಗುಣವಾಗಿ ● 9ನೇ ಪುಟಕ್ಕೆ

ಪಂಚಾಯತ್ ಚುನಾವಣೆ ಇಂದು ಸಿಎಂ ಸಭೆ

ಬೆಂಗಳೂರು,ಮಾ.30–ಒಬಿಸಿ ಮೀಸಲಾತಿಯೊಂದಿಗೆ ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ಕುರಿತು ಚರ್ಚಿಸಲು ಮಾ.31ರಂದು ಸಭೆ ನಡೆಸಲಾಗುವುದು ಎಂದು ಆರ್‌ಡಿಪಿಆರ್ ಸಚಿವ ಕೆ.ಎಸ್.ಈಶ್ವರಪ್ಪ ಮಂಗಳವಾರ ವಿಧಾನಪರಿಷತ್‌ಗೆ ತಿಳಿಸಿದರು.

ಪಂಚಾಯಿತಿ ಚುನಾವಣೆ ನಡೆಸಲು ಸರ್ಕಾರ ಯಾವುದೇ ಸಿದ್ಧತೆ ನಡೆಸುತ್ತಿಲ್ಲ ಎಂದು ಜೆಡಿಎಸ್ ಎಂಎಲ್‌ಸಿ ಮರಿತಿಬ್ಬೇಗೌಡ ವಿಷಯ ಪ್ರಸ್ತಾಪಿಸಿದಾಗ ಉತ್ತರಿಸಿದ ಈಶ್ವರಪ್ಪ, ಒಬಿಸಿಗೆ ಮೀಸಲಾತಿ ಇಲ್ಲದೆ ಚುನಾವಣೆ ನಡೆಸುವಂತೆ ಸುಪ್ರೀಂ ಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದೆ ಎಂದರು. ಆದರೆ ಸರ್ಕಾರವು ಒಬಿಸಿಗಳಿಗೆ ಅವಕಾಶ ನೀಡಲು ಬಯಸುತ್ತದೆ. ಜಿಲ್ಲಾ ಮತ್ತು ತಾಲೂಕು ಪಂಚಾಯಿತಿ ಚುನಾವಣೆಗೆ ಮೀಸಲಾತಿ ನಿಗದಿ ಪಡಿಸಲು ಪಂಚಾಯತ್ ರಾಜ್ ಡಿಲಿಮಿಟೇಶನ್ ಸಮಿತಿಯನ್ನು ರಚಿಸಿದ್ದೇವೆ ಅದು ವರದಿಯನ್ನು ಶೀಘ್ರವಾಗಿ ಸಲ್ಲಿಸುವಂತೆ ಕೇಳಿದ್ದೇವೆ. ಸಿಎಂ ಬೊಮ್ಮಾಯಿ ಅವರು ಮಾ.31ರಂದು ಎಲ್ಲ ಶಾಸಕರ ಸಭೆ ಕರೆದು ಅವರ ಅಭಿಪ್ರಾಯ ಪಡೆದು ಶೀಘ್ರವೇ ಚುನಾವಣೆ ನಡೆಸಲು ಅನುಕೂಲವಾಗುವಂತೆ ಸುಪ್ರೀಂಕೋರ್ಟ್‌ಗೆ ವರದಿ ಸಲ್ಲಿಸುವ ಕುರಿತು ತೀರ್ಮಾನಿಸಿದ್ದಾರೆ ಎಂದರು.

ವೀರಶೈವ ಲಿಂಗಾಯತರ ಉಳಿಸಿಕೊಳ್ಳಲು ಬಿಜೆಪಿ, ಸೆಳೆಯಲು ಕಾಂಗ್ರೆಸ್ ಕಸರತ್ತು

● ಸಮುದಾಯದ ಮಠ–ಮಾನ್ಯಗಳ ಮೊರೆ ಹೋದ ಉಭಯ ಪಕ್ಷಗಳು ● ಸಿದ್ದಗಂಗಾ ಮಠಕ್ಕೆ ಇಂದು ರಾಹುಲ್ ಗಾಂಧಿ, ನಾಳೆ ಅಮಿತ್ ಷಾ ಭೇಟಿಯ ಮಹತ್ವದ ಸಂದೇಶ

ಬೆಂಗಳೂರು, ಮಾ.30(ಕೆಎಂಶಿ)– ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ವೀರಶೈವ/ಲಿಂಗಾಯತ ಮತಗಳನ್ನು ಸೆಳೆಯಲು ಆಡಳಿತಾರೂಢ ಬಿಜೆಪಿ ಮತ್ತು ಪ್ರತಿಪಕ್ಷ ಕಾಂಗ್ರೆಸ್ ಪೈಪೋಟಿ ನಡೆಸಿವೆ. ಬಿ.ಎಸ್. ಯಡಿಯೂರಪ್ಪ ಅವರನ್ನು ಅಧಿಕಾರದಿಂದ ಕೆಳಗಿಳಿಸಿದ ನಂತರ ಈ ಸಮುದಾಯದ ಮತಗಳನ್ನು ಕಸಿಯಲು ಕಾಂಗ್ರೆಸ್, ಮಠಗಳ ಪ್ರದಕ್ಷಿಣೆ ಜೊತೆಗೆ ಮುಂದಿನ ಚುನಾವಣಾ ಸಾರಥ್ಯವನ್ನು ಆ ಸಮುದಾಯಕ್ಕೆ ಸೇರಿದ ನಾಯಕರಿಗೇ ವಹಿಸಿದೆ. ಡಾ. ಶಿವಕುಮಾರ ಶ್ರೀಗಳ 115ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳಲು ಎರಡೂ ಪಕ್ಷಗಳು ಸ್ಪರ್ಧೆಗಿಳಿದಿವೆ.

ತುಮಕೂರಿನ ಶ್ರೀಕ್ಷೇತ್ರದಲ್ಲಿ ಏ.1ರಂದು ನಡೆಯಲಿರುವ ಈ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ 2 ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಇವರ ಭೇಟಿ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಲವು ನಾಯಕರು ಶ್ರೀಕ್ಷೇತ್ರದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.





ಅಮಿತ್ ಷಾ ಮಠಕ್ಕೆ ಭೇಟಿ ಕೊಡುವ ಮುನ್ನವೇ ಕಾಂಗ್ರೆಸ್‌ನ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ನಾಳೆ ಮಧ್ಯಾಹ್ನವೇ ಶ್ರೀಕ್ಷೇತ್ರಕ್ಕೆ ತೆರಳಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲೇಬೇಕೆಂದು ರಾಹುಲ್ ಗಾಂಧಿ ಅವರನ್ನು ರಾಜ್ಯ ಕಾಂಗ್ರೆಸ್ ನಾಯಕರು ಕರೆತರುತ್ತಿದ್ದಾರೆ. ಜಯಂತ್ಯುತ್ಸವ ಸ್ವಾಗತ ಸಮಿತಿ ಪಕ್ಷಾತೀತವಾಗಿ ಎಲ್ಲಾ ನಾಯಕರಿಗೂ ಆಹ್ವಾನ ನೀಡಿದೆ. ಈ ಹಿಂದೆ ಎಷ್ಟೋ ಬಾರಿ ಕಾಂಗ್ರೆಸ್‌ಗೆ ಆಹ್ವಾನ ನೀಡಿದ್ದ ಕಾರ್ಯಕ್ರಮದಲ್ಲಿ ಆ ಪಕ್ಷದ ರಾಷ್ಟ್ರೀಯ ನಾಯಕರು ಭಾಗವಹಿಸಿರಲಿಲ್ಲ.

ಬಿಜೆಪಿಗೆ ಚುನಾವಣಾ ಪ್ರತಿತಂತ್ರ ರೂಪಿಸುತ್ತಿರುವ ಕಾಂಗ್ರೆಸ್ ಇದೀಗ ಎಲ್ಲಾ ಅವಕಾಶಗಳನ್ನು ಬಳಕೆ ಮಾಡಿಕೊಂಡು ವಿವಿಧ ಸಮುದಾಯಗಳ ಮತಗಳನ್ನು ಸೆಳೆಯುವ ಪ್ರಯತ್ನ ಮಾಡುತ್ತಿದೆ.

ದಶಕಗಳ ಹಿಂದೆ ಕಾಂಗ್ರೆಸ್‌ನಿಂದ ದೂರ ಹೋಗಿರುವ ಲಿಂಗಾಯತ ಮತದಾರರನ್ನು ಓಲೈಸಲು ಕಾಂಗ್ರೆಸ್ ಮುಂದಾಗಿದೆ. ಸುಮಾರು ಎರಡೂವರೆ ದಶಕಗಳ ಹಿಂದೆ ಕಾಂಗ್ರೆಸ್ ಪಕ್ಷದಿಂದ ದೂರವಾದ ಲಿಂಗಾಯತ ಸಮುದಾಯ 1994ರಲ್ಲಿ ಜನತಾದಳದೊಂದಿಗೆ, 1999ರಲ್ಲಿ ಸಂಯುಕ್ತ ಜನತಾದಳದೊಂದಿಗೆ ಮತ್ತು ತದ ನಂತರದ ದಿನಗಳಲ್ಲಿ ಬಿಜೆಪಿಯ ಬೆನ್ನಿಗೆ ನಿಂತಿತ್ತು.

ಲಿಂಗಾಯತ ಸಮುದಾಯದ ಬೆಂಬಲ ಪಡೆದ ಯಡಿಯೂರಪ್ಪ ಅವರು 4 ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿದ್ದರು. ಕಳೆದ ವರ್ಷ ಅವರು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ನಂತರ ಲಿಂಗಾಯತ ಸಮುದಾಯ ಡೋಲಾಯಮಾನ ಸ್ಥಿತಿಯಲ್ಲಿದ್ದು, ಮುಂದಿನ ದಿನಗಳಲ್ಲಿ ಬಿಜೆಪಿಯಿಂದ ಸೂಕ್ತ ಸಂದೇಶ ರವಾನೆಯಾಗದಿದ್ದರೆ ದೊಡ್ಡ ಮಟ್ಟದಲ್ಲಿ ಬೇರೆ ಕಡೆ ವಲಸೆ ಹೋಗಬಹುದು ಎಂದು ರಾಜಕೀಯ ವಲಯಗಳು ವಿಶ್ಲೇಷಿಸುತ್ತಿವೆ.

ಈ ಹಿನ್ನೆಲೆಯಲ್ಲಿಯೇ ಕಾಂಗ್ರೆಸ್ ಪಕ್ಷ ಪ್ರಬಲ ಲಿಂಗಾಯತ ಸಮುದಾಯವನ್ನು ಓಲೈಸಲು ಲಿಂಗಾಯತ ನಾಯಕ, ಮಾಜಿ ಸಚಿವ ಎಂ.ಬಿ.ಪಾಟೀಲ್ ಅವರನ್ನು ಕರ್ನಾಟಕದಲ್ಲಿ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಅದೇ ಕಾಲಕ್ಕೆ ಎಂ.ಬಿ.ಪಾಟೀಲ್ ಅವರ ಪದಗ್ರಹಣ ● 9ನೇ ಪುಟಕ್ಕೆ

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 140ಕ್ಕೂ ಹೆಚ್ಚು ಸ್ಥಾನ ಗೆದ್ದು ಮತ್ತೆ ಅಧಿಕಾರಕ್ಕೆ

ಮೈಸೂರು, ಮಾ.30 (ಆರ್‌ಕೆಬಿ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷ 140ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಮೂಲಕ ಭರ್ಜರಿ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬರಲಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಮಠಕ್ಕೆ ಭೇಟಿ ನೀಡಿ, ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ಬಳಿಕ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ವಿರೋಧಿ ಹಾಗೂ ಬಿಜೆಪಿ ಪರವಾದ ಅಲೆ ಇದೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ. ಕಾಂಗ್ರೆಸ್ ನಾಯಕರು ಬಿಜೆಪಿ ವಿರುದ್ಧ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಬಗ್ಗೆ ಜನರಿಗೆ ಬೇಸರವಾಗಿದೆ. ಹಾಗಾಗಿ ಬಿಜೆಪಿಯತ್ತ ವಾಲಿದ್ದಾರೆ ಎಂದರು.

ಪಕ್ಷ ಸಂಘಟನೆಗಾಗಿ ಅ.1ರ ನಂತರ ತಾವು ಸೇರಿದಂತೆ ಪಕ್ಷದ ನಾಯಕರು ಇಡೀ ರಾಜ್ಯ ಪ್ರವಾಸ ಕೈಗೊಳ್ಳಲಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಲಾಭವನ್ನು ಪಕ್ಷದ ಕಾರ್ಯಕರ್ತರು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿರುವುದು ಸಂತಸ ತಂದಿದೆ. ಇದು ಪಕ್ಷದ ಚುನಾವಣೆಯ ಯಶಸ್ಸಿಗೆ ನಿರ್ಣಾಯಕವಾಗಲಿದೆ ಎಂದು ಹೇಳಿದರು.

ಮಾಜಿ ಸಿಎಂ ಬಿಎಸ್‌ವೈ ವಿಶ್ವಾಸ



ರಾಜ್ಯದಲ್ಲಿ ಅವಧಿಗೂ ಮೊದಲೇ ಚುನಾವಣೆ ಸಾಧ್ಯತೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅಂತಹ ಯಾವುದೇ ಉದ್ದೇಶ ಇದ್ದಂತಿಲ್ಲ, ಅಮಿತ್ ಶಾ ರಾಜ್ಯಕ್ಕೆ ಬಂದಾಗಲೆಲ್ಲಾ ಇಂತಹ ಊಹಾಪೋಹಗಳು ಉದ್ಭವಿಸುತ್ತವೆ. ಅವರು ಬಂದು ಹೋದ ಬಳಿಕ ಅಂತಹ ಸುದ್ದಿಗಳಿದ್ದರೆ ನಾನೇ ತಿಳಿಸುವೆ ಎಂದರು.

ಇತ್ತೀಚೆಗೆ ನಡೆದ ಪಂಚರಾಜ್ಯಗಳ ಚುನಾವಣೆ ಯಶಸ್ಸಿನ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿಯೂ ಬಿಜೆಪಿ ಕಾರ್ಯತಂತ್ರದ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ಸಮುದಾಯವನ್ನು ನಮ್ಮ ಜೊತೆಗೆ ಕೊಂಡೊಯ್ಯುವ ಕೆಲಸ ಆಗಬೇಕಾಗಿದೆ. ಆ ಸಮುದಾಯಗಳು ಈಗಾಗಲೇ ಬಿಜೆಪಿಯೊಂದಿಗೇ ಇದ್ದು, ಅವರನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೊಂಡೊಯ್ಯುವ ಪ್ರಯತ್ನ ಮಾಡಲಿದ್ದೇವೆ. ಅದಕ್ಕಾಗಿ ಕಾರ್ಯತಂತ್ರ ರೂಪಿಸಲಾಗುತ್ತಿದೆ ಎಂದರು.

> ❝ ನಾಯಕತ್ವ ಬದಲಾವಣೆ ಕುರಿತ ಪ್ರಶ್ನೆಗೆ ಉತ್ತರಿಸಿದ ಯಡಿಯೂರಪ್ಪ, ಅಂತಹ ಯಾವುದೇ ಬದಲಾವಣೆಗಳೂ ಇಲ್ಲ. ಬಸವರಾಜ ಬೊಮ್ಮಾಯಿ ಅವರೇ ಸಿಎಂ ಆಗಿ ಮುಂದುವರಿಯುತ್ತಾರೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬೊಮ್ಮಾಯಿ ಅವರೇ ಪಕ್ಷವನ್ನು ಮುನ್ನಡೆಸಲಿದ್ದು, ಈ ಬಗ್ಗೆ ಅನುಮಾನಪಡುವ ಅಗತ್ಯವಿಲ್ಲ. ನಾಯಕತ್ವ ಬದಲಾವಣೆ ಎಲ್ಲಾ ಊಹಾಪೋಹಗಳು ಆಧಾರರಹಿತವಾಗಿದ್ದು, ಅದಕ್ಕೆ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲ ಎಂದರು.

ಮಹಿಳಾ ಸಬಲೀಕರಣವು ಚುನಾವಣೆಯ ಯಶಸ್ಸಿಗೆ ನಿರ್ಣಾಯಕವಾಗಿದೆ. ಅದರಲ್ಲಿ ಶೇ.100ರಷ್ಟು ಯಶಸ್ವಿಯಾಗುವ ಕೆಲಸವನ್ನು ಪಕ್ಷವು ಮಾಡುತ್ತದೆ. 'ನಾರಿ ಶಕ್ತಿ' ಒಂದು ನಿರ್ಣಾಯಕ ಅಂಶವಾಗಿದೆ. ಬಿಜೆಪಿ ಸರ್ಕಾರವು ಈ ಹಿಂದೆ ಯಾವುದೇ ಸರ್ಕಾರಕ್ಕಿಂತ ಮಹಿಳೆಯರ ಸಬಲೀಕರಣಕ್ಕಾಗಿ ಹೆಚ್ಚಿನದನ್ನು ಮಾಡಿದೆ ಎಂದರು. ಮಾಜಿ ಸಚಿವ ಸಿ.ಎಚ್.ವಿಜಯಶಂಕರ್, ರಾಜ್ಯ ಸಫಾಯಿ ● 9ನೇ ಪುಟಕ್ಕೆ

ಮಂತ್ರಾಲಯ ಮಠಕ್ಕೆ ಜಾಗ ಕೊಟ್ಟಿದ್ದು ಸಾಬ್ರು, ಬೇಡ ಅಂದ್ರೆ ಕಿತ್ಕೊಂಡು ಬನ್ನಿ

ಬೆಂಗಳೂರು: ರಾಯಚೂರು ಮಂತ್ರಾಲಯ ಮಠಕ್ಕೆ ಜಾಗ ಕೊಟ್ಟಿದ್ದು ಸಾಬ್ರು. ಬೇಡ ಅಂದ್ರೆ ಆ ಜಾಗ ಕೊಟ್ಟು ಹೋಗಿ ಎಂದು ಸಿಎಂ ಇಬ್ರಾಹಿಂ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.



ಶೃಂಗೇರಿ, ಮೂಕಾಂಬಿಕೆ ದೇವಾಲಯದಲ್ಲಿ ಸಲಾಂ ಆರತಿ ಮಾಡುತ್ತಾರೆ. ಸತ್ತ ವ್ಯಕ್ತಿಗೆ ಈಗಲೂ ಆರತಿ ಮಾಡುತ್ತಿರುವುದು ಟಿಪ್ಪು ಸುಲ್ತಾನ್‌ಗೆ ಮಾತ್ರ. ರಾಘವೇಂದ್ರ ಸ್ವಾಮೀಜಿ ಮಠದ ಬೃಂದಾವನ ಜಾಗ ಕೊಟ್ಟಿದ್ದು ಸಾಬ್ರು, ಬೇಡ ಅಂದ್ರೆ ಕಿತ್ಕೊಂಡು ಬನ್ನಿ, ಅಯ್ಯೋ ಏನಾಗಿದೆ ನಿಮಗೆ ಎಂದು ಪ್ರಶ್ನಿಸಿದರು. ಹಲಾಲ್ ಕಟ್ ಮಾಡೋದು ವೈಜ್ಞಾನಿಕ, ಬ್ಲಡ್ ಹೊರಗೆ ಬರುತ್ತೆ. ಜಟ್ಕಾ ಕಟ್ ಬ್ಲಡ್ ಬಾಡಿಯಿಂದ ಹೊರಗೆ ಬರಲ್ಲ. ಪಶು ವೈದ್ಯರು ಹಲಾಲ್, ಜಟ್ಕಾ ಎರಡು ವೈಜ್ಞಾನಿಕ ಅಂತಾದ್ರೆ ತಿನ್ನಲಿ ಬೇಕಾದ್ರೆ ಅವರು. ಜಟ್ಕಾನೇ ತಿಂತೀವಿ ಅಂದ್ರೆ ಏನು ಮಾಡಲು ಆಗಲ್ಲ, ಕುಡಿಯೋರನ್ನ ಕುಡಿಬೇಡ ಅನ್ನೋದಕ್ಕೆ ಆಗುತ್ತ ಎಂದು ಸಿ.ಎಂ. ಇಬ್ರಾಹಿಂ ಮರು ಪ್ರಶ್ನೆ ಹಾಕಿದರು.

ಏ.2ರಿಂದ ಯುಗಾದಿ ಸಂಗೀತೋತ್ಸವ

ಮೈಸೂರು, ಮಾ.30– ಮೈಸೂರು ಅರಮನೆ ಮಂಡಳಿ ವತಿಯಿಂದ ಯುಗಾದಿ ಸಂಗೀತೋತ್ಸವ ಶುಭಕೃತು ನಾಮ ಸಂವತ್ಸರ–2022 ಕಾರ್ಯಕ್ರಮದ ಉದ್ಘಾಟನೆಯನ್ನು ಏ.2ರ ಸಂಜೆ 5:30ಕ್ಕೆ ಅರಮನೆ ಆವರಣದಲ್ಲಿ ಆಯೋಜಿಸಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ವಹಿಸಲಿದ್ದು, ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಹಾಗೂ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ವಿಶೇಷ ಆಹ್ವಾನಿತರಾಗಿ ಮೈಸೂರು ಅರಮನೆ ಆಡಳಿತ ಮಂಡಳಿ ಮುಖ್ಯ ಕಾರ್ಯದರ್ಶಿ ಹಾಗೂ ಅಧ್ಯಕ್ಷ ಪಿ.ರವಿಕುಮಾರ್ ಉಪಸ್ಥಿತರಿರುವರು.

ಶನಿವಾರ (ಏ.2) ಸಂಜೆ 5.30ಕ್ಕೆ ಯದುಕುಮಾರ್ ಮತ್ತು ತಂಡದವರಿಂದ ಮಂಗಳವಾದ್ಯ ಮತ್ತು ಸ್ಯಾಕ್ಸೋಫೋನ್ ವಾದನ, ಸಂಜೆ 6ರಿಂದ 6.30ರವರೆಗೆ ಪಂಚಾಂಗ ಶ್ರವಣ, ಸಂಜೆ 6.30 ರಿಂದ 7.30ರವರೆಗೆ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮದ ಉದ್ಘಾಟನಾ ಸಮಾರಂಭ, ಸಂಜೆ 7.30ರಿಂದ 9.30ರವರೆಗೆ ಜಾನಪದ ಗಾಯಕಿ ಅನನ್ಯ ಭಟ್ ಮತ್ತು ತಂಡದವರಿಂದ ಜಾನಪದ ಗಾಯನ.

ಏ.3ರ ಭಾನುವಾರ ಸಂಜೆ 6ರಿಂದ 7ರವರೆಗೆ ಪೊಲೀಸ್ ಬ್ಯಾಂಡ್, ಸಂಜೆ 7ರಿಂದ 9ರವರೆಗೆ ಅಂತಾರಾಷ್ಟ್ರೀಯ ಖ್ಯಾತ ವಯೋಲಿನ್ ಕಲಾವಿದರಾದ ಡಾ. ಮೈಸೂರು ಮಂಜುನಾಥ್ ಅವರಿಂದ ಪಿಟೀಲು ವಾದನ ಹಾಗೂ ಅಂತಾರಾಷ್ಟ್ರೀಯ ಖ್ಯಾತ ಕೊಳಲು ವಾದನ ಕಲಾವಿದರಾದ ಪಂಡಿತ್ ಪ್ರವೀಣ್‌ಗೋಡ್ಖಿಂಡಿ ಅವರಿಂದ ಕೊಳಲು ವಾದನದೊಂದಿಗೆ ಗ್ರ್ಯಾಂಡ್ ಜುಗಲ್‌ಬಂದಿ ಸಂಗೀತ ಸಂಭ್ರಮ.

ಏ.4ರ ಸೋಮವಾರ ಸಂಜೆ 6ರಿಂದ 7ರವರೆಗೆ ಡಾ.ಎಸ್.ವಿ.ಸಹನಾ ಅವರಿಂದ ವೀಣಾವಾದನ, ಸಂಜೆ 7ರಿಂದ 9ರವರೆಗೆ ವಿದ್ವಾನ್ ಹೆಚ್.ಎಲ್.ಶಿವಶಂಕರ್‌ಸ್ವಾಮಿ ಮತ್ತು ತಂಡದವರಿಂದ ಲಯಲಹರಿ ಕಾರ್ಯಕ್ರಮ ನಡೆಯಲಿದೆ.

ಭಾರೀ ರಿಯಾಯ್ತಿ ಮಾರಾಟ: ಇಂದೇ ಕೊನೆ ದಿನ



ಮೈಸೂರು, ಮಾ.30 – ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಬ್ರಾಂಡ್‌ಗಳು ಸೇರಿದಂತೆ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳ ಭಾರೀ ರಿಯಾಯ್ತಿ ಮಾರಾಟಕ್ಕೆ ಇಂದು (ಮಾ.31)ರಂದು ತೆರೆ ಬೀಳಲಿದೆ.

ಮೈಸೂರಿನ ವಿನೋಬಾ ರಸ್ತೆಯ ಹೋಟೆಲ್ ಸದರನ್ ಸ್ಟಾರ್‌ನಲ್ಲಿ ಮಹಿಳೆಯರ, ಪುರುಷರ ಹಾಗೂ ಮಕ್ಕಳ ನಾನಾ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳು, ಶರ್ಟ್ಸ್, ಪ್ಯಾಂಟ್ಸ್, ಟಿ–ಶರ್ಟ್ಸ್, ಬರ್ಮುಡಾಗಳು, ಲೇಡಿಸ್ ಕುರ್ತಾ, ಪೈಜಾಮಾಸ್, ಮಕ್ಕಳ ಡ್ರೆಸ್‌ಗಳು, ಕಿಡ್ಸ್ ಶರ್ಟ್ಸ್, ಪ್ಯಾಂಟ್ಸ್ ಮತ್ತು ಬೆಡ್‌ಶೀಟ್ಸ್ ಭಾರೀ ರಿಯಾಯ್ತಿಯೊಂದಿಗೆ ಕಡಿಮೆ ಬೆಲೆಯಲ್ಲಿ ಮಾರಾಟವಾಗುತ್ತಿವೆ. ಹೆಣ್ಣುಮಕ್ಕಳ ಟಾಪ್ಸ್, ಜೀನ್ಸ್ ಪ್ಯಾಂಟ್ಸ್, ಕಾಟನ್ ಪ್ಯಾಂಟ್ಸ್, ಟಿ–ಶರ್ಟ್, ಫ್ಯಾನ್ಸಿ ಡ್ರೆಸಸ್, ಜಾಕೆಟ್ಸ್, ಮತ್ತು ವಿವಿಧ ಪ್ಯಾಂಟೀಸ್‌ಗಳು, ಬ್ರಾಗಳು ಲಭ್ಯವಿದೆ. ಇದರ ಜೊತೆಗೆ ದಿವಾನ್ ಸೆಟ್, ಸೋಪಾ ಕವರ್, ಸೋಫಾ ಸೆಟ್ ಮತ್ತು ಟೇಬಲ್ ಕ್ಲಾತ್ ಸಹ ಮಾರಾಟಕ್ಕಿವೆ.

ಶಾರದಾ ವಿಲಾಸ ಕಾನೂನು ಕಾಲೇಜಿನ ವಿದ್ಯಾರ್ಥಿಗೆ 2ನೇ ರ್‍ಯಾಂಕ್

ಮೈಸೂರು, ಮಾ.30– ಮೈಸೂರಿನ ಶಾರದಾ ವಿಲಾಸ ಕಾನೂನು ಕಾಲೇಜಿನ



2020–21ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯದ 5ನೇ ಘಟಿಕೋತ್ಸವದಲ್ಲಿ ಕಾನೂನು ಪದವಿ ಪರೀಕ್ಷೆಯ 5 ವರ್ಷದ ಬಿ.ಎ. ಎಲ್.ಎಲ್.ಬಿ (ಮೇಜರ್ & ಮೈನರ್ ಪಠ್ಯಕ್ರಮ) ವಿಭಾಗದ ವಿದ್ಯಾರ್ಥಿ ಕೆ.ಪುರುಷೋತ್ತಮ್ ಕನ್ನಡ ಮಾಧ್ಯಮದಲ್ಲಿ 2ನೇ ರ್‍ಯಾಂಕ್ ಪಡೆದು ಸಾಧನೆ ಮಾಡಿದ್ದಾರೆ.

ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಆಡಳಿತ ಮಂಡಳಿ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್.ಚಂದ್ರಶೇಖರ್, ಆಡಳಿತ ಮಂಡಳಿ ಸದಸ್ಯರು, ಶಾರದಾ ವಿಲಾಸ ಕಾನೂನು ಕಾಲೇಜಿನ ಶೈಕ್ಷಣಿಕ ಸಲಹೆಗಾರ ಡಾ. ಎಂ.ಎನ್.ಭೀಮೇಶ್, ಕಾಲೇಜಿನ ಪ್ರಾಂಶುಪಾಲ ವೈ.ಪಿ.ಉದಯಕುಮಾರ, ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗದವರು ವಿದ್ಯಾರ್ಥಿಯನ್ನು ಅಭಿನಂದಿಸಿದ್ದಾರೆ.

ಆಸ್ತಿ ತೆರಿಗೆ ಪರಿಷ್ಕರಣೆ

ಮೈಸೂರು, ಮಾ.30– ಪಿರಿಯಾಪಟ್ಟಣ ಪುರಸಭೆಯ ವ್ಯಾಪ್ತಿಯ ಆಸ್ತಿ ತೆರಿಗೆ ಪರಿಷ್ಕರಣೆ ಸಂಬಂಧ ಪ್ರತಿ ವರ್ಷದಂತೆ 2022–23 ನೇ ಸಾಲಿಗೆ ಮಾರುಕಟ್ಟೆ ಮೌಲ್ಯದ ಆಧಾರದ ಮೇಲೆ ಆಸ್ತಿ ತೆರಿಗೆ ವಾಸದ ಕಟ್ಟಡಗಳಿಗೆ ಶೇಕಡ 3, ವಾಣಿಜ್ಯ ಹಾಗೂ ಕೈಗಾರಿಕೆ ಕಟ್ಟಡಗಳಿಗೆ ಶೇಕಡ 4 ರಂತೆ ದರವನ್ನು 2022ರ ಏಪ್ರಿಲ್ 1 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದೆ ಎಂದು ಪಿರಿಯಾಪಟ್ಟಣ ಪುರಸಭೆಯ ಮುಖ್ಯಾಧಿಕಾರಿ ತಿಳಿಸಿದ್ದಾರೆ. ತೆರಿಗೆ ಪಾವತಿದಾರರು 2022ನೇ ಏಪ್ರಿಲ್ ಮಾಹೆಯ ಅಂತ್ಯದೊಳಗೆ ಪಾವತಿಸಿದ್ದಲ್ಲಿ ಶೇ.5ರಷ್ಟು ತೆರಿಗೆ ವಿನಾಯಿತಿ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳ್ಳಿ ಅಂಗಡಿ ಕೆಲಸಗಾರ ನಾಪತ್ತೆ


ಮೈಸೂರು, ಮಾ.30–ಬೆಳ್ಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ವ್ಯಕ್ತಿಯೋರ್ವ



ನಾಪತ್ತೆಯಾಗಿರುವ ಬಗ್ಗೆ ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗಾಯಿತ್ರಿಪುರಂ, ವಿಶ್ವಕರ್ಮ ಕಾಲೋನಿಯ ವಾಸಿ ರಾಜು(34) ಎಂಬುವರು ತಮ್ಮ ಸಹೋದರ ಚಂದ್ರಶೇಖರ್ ಅವರೊಂದಿಗೆ ಬೆಳ್ಳಿ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದು, ಮಾ.24 ರಂದು ರಾಜು ಅಂಗಡಿಯಿಂದ ಹೇಳದೇ–ಕೇಳದೇ ಹೊರಟು ಹೋಗಿದ್ದಾರೆ. ಮನೆಗೂ ಹೋಗಿಲ್ಲ, ಎಲ್ಲೆಡೆ ಹುಡುಕಿದರೂ ಸಿಕ್ಕಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ. ಲಷ್ಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸುಳಿವು ಸಿಕ್ಕವರು ದೂರವಾಣಿ ಸಂಖ್ಯೆ: 0821–2418107, 2418307, 2418100, 2418339, 2418340 ಮೂಲಕ ತಿಳಿಸಲು ಪ್ರಕಟಣೆಯಲ್ಲಿ ಕೋರಲಾಗಿದೆ.

ನಿಧನ

ಡಾ.ಬಿ.ಎನ್.ಮಾರುತಿ



ಮೈಸೂರು, ಮಾ.30– ಮೈಸೂರಿನ ಪತಂಜಲಿ ಯೋಗ ಶಿಕ್ಷಣ ಸಮಿತಿಯ ಟ್ರಸ್ಟಿ ಮತ್ತು ರಾಮಕೃಷ್ಣನಗರದ ನಿವಾಸಿಯೂ ಆದ ಡಾ. ಬಿ.ಎನ್.ಮಾರುತಿ(57) ಅವರು ಬುಧವಾರ ಬೆಳಗ್ಗೆ ತಮ್ಮ ನಿವಾಸದಲ್ಲಿ ನಿಧನರಾದರು.

ಶ್ರೀ ಪತಂಜಲಿ ಯೋಗ, ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಶ್ರೀ ಪತಂಜಲಿ ಯೋಗ ಫೌಂಡೇಷನ್‌ನ ಮಾಜಿ ಅಧ್ಯಕ್ಷರಾದ ಶ್ರೀಯುತರು ಪತಂಜಲಿ ಯೋಗ ಕೇಂದ್ರದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಎಟಿ ಅಂಡ್ ಎಸ್‌ನ ಅಧಿಕಾರಿಯಾಗಿಯೂ ಆಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ಪತ್ನಿ ನಂದಿನಿ, ಪುತ್ರ ವಿಶ್ವಾಸ್ ಸೇರಿದಂತೆ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಬುಧವಾರ ಬೆಳಗ್ಗೆಯಿಂದ ಮಧ್ಯಾಹ್ನದವರೆಗೂ ರಾಮಕೃಷ್ಣನಗರದ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಗಿತ್ತು. ಮಧ್ಯಾಹ್ನದ ನಂತರ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಕೆಂಚೇಗೌಡ



ಮೈಸೂರು ತಾಲೂಕು ಮಾರ್ಬಳ್ಳಿಹುಂಡಿ ಗ್ರಾಮದ ನಿವಾಸಿ ಕೆಂಚೇಗೌಡ(75) ಬುಧವಾರ ನಿಧನರಾದರು. ಮೃತರು ಪತ್ನಿ ಸಣ್ಣಮಾದಮ್ಮ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಾರ್ಬಳ್ಳಿಹುಂಡಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಮೇಕ್ ಇನ್ ಇಂಡಿಯಾ' ಉಪಕ್ರಮದಡಿ

ಮೈಸೂರಲ್ಲಿ ಬ್ಯಾಂಕ್ ನೋಟ್ ಇಂಕ್ ಘಟಕ ಉದ್ಘಾಟಿಸಿದ ಆರ್‌ಬಿಐ ಗೌರ್ನರ್



ಆರ್‌ಬಿಐ ಗೌರ್ನರ್ ಶಕ್ತಿಕಾಂತ ದಾಸ್ ಅವರು ಮಾ.28ರಂದು ಮೈಸೂರಿನ ಬಿಆರ್‌ಬಿಎನ್‌ಎಂಪಿಎಲ್‌ನಲ್ಲಿ 'ವರ್ಣಿಕಾ' ಇಂಕ್ ಉತ್ಪಾದನಾ ಘಟಕವನ್ನು ಉದ್ಘಾಟಿಸಿ, ಮಾತನಾಡಿದರು.

ಬ್ಯಾಂಕ್ ನೋಟು ತಯಾರಿಕೆ ಸ್ವಾವಲಂಬನೆ

ಆರ್‌ಬಿಐ ಗೌರ್ನರ್ ಶಕ್ತಿಕಾಂತ ದಾಸ್ ಅವರು ತಮ್ಮ ಭಾಷಣದಲ್ಲಿ ದೇಶದ ಬ್ಯಾಂಕ್ ನೋಟು ಉತ್ಪಾದನೆಯಲ್ಲಿ ಶೇ.100ರಷ್ಟು ಸ್ವಾವಲಂಬನೆ ಸಾಮರ್ಥ್ಯವನ್ನು ಸಾಧಿಸುವ ಬಗ್ಗೆ ಒತ್ತಿ ಹೇಳಿದರು. ಸದ್ಯದಲ್ಲಿಯೇ ಬ್ಯಾಂಕ್ ನೋಟು ತಯಾರಿಕಾ ಸ್ವಾವಲಂಬನೆಯಲ್ಲಿ ಶೇ.100ರಷ್ಟು ನಿರಂತರ ಉತ್ಪಾದನಾ ಸಾಮರ್ಥ್ಯ, ಉತ್ಪಾದನಾ ಪರಿಸರ ವ್ಯವಸ್ಥೆ ಮತ್ತು ಪ್ರಾಮುಖ್ಯತೆ (ಜನರ ಪರಿಭಾಷೆಯಲ್ಲಿ, ಪ್ರಕ್ರಿಯೆ ಮತ್ತು ತಂತ್ರಜ್ಞಾನ), ಸಂಶೋಧನೆ ಮತ್ತು ನಾವೀನ್ಯತೆ ಸಾಧಿಸಲಿದೆ ಎಂದರು.

ಮೈಸೂರು, ಮಾ. 30 (ಬಿಸಿಟಿ) – ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಗೌರ್ನರ್ ಶಕ್ತಿಕಾಂತ ದಾಸ್ ಅವರು ಮಾ.28ರಂದು ಮೈಸೂರಿಗೆ ಭೇಟಿ ನೀಡಿದ್ದು, ಈ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನೋಟ್ ಮುದ್ರಣ ಪ್ರೈವೇಟ್ ಲಿಮಿಟೆಡ್‌ನ (ಬಿಆರ್‌ಬಿಎನ್‌ಎಂಪಿಎಲ್) 'ವರ್ಣಿಕಾ' ಇಂಕ್ ಉತ್ಪಾದನಾ ಘಟಕವನ್ನು ರಾಷ್ಟ್ರಕ್ಕೆ ಸಮರ್ಪಿಸಿದರು.

ಬಿಆರ್‌ಬಿಎನ್‌ಎಂಪಿಎಲ್‌ವು ಬ್ಯಾಂಕ್ ನೋಟುಗಳ ಭದ್ರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ 'ವರ್ಣಿಕಾ' ಇಂಕ್ ಘಟಕವನ್ನು ವಾರ್ಷಿಕವಾಗಿ 1500 ಮೆಟ್ರಿಕ್ ಟನ್ ಉತ್ಪಾದನಾ ಸಾಮರ್ಥ್ಯದಲ್ಲಿ ಸ್ಥಾಪಿಸಿದೆ. ಇದು 'ಮೇಕ್ ಇನ್ ಇಂಡಿಯಾ' ಉಪಕ್ರಮವನ್ನು ಉತ್ತೇಜಿಸುತ್ತಿದ್ದು, ಬ್ಯಾಂಕ್ ನೋಟುಗಳ ಪ್ರಿಂಟಿಂಗ್‌ಗೆ ಅವಶ್ಯಕತೆ ಇರುವ ಇಂಕ್ ಅನ್ನು ಈ ಘಟಕದಲ್ಲಿ ಉತ್ಪಾದಿಸಲಾಗುತ್ತದೆ.

ಈ ಘಟಕವು ಕಲರ್ ಶಿಫ್ಟ್ ಇಂಟಾಗ್ಲಿಯೋ ಇಂಕ್ (ಸಿಎಸ್‌ಐಐ) ಉತ್ಪಾದಿಸುವುದರೊಂದಿಗೆ ಭಾರತದಲ್ಲಿರುವ ಬ್ಯಾಂಕ್ ನೋಟು ಮುದ್ರಣಗಳಿಗೆ ಪೂರ್ಣ ಅವಶ್ಯಕತೆಯಿರುವ ಇಂಕ್ ಅನ್ನು ಪೂರೈಸುವ ಉದ್ದೇಶವನ್ನು ಹೊಂದಿದೆ. ಇದರಿಂದ ಪರಿಣಾಮಕಾರಿ ದಕ್ಷತೆ ಮತ್ತು ಬ್ಯಾಂಕ್ ನೋಟು ಇಂಕ್ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲಾಗುತ್ತದೆ. ಇದೇ ಸಂದರ್ಭದಲ್ಲಿ ಗೌರ್ನರ್ ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ಸೆಂಟರ್ (ಎಲ್‌ಡಿಸಿ) ಸ್ಥಾಪನೆಗೆ ಶಂಕುಸ್ಥಾಪನೆ ನೆರವೇರಿಸಿದರು.

ಲರ್ನಿಂಗ್ ಅಂಡ್ ಡೆವಲಪ್‌ಮೆಂಟ್ ಸೆಂಟರ್ (ಎಲ್‌ಡಿಸಿ) ಅನ್ನು ಭದ್ರತಾ ಮುದ್ರಣ ಮತ್ತು ಮಿಂಟಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್‌ನ (SPMCIL) ಸಕ್ರಿಯ ಸಹಯೋಗದೊಂದಿಗೆ, ಸಂಪೂರ್ಣ ಸ್ವಾಮ್ಯದ 'ಎ' ಮಿನಿರತ್ನ ವರ್ಗ–1ರ ಭಾರತ ಸರ್ಕಾರದ ಕಂಪನಿ ಮತ್ತು ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ (ಬಿಎನ್‌ಪಿಎಂಐಪಿಎಲ್), ಬಿಆರ್‌ಬಿಎನ್‌ಎಂಪಿಲ್ ಮತ್ತು ಎಸ್‌ಪಿಎಂಸಿಐಎಲ್‌ನ ಜಂಟಿ ಉದ್ಯಮದೊಂದಿಗೆ ಸ್ಥಾಪಿಸಲಾಗುತ್ತಿದೆ.

ಎಲ್‌ಡಿಸಿಯು ದೃಢವಾದ ಜ್ಞಾನ ಪ್ರಸರಣ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಉತ್ತಮ ಪ್ರಯೋಗಗಳು, ಅನುಭವಗಳು ಮತ್ತು ನಾವೀನ್ಯತೆಗಳನ್ನು ಸಮರ್ಥ ಸಹಭಾಗಿತ್ವದೊಂದಿಗೆ, ಏಕರೂಪತೆಯನ್ನು ಖಚಿತಪಡಿಸಿಕೊಳ್ಳಲು ಪರಿಸರ ಬ್ಯಾಂಕ್ ನೋಟು ಉತ್ಪಾದನೆಯಲ್ಲಿ ಗುಣಮಟ್ಟ ಮತ್ತು ಪೂರೈಕೆಯನ್ನು ಈ ಕೇಂದ್ರ ಪೂರೈಸುತ್ತದೆ. ಈ ಕೇಂದ್ರವು ಬಿಆರ್‌ಬಿಎನ್‌ಎಂಪಿಎಲ್‌ನಿಂದಲೇ ನಿರ್ವಹಣೆ ಮಾಡಲ್ಪಡುತ್ತದೆ ಎಂದರು.

ಆರ್‌ಬಿಐ ಕಾರ್ಯನಿರ್ವಾಹಕ ನಿರ್ದೇಶಕ ಜೋಸ್ ಕೆ.ಕಟ್ಟೂರ್, ಬಿಆರ್‌ಬಿಎನ್‌ಎಂಪಿಎಲ್ ವ್ಯವಸ್ಥಾಪಕ ನಿರ್ದೇಶಕ ಮನಾಸ್ ರಂಜನ್ ಮೊಹಾಂತಿ, ಬಿಎನ್‌ಪಿಎಂಐಪಿಎಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಜಿ.ವಿಶ್ವನಾಥನ್, ಸರ್ಕಾರಿ ಅಧಿಕಾರಿಗಳು, ಎಸ್‌ಬಿಐನ ಹಿರಿಯ ಅಧಿಕಾರಿಗಳು ಮತ್ತು ಬಿಆರ್‌ಬಿಎನ್‌ಎಂಪಿಎಲ್, ಬಿಎನ್‌ಪಿಎಂಐಪಿಎಲ್ ಸಿಬ್ಬಂದಿ ಉಪಸ್ಥಿತರಿದ್ದರು.

ಆಲನಹಳ್ಳಿ ಅಂಗಡಿಯಲ್ಲಿ ಕಳ್ಳತನ



ಮೈಸೂರು, ಮಾ.30 (ಆರ್‌ಕೆ)– ರೋಲಿಂಗ್ ಶೆಟರ್ ಮೀಟಿ ಅಂಗಡಿಯೊಂದರಲ್ಲಿ ಕಳವು ಮಾಡಿರುವ ಘಟನೆ ಮೈಸೂರಿನ ಆಲನಹಳ್ಳಿ ಬಳಿ ರಿಂಗ್ ರಸ್ತೆಯಲ್ಲಿ ಕಳೆದ ರಾತ್ರಿ ನಡೆದಿದೆ. ತಿ.ನರಸೀಪುರ ರಸ್ತೆಯ ರಿಂಗ್ ರೋಡ್ ಜಂಕ್ಷನ್ ಬಳಿ ಇರುವ ಎ.ಎಸ್. ಬ್ರದರ್ಸ್ ವರ್ಕ್‌ಶಾಪ್ ಶೆಟರ್ ಮೀಟಿ ನುಸುಳಿದ ಖದೀಮರು, ಬ್ಯಾಟರಿಗಳು, ವಾಲ್‌ಗಳನ್ನು ಹೊತ್ತೊಯ್ದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಿಹೆಚ್.ಡಿ ಪದವಿ



ಮೈಸೂರು,ಮಾ.30– ಡಾ.ವಾಸುದೇವ ಮೂರ್ತಿ ಅವರ ಮಾರ್ಗದರ್ಶನದಲ್ಲಿ ಎಂ.ಮಹದೇವಮೂರ್ತಿ ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶೋಷಣೆ ವಿರುದ್ಧ ಹೋರಾಡುವ ಮಹಿಳೆಯೊಬ್ಬಳ ಕಥೆ ಆಧರಿಸಿದ

'ಥೆಮಿಸ್' ವೆಬ್ ಸೀರೀಸ್ ಚಿತ್ರದ ಪೋಸ್ಟರ್ ಬಿಡುಗಡೆ



'ಥೆಮಿಸ್' ವೆಬ್ ಸರಣಿಯ ಪೋಸ್ಟರ್ ಅನ್ನು ಅಂಕಣಕಾರ ಬನ್ನೂರು ರಾಜು ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಿದರು.

ಮೈಸೂರು, ಮಾ.30 (ಆರ್‌ಕೆಬಿ) – ಎಲ್‌ಸಿಎ ಸಿನೆಮ್ಯಾಟಿಕ್ಸ್ ಸಂಸ್ಥೆ ನಿರ್ಮಿಸುತ್ತಿರುವ 'ಥೆಮಿಸ್' ವೆಬ್ ಸರಣಿ ಪೋಸ್ಟರ್ ಅನ್ನು ಅಂಕಣಕಾರ ಬನ್ನೂರು ರಾಜು ಮೈಸೂರು ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಬೆಳ್ಳಿತೆರೆಗೆ ಮೈಸೂರಿನ ಕೊಡುಗೆ ಅಪಾರವಾಗಿದೆ. ಹೀಗಾಗಿ ಇಲ್ಲಿಯೇ ಉತ್ತಮ ಚಲನಚಿತ್ರಗಳು ನಿರ್ಮಾಣಗೊಂಡಿವೆ. ಇದರೊಡನೆ ಈಗ ವೆಬ್ ಸೀರೀಸ್ ಸಹ ನಿರ್ಮಾಣಗೊಳ್ಳುತ್ತಿರುವುದು ಸ್ವಾಗತಾರ್ಹ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ನಂತರ ಮಾತನಾಡಿದ ಕಥೆ, ಚಿತ್ರಕಥೆ ರಚಿಸಿ, ನಿರ್ದೇಶನ ಮಾಡಿರುವ ಚೇತನ್ ಹನ್ವಿತ್, ಇದು ಪ್ರೀತಿ, ಭಯಾನಕತೆ, ನಿಗೂಢತೆ ಮತ್ತು ರೋಮಾಂಚಕತೆ ಒಳಗೊಂಡಿರುವ 8 ಭಾಗಗಳನ್ನು ಹೊಂದಿರುವ ವೆಬ್ ಸರಣಿಯಾಗಿದೆ. ಸಮಾಜದಲ್ಲಿ ತನ್ನ ಮೇಲೆ ನಡೆದ ಶೋಷಣೆ ವಿರುದ್ಧ ಓರ್ವ ಹೆಣ್ಣುಮಗಳು ನಡೆಸುವ ಹೋರಾಟವೇ ಈ ಚಿತ್ರದ ಮುಖ್ಯ ವಸ್ತು. ಆಕೆಗೆ ಕುಟುಂಬ, ಸಮಾಜ ನೆರವಿಗೆ ಬಾರದಿದ್ದರೂ ಒಂದು ಅತೀಂದ್ರಿಯ ಶಕ್ತಿ ಕೆಲಸ ಮಾಡುತ್ತದೆ. ಅದು ಯಾವುದು ಎಂಬುದೇ ಕೊನೆವರೆಗೂ ಕುತೂಹಲ ಉಳಿಸಿಕೊಂಡು ಹೋಗುವ ಕಥೆಯನ್ನು ಹೊಂದಿದೆ ಎಂದರು.

ಚಿತ್ರದ ಸಂಗೀತ ನಿರ್ದೇಶಕ ಪಿ.ನೀತು ನಿನಾದ್, ಛಾಯಾಗ್ರಾಹಕ ಸಂತೋಷ್ ದಯಾಲನ್, ಸಹಾಯಕ ನಿರ್ದೇಶಕ ವಿಲಾಸ್ ಆರ್.ಹೊಸೂರ್, ಚಿತ್ರದ ನಟರಾದ ಆರ್ಯನ್, ಗೌತಮ್, ಅಚ್ಚಪ್ಪ, ಸಾಗರ್, ರಾಘವೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ಸತ್ಯ, ಶುದ್ಧ ಕಾಯಕ ಮನುಷ್ಯನನ್ನು ದೈವತ್ವಕ್ಕೆ ಏರಿಸುತ್ತದೆ

ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳ ಪ್ರತಿಪಾದನೆ

ಮೈಸೂರು, ಮಾ.30–ಸತ್ಯ, ಶುದ್ಧವಾದ ಕಾಯಕ ಮನುಷ್ಯನನ್ನು ದೈವತ್ವಕ್ಕೆ ಏರಿಸುತ್ತದೆ ಎಂದು ನೆಲಮಂಗಲ ತಾಲೂಕು ಶಿವಗಂಗೆಯ ಶ್ರೀ ಹೊನ್ನಮ್ಮ ಗವಿಮಠದ ಶ್ರೀ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಪ್ರತಿಪಾದಿಸಿದ್ದಾರೆ.



ಮೈಸೂರು ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ವತಿಯಿಂದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ 'ಜ್ಞಾನ ವಾರಿಧಿ–69' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ "ಕಾಯಕದ ಮಹತ್ವ" ವಿಷಯ ಕುರಿತು ಉಪನ್ಯಾಸ ನೀಡುತ್ತಾ ಬಸವಾದಿ ಶರಣರು ಕಾಯಕದಲ್ಲೇ ಕೈಲಾಸವನ್ನು ಕಂಡವರು. 12ನೇ ಶತಮಾನದ ಆ ಶರಣರು ಹೊಸಯುಗಕ್ಕೆ ನಾಂದಿ ಹಾಡಿದರು ಎಂದರು.

ಸಮಾಜವನ್ನು ಸುಸ್ಥಿತಿಗೆ ತರುವ ಪ್ರಯತ್ನವನ್ನು ಮಾಡಿದರು. ಅಂದಿನ ಜನ ಭಾಷೆಯನ್ನು ದೈವಭಾಷೆಯನ್ನಾಗಿಸಿದರು. ಶರಣ ಸಾಹಿತ್ಯ ಕೇವಲ ಮೆದುಳಿನಿಂದ ಬಂದಿದ್ದಲ್ಲ. ಬದುಕಿನ ಪ್ರತಿ ಹಂತದಲ್ಲೂ ಅನುಭವಿಸಿದ ಅನುಭಾವಿಕ ಸಾಹಿತ್ಯ. ಪರಿಪೂರ್ಣವಾದ ವ್ಯಕ್ತಿತ್ವ ನಿರ್ಮಾಣ ಮಾಡುವಲ್ಲಿ ವಚನ ಸಾಹಿತ್ಯದ ಕೊಡುಗೆ ಬಹುದೊಡ್ಡದು. ಜಾಗತಿಕ ಮಟ್ಟದ ಎಲ್ಲ ಸಮಸ್ಯೆಗಳಿಗೂ ಇದರಲ್ಲಿ ಪರಿಹಾರವಿದೆ. 900 ವರ್ಷಗಳು ಕಳೆದರೂ ಅತ್ಯಂತ ಪ್ರಸ್ತುತ ಎನಿಸುವಷ್ಟು ವರ್ತಮಾನಕ್ಕೆ ಹತ್ತಿರವಾಗಿವೆ. ಸತ್ಯ, ಶುದ್ಧ ಮತ್ತು ಪ್ರಾಮಾಣಿಕವಾದ ಕೆಲಸವನ್ನು ಮಾಡಬೇಕು. ಸುಂದರ ಬದುಕಿಗೆ ಕಾಯಕ ಅತಿಮುಖ್ಯ. ಎಲ್ಲ ಕಾಯಕವೂ ಶ್ರೇಷ್ಠವಾದುದು ಎಂದು ಹೇಳಿದರು.

ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಯಿತು. ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸಿದ್ದರು. ಕು. ಭಾರತಿ ಮತ್ತು ಕು. ಭಾನುಮತಿ ಪ್ರಾರ್ಥಿಸಿದರು. ಸಿ.ಎಂ.ಯೋಗೀಶ್ ನಿರ್ವಹಿಸಿದರು.

ಪಿಎಸ್‌ಐ ನೇಮಕಾತಿಯಲ್ಲಿ ಯಾವ ಅಕ್ರಮವೂ ನಡೆದಿಲ್ಲ

ಬೆಂಗಳೂರು, ಮಾ.30(ಕೆಎಂಶಿ)– ಪಿಎಸ್‌ಐ



ನೇಮಕಾತಿಯಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ವಿಧಾನಪರಿಷತ್ತಿನಲ್ಲಿ ಸ್ಪಷ್ಟಪಡಿಸಿದ್ದಾರೆ.

ಶೂನ್ಯವೇಳೆಯಲ್ಲಿ ಅರವಿಂದಕುಮಾರ್ ಅರಳಿ ಪ್ರಸ್ತಾಪಕ್ಕೆ ಉತ್ತರಿಸಿದ ಸಚಿವರು, ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಬ್ಲೂಟೂಥ್ ಬಳಕೆ ಮಾಡಿ ಅಭ್ಯಾಸ ನಡೆಸುತ್ತಿದ್ದ ಮಾಹಿತಿ ಆಧರಿಸಿ ಬೆಳಗಾವಿ, ಕಲಬುರಗಿ ಸೇರಿ ಕೆಲವು ಕಡೆ ಹೋಟೆಲ್ ಮೇಲೆ ದಾಳಿ ನಡೆಸಿ ಹಲವರನ್ನು ವಶಕ್ಕೆ ಪಡೆಯಲಾಗಿದೆ. ಪರೀಕ್ಷೆ ಕೊಠಡಿಯಲ್ಲಿ ಬ್ಲೂಟೂಥ್ ಬಳಕೆಯಾಗಿಲ್ಲ. ಪರೀಕ್ಷಾ ಕೇಂದ್ರದ ಸುತ್ತ ಎರಡು ಹಂತದ ಬಿಗಿ ಕಾವಲು ಹಾಕಲಾಗಿತ್ತು ಎಂದು ಸ್ಪಷ್ಟಪಡಿಸಿದರು.

ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಹಣದ ವ್ಯವಹಾರವೂ ಇಲ್ಲ. ಪರೀಕ್ಷೆಯಲ್ಲಿ ನಕಲು ನಡೆದಿದೆ ಎಂಬುದು ಸತ್ಯಕ್ಕೆ ದೂರವಾಗಿದೆ. ಸದಸ್ಯರಿಗೆ ಕ್ಷೇತ್ರವಾರು ಫಲಿತಾಂಶ ಒದಗಿಸುತ್ತೇನೆ. ಒಂದೇ ಕ್ಷೇತ್ರದ ಹಾಗೂ ಒಂದೇ ಪರೀಕ್ಷಾ ಕೇಂದ್ರದ ಅಭ್ಯರ್ಥಿಗಳು ಹೆಚ್ಚಾಗಿ ಆಯ್ಕೆಯಾಗಿದ್ದಾರೆ ಎಂಬುದು ಸರಿಯಲ್ಲ ಎಂದರು.

ಏ.2ರಂದು ಪೊಲೀಸ್ ಧ್ವಜ ದಿನಾಚರಣೆ

ಮೈಸೂರು, ಮಾ.30– ಮೈಸೂರು ನಗರ ಪೊಲೀಸ್, ಮೈಸೂರು ಅಶ್ವಾರೋಹಿ ದಳ, ದಕ್ಷಿಣ ವಲಯದ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಜಿಲ್ಲಾ ಪೊಲೀಸ್, ಕೆ.ಎಸ್.ಆರ್.ಪಿ. 5 ನೇ ಪಡೆ, ಪೊಲೀಸ್ ತರಬೇತಿ ಶಾಲೆ, ರಾಜ್ಯ ಗುಪ್ತವಾರ್ತೆ, ಡಿಸಿಆರ್‌ಇ, ಲೋಕಾಯುಕ್ತ, ಎಸಿಬಿ, ಚೆಸ್ಕಾಂ, ಐಎಸ್‌ಡಿ ಸಂಯುಕ್ತ ಆಶ್ರಯದಲ್ಲಿ ಪೊಲೀಸ್ ಧ್ವಜ ದಿನಾಚರಣೆಯನ್ನು ಏ.2ರಂದು ಶನಿವಾರ ಬೆಳಗ್ಗೆ 8 ಗಂಟೆಗೆ ರೇಸ್ ಕೋರ್ಸ್ ಹಿಂಭಾಗದಲ್ಲಿರುವ ನಗರ ಸಶಸ್ತ್ರ ಮೀಸಲು ಪಡೆ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ತಿಳಿಸಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಪೊಲೀಸ್ ಅಧೀಕ್ಷಕ ಶಿವಕುಮಾರಯ್ಯ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯ ಅಂಗವಾಗಿ ವಂದನೆ ಸ್ವೀಕರಿಸುವರು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು,ಮಾ.30–ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ




ಅಧ್ಯಕ್ಷ ಎಂ.ಶಿವಣ್ಣ, ಏ.4 ಮತ್ತು 5ರಂದು ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಏ.4ರಂದು ಬೆಳಗ್ಗೆ 10 ಗಂಟೆಗೆ ಬನ್ನೂರು ಪುರಸಭೆಯಲ್ಲಿ ಪೌರಕಾರ್ಮಿಕರ ಮತ್ತು ಮುಖಂಡರೊಂದಿಗೆ ಚರ್ಚೆ ನಡೆಸಿ, ಬೆಳಗ್ಗೆ 11 ಗಂಟೆಗೆ ಬನ್ನೂರು ಪುರಸಭೆಯಲ್ಲಿ ಪೌರಕಾರ್ಮಿಕರ ಸಮಸ್ಯೆಗಳ ಕುರಿತು ಅಧಿಕಾರಿಗಳೊಡನೆ ಸಭೆ ನಡೆಸಿ ಮಧ್ಯಾಹ್ನ 12.30 ಕ್ಕೆ ಪತ್ರಿಕಾಗೋಷ್ಠಿ ನಡೆಸುವರು. ಅಂದು ಮಧ್ಯಾಹ್ನ 1.45 ಗಂಟೆಗೆ ವಡ್ಗಾಲ್ ರಂಗನಾಥ ಸ್ವಾಮಿ ಬೆಟ್ಟಕ್ಕೆ ಭೇಟಿ ನೀಡುವರು. ಸಂಜೆ 6 ಗಂಟೆಗೆ ಮೈಸೂರು ಜಲದರ್ಶಿನಿಯಲ್ಲಿ ವಾಸ್ತವ್ಯ ಹೂಡುವರು. ಏ.5ರಂದು ಮೈಸೂರಲ್ಲಿ ಜಿಲ್ಲಾಡಳಿತದಿಂದ ನಡೆಯುವ ಜಗಜೀವನರಾಂ ಕಾರ್ಯಕ್ರಮದಲ್ಲಿ ಉಸ್ತುವಾರಿ ಸಚಿವರೊಂದಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಜೆ 6 ಗಂಟೆಗೆ ಕೇಂದ್ರ ಸ್ಥಾನಕ್ಕೆ ಪ್ರಯಾಣ ಮಾಡುವರು.



ಮೈಸೂರು ನಜರ್‌ಬಾದ್‌ನ ಅಬ್ದುಲ್ ನಜೀರ್‌ಸಾಬ್ ಗ್ರಾಮೀಣಾಭಿವೃದ್ಧಿ ಸಂಸ್ಥೆ ಏರ್ಪಡಿಸಿದ್ದ ಎರಡು ದಿನಗಳ ನಾಗವಾಲ ಗ್ರಾಪಂ ಸದಸ್ಯರ ಕಂಪ್ಯೂಟರ್ ತರಬೇತಿ ಕಾರ್ಯಕ್ರಮವನ್ನು ನಾಗವಾಲ ಗ್ರಾಪಂ ಅಧ್ಯಕ್ಷ ಸಿ.ನರೇಂದ್ರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆ ನಿರ್ದೇಶಕಿ ಕೆ.ಲಕ್ಷ್ಮಿಪ್ರಿಯ, ಸಹಾಯಕ ನಿರ್ದೇಶಕ ಪದ್ಮಶೇಖರ ಪಾಂಡೆ, ಬೋಧಕರಾದ ಬಿ.ಕೆ.ಮನು, ಗಿರಿಧರ್, ತರಬೇತಿದಾರ ಕೃಷ್ಣ, ಗ್ರಾಪಂ ಕಾರ್ಯದರ್ಶಿ ಯಶ್ವಂತ್, ಗ್ರಾಪಂ ಸದಸ್ಯರಾದ ಆಶಾ ಸೋಮಣ್ಣ, ಗೌರಮ್ಮ ಮಾಲೇಗೌಡ ಇತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.03.2022 ಗುರುವಾರ, ಮಳೆ ನಕ್ಷತ್ರ: ರೇವತಿ 31.03.2022ರಿಂದ 13.04.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ಚತುರ್ದಶಿ, ನಕ್ಷತ್ರ: ಪೂಭಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು:** 14ನೇ ಪದವೀಧರರ ದಿನಾಚರಣೆ, ಮುಖ್ಯ ಅತಿಥಿಗಳು: ಹಿಮಾಚಲ ಪ್ರದೇಶದ ಶಿಮಾ ಬ್ರಹ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ನಾಗೇಂದ್ರ ಪರಾಶರ್, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಬೆಟಸೂರಮಠ, ಉಪಸ್ಥಿತಿ: ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ. ಬಿ.ವಿ.ಸಾಂಬಶಿವಯ್ಯ, ಪ್ರಾಚಾರ್ಯ ಪ್ರೊ.ವಿಜಯಕುಮಾರ್, ಸ್ಥಳ: ಕಾಲೇಜಿನ ಆವರಣ, ಸಮಯ: ಬೆಳಗ್ಗೆ 10.30ಕ್ಕೆ

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಉತ್ತರಾದಿ ಮಠ :** ಶ್ರೀ ಸತ್ಯಸಂತುಷ್ಟ ತೀರ್ಥರ ಆರಾಧನಾ ಮಹೋತ್ಸವ, ಶ್ರೀಮನ್ ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಉತ್ತರಾದಿ ಮಠಾಧೀಶ ಶ್ರೀ ಸತ್ಯಾತ್ಮತೀರ್ಥರ ವರ್ಧಂತಿ ಉತ್ಸವ, ಸಂಜೆ 5ಕ್ಕೆ ಶ್ರೀ ಸತ್ಯಾತ್ಮತೀರ್ಥರಿಗೆ ಪೂರ್ಣಕುಂಭ ಸ್ವಾಗತ, ಅರಮನೆ ಆವರಣದ ಶ್ರೀ ವರಹಾ ಸ್ವಾಮಿ ದೇಗುಲದಿಂದ ಅಗ್ರಹಾರದ ಉತ್ತರಾದಿ ಮಠದವರೆಗೆ, ಸಂಜೆ 6ಕ್ಕೆ ಪಂಡಿತರಿಂದ ಉಪನ್ಯಾಸ, ಸಂಜೆ 6.30ಕ್ಕೆ ಬೆಂಗಳೂರಿನ ಖ್ಯಾತ ಗಾಯಕ ಪಂಡಿತ್ ಜಯತೀರ್ಥ ಮೇವುಂಡಿ ಅವರಿಂದ ದಾಸರ ಪದಗಳ ಗಾಯನ, ಸಂಜೆ 7ಕ್ಕೆ ಶ್ರೀ ಸತ್ಯಾತ್ಮ ತೀರ್ಥರಿಂದ ವಿಶೇಷ ಪ್ರವಚನ, ಸ್ಥಳ: ಶ್ರೀ ಉತ್ತರಾದಿ ಮಠ, ಅಗ್ರಹಾರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳೀಮಠ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಡಿ. ಪುರುಷೋತ್ತಮ್, ಎಸ್. ಸಂಗೀತಾ, ವ್ಯಾಖ್ಯಾನ– ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ ಸ್ವಾತಂತ್ರ್ಯ ಚಳವಳಿಯ ಪಯಣ–ಆಕಾಶವಾಣಿಯೊಂದಿಗೆ, 10.00 ಕೆ.ಎಸ್. ಹೇರಂಭ ಮತ್ತು ಕೆ.ಎಸ್. ಹೇಮಂತ–ಯುಗಳ ವೇಣುವಾದನ, 10.30 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, ವಿಷಯ– ಬೇಸಿಗೆ ಸಮಯದಲ್ಲಿ ಮಕ್ಕಳಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳು ಮತ್ತು ಪರಿಹಾರ. ಭಾಗವಹಿಸುವ ತಜ್ಞರು– ಡಾ. ಚೇತನ್ ಬಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳೀಮಠ್ ಮತ್ತು ಕೆ.ಬಿ. ಮೀನಾ, 1.20 ಭಾವಗೀತೆ – ವೃಂದಗಾನ, 3.00 'ರಾಗಲಹರಿ' ಒಂದೇ ರಾಗಾಧಾರಿತ ಕೃತಿಗಳನ್ನು ಕೇಳಿಸುವ ಸರಣಿ ಕಾರ್ಯಕ್ರಮ, 4.00 ವೃತ್ತಿ ಮಾರ್ಗದರ್ಶನ, ಫಿಸಿಕ್ಸ್ ಅಂದರೆ ಭೌತಶಾಸ್ತ್ರ ವಿಷಯದಲ್ಲಿ ಲಭ್ಯವಿರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು, 6.50 ಕೃಷಿರಂಗ–ಕಿಸಾನ್ ವಾಣಿ, 9.30 ಯುವವಾಣಿ–ಭರತ ನಾಟ್ಯ "ಅಂದು ಇಂದು", ಮಾತನಾಡುತ್ತಾರೆ ಸಿಂಧು ವಿ.ಆಚಾರ್ಯ, ಪ್ರಿಯಾಂಕ ಪಲ್ಲೇದ್ ಅವರಿಂದ ಸ್ವರಚಿತ ಕವನ ವಾಚನ, 10.00 ನಾಟಕ "ಅಂಚು ಕತ್ತರಿಸಿದ ಕಾಗದ", ಮೂಲಕಥೆ– ಜಿ.ಕೆ. ಚೆಸ್ಟರ್ ಟನ್, ಕನ್ನಡ ಬಾನುಲಿ ನಾಟಕ ರೂಪಾಂತರ–ಶ್ರೀನಿವಾಸ ಪ್ರಸಾದ್, ನಿರ್ಮಾಣ– ಪ್ರಭುಸ್ವಾಮಿ ಮಳೀಮಠ್, 10.30 ಸವಿನೆನಪು

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿಂದು

■ **ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ :** ಬೆಳಗ್ಗೆ ಮಹಾಭಿಷೇಕ, ಮಹಾಮಂಗಳಾರತಿ, ದ್ವಾದಶಾ ರಾಧನಾ, ಪುಷ್ಪಯಾಗ, ಧ್ವಜಾರೋಹಣ, ಉಧ್ವಾಸನ ಪ್ರಬಂಧ ಸೇವೆ ಸೇತೂ ಸೇವೆ ಮೂಕಬಲಿ, ಸ್ಥಳ: ದೇವಸ್ಥಾನ.



ಕುಮಾರಸ್ವಾಮಿಗೆ ಪಿಹೆಚ್.ಡಿ

ಮೈಸೂರು, ಮಾ.30–ಡಾ.ಜೆ.ಸೋಮಶೇಖರ್ ಮಾರ್ಗದರ್ಶನದಲ್ಲಿ ಕುಮಾರಸ್ವಾಮಿ ಅಂಬೇಡ್ಕರ್ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ

43ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 42 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 43ನೇ ವರ್ಷಕ್ಕೆ ಪಾದಾರ್ಪಣೆಗೈಯ್ಯುವ ಈ ಸುಸಂದರ್ಭದಲ್ಲಿ 16–04–2022 (ಶನಿವಾರ)ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರನ್ನು ಬೆಳಕಿಗೆ ತರುವುದು ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

- ಪ್ರಥಮ ಬಹುಮಾನ : ರೂ. 6,000
- ದ್ವಿತೀಯ ಬಹುಮಾನ : ರೂ. 5,000
- ತೃತೀಯ ಬಹುಮಾನ : ರೂ. 4,000
- ಪ್ರೋತ್ಸಾಹಕ ಬಹುಮಾನಗಳು (ಎರಡು) : ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಇ–ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗಲು) ಮೀರದಂತಿರಬೇಕು. ಅನುವಾದ–ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು–ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಫುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ
31–03–2022

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ
ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–570 015
ದೂರವಾಣಿ: 2496520, 2496521, 2496526, 2496527

ಮೈಸೂರು–ಬೆಂಗಳೂರು ದಶಪಥ ಎಕ್ಸ್‌ಪ್ರೆಸ್‌ವೇಯಲ್ಲಿ
ಇದೇ ಅಕ್ಟೋಬರ್‌ನಿಂದ ಟೋಲ್ ಸಂಗ್ರಹ

ಮೈಸೂರು,ಮಾ.30(ಆರ್‌ಕೆ)– ಮೈಸೂರು–ಬೆಂಗಳೂರು 10 ಪಥ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಕಡೆ ಟೋಲ್ ಸಂಗ್ರಹಕ್ಕೆ ಪ್ಲಾಜಾ(ಕೌಂಟರ್)ಗಳನ್ನು ನಿರ್ಮಿಸಲಾಗುತ್ತಿದೆ. ದಶಪಥ ಎಕ್ಸ್‌ಪ್ರೆಸ್‌ವೇ (ಎನ್‌ಹೆಚ್–275)ಅನ್ನು ಎಕನಾಮಿಕಲ್ ಕಾರಿಡಾರ್ ಆಗಿ ನಿರ್ಮಾಣ ಮಾಡುವ ಕಾಮಗಾರಿ ಭರದಿಂದ ನಡೆಯುತ್ತಿದ್ದು, 2022ರ ಅಕ್ಟೋಬರ್ ಮಾಹೆಯೊಳಗೆ ಪೂರ್ಣಗೊಳ್ಳಲಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಹೆಚ್‌ಎಐ) ಅಧಿಕಾರಿಗಳು ತಿಳಿಸಿದ್ದಾರೆ. 8,350 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 117 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್‌ವೇನಲ್ಲಿ ಮೈಸೂರು–ಬೆಂಗಳೂರು ನಡುವೆ ಕೇವಲ 75 ನಿಮಿಷಗಳಲ್ಲಿ ತಲುಪಬಹುದಾಗಿದೆ.

ಈ ರಾಷ್ಟ್ರೀಯ ಹೆದ್ದಾರಿಯಲ್ಲಿ ಎರಡು ಕಡೆ ವಾಹನಗಳಿಂದ ಟೋಲ್ ಸಂಗ್ರಹಿಸಲು ಸುವಿಶಾಲ ಕೌಂಟರ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಏಕ ಕಾಲದಲ್ಲಿ 8 ವಾಹನಗಳ ಶುಲ್ಕ ಸಂಗ್ರಹಿಸಲು ವ್ಯವಸ್ಥೆ ಮಾಡಲಾಗಿದೆಯಲ್ಲದೇ ವೈಜ್ಞಾನಿಕವಾಗಿ **Fastag** ಸೌಲಭ್ಯಕ್ಕೆ ಅವಕಾಶ ಕಲಿಸಲಾಗುತ್ತದೆ.



ಮೈಸೂರು ಭಾಗದಲ್ಲಿ ಶ್ರೀರಂಗಪಟ್ಟಣದ ನಂತರ ಕೆ.ಶೆಟ್ಟಿಹಳ್ಳಿ ಸಮೀಪ ಗಣಂಗೂರು ಮತ್ತು ಕೋಡಿ ಶೆಟ್ಟಿಪುರ ನಡುವೆ ಒಂದು ಹಾಗೂ ಬೆಂಗಳೂರು ಕಡೆಯಿಂದ ಬಿಡದಿ ಸಮೀಪ ಕೇಣಮಿಣಕಿ ಗ್ರಾಮದ ಬಳಿ ಮತ್ತೊಂದು ಟೋಲ್ ಕೌಂಟರ್ ನಿರ್ಮಾಣವಾಗುತ್ತಿದ್ದು, ಮೈಸೂರಿನಿಂದ ಹೋಗುವಾಗ ಹಾಗೂ ಬೆಂಗಳೂರಿನಿಂದ ಬರುವಾಗ ಎರಡೂ ಮಾರ್ಗದಲ್ಲೂ ಟೋಲ್ ವಸೂಲು ಮಾಡಲಾಗುತ್ತದೆ.

ಮೈಸೂರು– ಬೆಂಗಳೂರು ದಶಪಥ

ಶ್ರೀರಂಗಪಟ್ಟಣ, ಬಿಡದಿ ಸಮೀಪ ಟೋಲ್ ಕೌಂಟರ್ ನಿರ್ಮಾಣ

ನ್ಯಾಷನಲ್ ಹೈವೇ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ನಂತರ ಅದರ ಖರ್ಚು ಹಾಗೂ ನಿರ್ವಹಣಾ ವೆಚ್ಚವನ್ನು ಆಧರಿಸಿ ಈ ಎಕ್ಸ್‌ಪ್ರೆಸ್ ವೇನಲ್ಲಿ ವಾಹನಗಳಿಗೆ ಟೋಲ್ ನಿರ್ಧರಿಸಲಾಗುವುದು ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ. ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರವಷ್ಟೇ ಟೋಲ್ ಸಂಗ್ರಹಿಸಲು ಟೆಂಡರ್ ಮೂಲಕ ಏಜೆನ್ಸಿಗಳಿಗೆ ಅವಕಾಶ ನೀಡಲಾಗುವುದು. ಈಗಾಗಲೇ ನಂಜನಗೂಡು ರಸ್ತೆ, ತಿ.ನರಸೀಪುರ ರಸ್ತೆ, ಗುಂಡ್ಲುಪೇಟೆ ಬಳಿಯ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ವಸೂಲಿ ಕೌಂಟರ್‌ಗಳಲ್ಲಿ ವಾಹನಗಳಿಂದ ಶುಲ್ಕ ಸಂಗ್ರಹಿಸಲಾಗುತ್ತಿದೆ.

ಸುಪ್ರೀಂಕೋರ್ಟ್ ಭೌತಿಕ ವಿಚಾರಣೆ ಏ.4ರಿಂದ ಶುರು: ಸಿಜೆಐ ಎನ್.ವಿ.ರಮಣ



ನವದೆಹಲಿ,ಮಾ.30–ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ಸುಪ್ರೀಂ ಕೋರ್ಟ್ ವಿಚಾರಣೆಗಳು ಏ.4ರಿಂದ ಭೌತಿಕವಾಗಿ ನಡೆಯಲಿದೆ ಎಂದು ತಿಳಿಸಿದ್ದಾರೆ. ಇದುವರೆಗೂ ಸುಪ್ರೀಂ ಕೋರ್ಟ್ ವಿಚಾರಣೆಗಳು ವರ್ಚುವಲ್ ಆಗಿ ನಡೆಯುತ್ತಿದ್ದವು. ಕೊರೊನಾ ಕಾರಣದಿಂದಾಗಿ ಸರ್ವೋಚ್ಚ ನ್ಯಾಯಾಲಯದ ವಿಚಾರಣೆಗಳು ವರ್ಚುವಲ್ ಮಾದರಿಗೆ ಶಿಫ್ಟ್ ಆಗಿದ್ದವು. ಇದೀಗ ಪೂರ್ಣ ಪ್ರಮಾಣದಲ್ಲಿ ವಿಚಾರಣೆಗಳು ಕೊರೊನಾ ಪೂರ್ವಕಾಲದಲ್ಲಿದ್ದಂತೆ ನ್ಯಾಯಾಲಯದಲ್ಲೇ ಭೌತಿಕವಾಗಿ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ. ವಕೀಲರು ಬಯಸಿದಲ್ಲಿ ಸೋಮವಾರ ಹಾಗೂ ಶುಕ್ರವಾರ ವರ್ಚುವಲ್ ವಿಚಾರಣೆಗೆ ಅವಕಾಶವಿದೆ ಎಂದರು.

ಮೈಸೂರಿನ ದೇವರಾಜ ಎಸಿಪಿ ಶಶಿಧರ್ ಸೇರಿ ಹಲವರಿಗೆ ಸಿಎಂ ಪದಕ



ಎಂ.ಎನ್.ಶಶಿಧರ್



ಎನ್.ಅನಿಲ್‌ಕುಮಾರ್



ಪಿ.ಕುಮಾರ್

ಮೈಸೂರು, ಮಾ.30(ಆರ್‌ಕೆ)–ಮೈಸೂರು ನಗರದ ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್, ಸೆನ್ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಎನ್.ಅನಿಲ್ ಕುಮಾರ್ ಸೇರಿದಂತೆ ಹಲವು ಅಧಿಕಾರಿಗಳು, ಸಿಬ್ಬಂದಿಗೆ 2021ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಲಭಿಸಿದೆ. ಮೇಟಗಳ್ಳಿ ಠಾಣೆ ಹೆಡ್ ಕಾನ್‌ಸ್ಟೇಬಲ್ ಪಿ.ಕುಮಾರ್, ಪಿರಿಯಾಪಟ್ಟಣ ಠಾಣೆ ಕಾನ್‌ಸ್ಟೇಬಲ್ ಅಸ್ಲಂಪಾಷ, ಮಂಡ್ಯ ಜಿಲ್ಲೆ, ಬೆಸಗರಹಳ್ಳಿ ಠಾಣೆ ಹೆಡ್ ಕಾನ್‌ಸ್ಟೇಬಲ್ ಆರ್.ಪ್ರಭುಸ್ವಾಮಿ, ಮಡಿಕೇರಿ ಡಿಎಆರ್ ಹೆಡ್ ಕಾನ್‌ಸ್ಟೇಬಲ್ ವಿ.ಆರ್.ದಿಲೀಪ್ ಸೇರಿದಂತೆ ರಾಜ್ಯದಾದ್ಯಂತ 135 ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಮುಖ್ಯಮಂತ್ರಿಗಳ ಪದಕ ನೀಡಲು ಅನುಮೋದನೆಯಾಗಿದೆ.

ತಿಪಟೂರು ತಾಲೂಕು, ಮಾವಿನಹಳ್ಳಿ ಗ್ರಾಮದವರಾದ ಎಂ.ಎನ್.ಶಶಿಧರ್ ಅವರು ಎಂ.ಎಸ್ಸಿ. ಪದವೀಧರರಾಗಿದ್ದು, 1994ರಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿ ಪೊಲೀಸ್ ಇಲಾಖೆಗೆ ಸೇರಿ ತುಮಕೂರು, ಕಾರವಾರ ಜಿಲ್ಲೆಗಳಲ್ಲಿ ಸೇವೆ ಸಲ್ಲಿಸಿದ ಬಳಿಕ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಹೊಂದಿ ಮಂಡ್ಯ, ದಾವಣಗೆರೆ, ಹಾಸನ, ಮಂಗಳೂರು ಹಾಗೂ ಹುಣಸೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದರು.

ಡಿವೈಎಸ್ಪಿಯಾಗಿ ಮುಂಬಡ್ತಿ ಪಡೆದ ಶಶಿಧರ, ಹಾಸನ, ಸಕಲೇಶಪುರದಲ್ಲಿ ಸೇವೆ ಸಲ್ಲಿಸಿದ್ದು, ಕಳೆದ ಎರಡೂವರೆ ವರ್ಷಗಳಿಂದ ಮೈಸೂರು ನಗರದ ದೇವರಾಜ ಉಪವಿಭಾಗದ ಎಸಿಪಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಪದವೀಧರ ಕ್ಷೇತ್ರ ಚುನಾವಣೆ: ಚಳವಳಿಗಾರರ ಬೆಂಬಲಿತ ಅಭ್ಯರ್ಥಿ ಪ್ರಸನ್ನ ಎನ್.ಗೌಡ ಸ್ಪರ್ಧೆ



ಮೈಸೂರು,ಮಾ.30(ಎಸ್‌ಬಿಡಿ)–ಮುಂಬರುವ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಚಳವಳಿಗಾರರ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಲಿರುವ ಪ್ರಸನ್ನ ಎನ್.ಗೌಡ ಅವರ ಗೆಲುವಿಗೆ ಸಹಕರಿಸುವಂತೆ ಸಂಘಟನೆಗಳ ಮುಖಂಡರು ಮನವಿ ಮಾಡಿದ್ದಾರೆ.

ಕರ್ನಾಟಕ ರಾಜ್ಯ ರೈತ ಸಂಘದ ಬೆಂಬಲಿತ ಅಭ್ಯರ್ಥಿಯಾಗಿ ಪ್ರಸನ್ನ ಎನ್.ಗೌಡ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಇದಕ್ಕೆ ದಲಿತ ಸಂಘರ್ಷ ಸಮಿತಿ ಸಂಘಟನೆಗಳ ಜಂಟಿ ವೇದಿಕೆ (ದಸಂಸ ಒಕ್ಕೂಟ)ಯ ರಾಜ್ಯ ಸಮಿತಿ ಸಂಪೂರ್ಣ ಬೆಂಬಲ ನೀಡಿದೆ. ದುಡಿಯುವ ವರ್ಗದ ಹಿತಾಸಕ್ತಿ ರಕ್ಷಣೆಗಾಗಿ, ಜನಪರ ಹಾಗೂ ಪ್ರಗತಿಪರ ಚಳವಳಿಗಳ ಆಶಯಗಳಿಗೆ ಪೂರಕವಾಗಿ ಪ್ರಸನ್ನ ಎನ್.ಗೌಡ ಕಳೆದ 10 ವರ್ಷಗಳಿಂದ ರೈತ ಸಂಘದ ಹೋರಾಟದಲ್ಲಿ ಸಕ್ರಿಯರಾಗಿದ್ದಾರೆ. ದಲಿತರು, ಕಾರ್ಮಿಕರು, ವಿದ್ಯಾರ್ಥಿಗಳು, ಯುವಕರು ಹಾಗೂ ಮಹಿಳೆಯರ ಹೋರಾಟಗಳಿಗೆ ಬೆಂಬಲವಾಗಿ ನಿಂತಿದ್ದಾರೆ. ಈ ಹಿನ್ನೆಲೆಯಲ್ಲಿ ಹಲವು ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿವೆ ಎಂದು ರೈತ ಸಂಘ ಹಾಗೂ ದಸಂಸ ಒಕ್ಕೂಟದ ಮುಖಂಡರು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಸಂಸ ರಾಜ್ಯ ಸಂಚಾಲಕ ಗುರುಪ್ರಸಾದ್ ಕೆರಗೋಡು ಮಾತನಾಡಿ, ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಮುಖಂಡರ ಸಾಂಘಿಕ ಪ್ರಯತ್ನದಿಂದ ಪ್ರಸನ್ನ ಎನ್.ಗೌಡ ಅವರನ್ನು ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿದ್ದು, ಗೆಲ್ಲುತ್ತಾರೆಂಬ ಅಚಲ ವಿಶ್ವಾಸವಿದೆ ಎಂದರು.

ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ದೆಹಲಿಯಿಂದ ಗ್ರಾಮ ಪಂಚಾಯಿತಿವರೆಗೂ ಕಾರ್ಪೋರೇಟ್ ಪೋಷಿತ ರಾಜಕಾರಣ ನಡೆಯುತ್ತಿದೆ. ಶ್ರಮಿಕರ ವಿರೋಧಿ ಮಸೂದೆಗಳನ್ನು ಸಂಸತ್‌ನಲ್ಲಿ ವಿರೋಧಿಸುವ ಶಕ್ತಿ ವಿರೋಧ ಪಕ್ಷಗಳಿಗಿಲ್ಲ. ಈ ಮೂಲಕ ಎಡಪಕ್ಷಗಳ ಹೊರತಾಗಿ ಉಳಿದ ಪಕ್ಷಗಳು ಹೊಸ ಆರ್ಥಿಕ ನೀತಿಯಲ್ಲಿ ಪಾಲುದಾರರಾಗಿವೆ. ಉದ್ಯೋಗ ಹಕ್ಕು(Right to employment) ಕಾಯ್ದೆ ಜಾರಿಯಾಗಬೇಕು. ಪದವೀಧರ ಕ್ಷೇತ್ರದ ಚುನಾವಣೆ ಪಕ್ಷಾತೀತ ಹಾಗೂ ಚಿಹ್ನೆ ರಹಿತವಾಗಿ ನಡೆಯಲಿದ್ದು, ಪದವೀಧರರು ಪ್ರಸನ್ನ ಎನ್.ಗೌಡರನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದರು. ದಸಂಸ ರಾಜ್ಯ ಸಂಯೋಜಕರಾದ ವಿ.ನಾಗರಾಜ್, ಹೆಚ್.ಎನ್.ಅಣ್ಣಯ್ಯ, ಜಿಲ್ಲಾ ಸಂಚಾಲಕರಾದ ಬೆಟ್ಟಯ್ಯ ಕೋಟೆ, ಆಲಗೂಡು ಶಿವಕುಮಾರ್, ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ, ಕರ್ನಾಟಕ ದಲಿತ ಸಂಘರ್ಷ ಸಮಿತಿ ದಮ್ಮಹಳ್ಳಿ ಸೋಮಣ್ಣ, ಪ್ರಸನ್ನ ಎನ್.ಗೌಡ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಮಾಸ್ತರರು : (ವಿದ್ಯಾರ್ಥಿಗಳನ್ನು ಕುರಿತು) "ಚಿಕ್ಕಂದಿನಲ್ಲಿ ನಾನು ಮಹಾ ಬುದ್ಧಿವಂತ ವಿದ್ಯಾರ್ಥಿಯಾಗಿದ್ದೆ. ನೀವೂ ಇದ್ದೀರಾ ಮುದ್ದೆ ಹೊಡೆಯೋಕೆ ಲಾಯಕ್ಕು"

ವಿದ್ಯಾರ್ಥಿಯೋರ್ವ: "ನಿಮಗಾಗ ಬುದ್ಧಿವಂತ ಮಾಸ್ತರರು ಸಿಕ್ಕಿದ್ರು, ಆದ್ರೆ ನಮಗಿಲ್ಲವಲ್ಲ ಸಾರ್!"

ಮೈಸೂರು ಮಿತ್ರ

ಗುರುವಾರ, 31 ಮಾರ್ಚ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ


ಅನುಭವವೇ ಬುದ್ಧಿವಂತಿಕೆ, ಮುಖ್ಯ ಸ್ನೇಹಿತ –ಚಾಣಕ್ಯ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆದದ್ದೇ ಒಂದು ಅಂದುಕೊಂಡದ್ದೇ ಒಂದು

ನಿಮ್ಮ ಪತ್ರಗಳು

ಮೈಸೂರಿನ ಸಿಟಿ ಬಸ್ ನಿಲ್ದಾಣದ ರಸ್ತೆ ಸರಿಪಡಿಸಿ



ಮಾನ್ಯರೆ,

ಮೈಸೂರು ನಗರ ಬಸ್ ನಿಲ್ದಾಣದಲ್ಲಿ ಬಸ್ ನಿಲುಗಡೆ ಸ್ಥಳ ಹಾಳಾಗಿದ್ದು, ಅಲ್ಲಲ್ಲಿ ಚಿಕ್ಕ ಚಿಕ್ಕ ಗುಂಡಿಗಳಿವೆ. ಮಳೆ ಬಂದರೆ ಈ ಗುಂಡಿಗಳಲ್ಲಿ ನೀರು ತುಂಬಿಕೊಂಡು ಸಾರ್ವಜನಿಕರು, ವಿದ್ಯಾರ್ಥಿಗಳು ಓಡಾಡಲು ಸಮಸ್ಯೆಯಾಗುತ್ತದೆ. ಬೇಸಿಗೆ ಕಾಲದಲ್ಲಿ ಧೂಳುಮಯವಾಗಿರುತ್ತದೆ. ಮಳೆಗಾಲದಲ್ಲಿ ಬಸ್ ಸಂಚರಿಸುವ ವೇಳೆ ನೀರು ಸಾರ್ವಜನಿಕರಿಗೆ ಎರಚುವುದುಂಟು. ನಗರದ ಹೃದಯ ಭಾಗದಲ್ಲಿರುವ ಬಸ್ ನಿಲ್ದಾಣದ ಪರಿಸ್ಥಿತಿಯೇ ಈ ರೀತಿಯಾದರೆ ಬೇರೆ ಬೇರೆ ರಸ್ತೆಗಳ ಪರಿಸ್ಥಿತಿ ಹೇಗಿರಬೇಕು ಯೋಚಿಸಿ. ಮೈಸೂರು ನಗರ ಸ್ವಚ್ಛ ನಗರಿ, ಸಾಂಸ್ಕೃತಿಕ ನಗರಿ ಎಂದು ಪ್ರಸಿದ್ಧಿ ಪಡೆದಿದ್ದು, ಹೆಚ್ಚಿನ ಪ್ರವಾಸಿಗರನ್ನು ಆಕರ್ಷಿಸಲು ನಗರ ಬಸ್ ನಿಲ್ದಾಣ ಹಾಗೂ ರಸ್ತೆಗಳನ್ನು ದುರಸ್ತಿಪಡಿಸಬೇಕಿದೆ. ಇದರಿಂದ ಪ್ರವಾಸೋದ್ಯಮ ಅಭಿವೃದ್ಧಿಯಾಗುತ್ತದೆ. ಇದರ ಬಗ್ಗೆ ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳು ಗಮನಹರಿಸಿ ಬಸ್ ನಿಲ್ದಾಣ, ರಸ್ತೆಗಳನ್ನು ದುರಸ್ತಿಪಡಿಸಬೇಕೆಂದು ಮನವಿ.

–ಎನ್.ಭವಾನಿ, ಮಹಾರಾಣಿ ಕಲಾ ಕಾಲೇಜು, ಮೈಸೂರು.

ಜಾತಿ ಧರ್ಮದ ಯುದ್ಧ ಬೇಡ

ಮಾನ್ಯರೆ,

ಪ್ರತಿಯೊಬ್ಬರೂ ಜೀವನೋಪಾಯಕ್ಕಾಗಿ ಹಲವಾರು ವಿಷಯಗಳನ್ನು ಅಳವಡಿಸಿಕೊಂಡಿರುತ್ತಾರೆ. ಇದು ಅವರಿಗೆ ಬಿಟ್ಟ ವಿಷಯ. ಆದರೆ ಇಂದು ಧರ್ಮಕ್ಕೂ ವೃತ್ತಿ ಕಂಟಕವಾಗಿದೆ. ಈಗಾಗಲೇ ಎಲ್ಲೆಡೆ ಜಾತ್ರೆಯ ಸಂಭ್ರಮ ಆರಂಭವಾಗಿದೆ. ಜಾತ್ರೆ ವ್ಯಾಪಾರ ಕುಟುಂಬ ಜೀವನಕ್ಕೆ ಆಧಾರವಾಗಿದೆ. ಆದರೆ ಕರಾವಳಿಯಲ್ಲಿ ಧರ್ಮದ ದಳ್ಳುರಿ ತಲೆ ಎತ್ತಿದೆ. ಧರ್ಮಗಳ ನಡುವೆ ವಿರಸ ಎಲ್ಲಾ ಜಿಲ್ಲೆಗಳಿಗೂ ವ್ಯಾಪಕವಾಗುತ್ತಿದೆ. ಧರ್ಮಗಳ ನಡುವೆ ತಡೆಗೋಡೆ ತಲೆ ಎತ್ತಿದೆ. ವ್ಯಾಪಾರಕ್ಕೆ ಜಾತಿ ಸಮಸ್ಯೆ ಉದ್ಭವಿಸುವುದಿಲ್ಲ. ಆದರೆ ಹಿಂದೂ ದೇವಾಲಯಗಳ ಮುಂದೆ ಮುಸ್ಲಿಮರಿಗೆ ವ್ಯಾಪಾರಕ್ಕೆ ಬೇಲಿ ಹಾಕಿದ್ದಾರೆ. ಈ ಧರ್ಮದ ವ್ಯಾಪಾರದ ಯುದ್ಧ ಜನರಲ್ಲಿ ಜಾತಿ ಸಮಸ್ಯೆ ತಂದೊಡ್ಡಿ ಸಮಾಜದಲ್ಲಿ ಶಾಂತಿ ಕದಡುವ ಯತ್ನ ನಡೆಯುತ್ತಿದೆ. ದೇಗುಲದ ಆಡಳಿತ ಮಂಡಳಿಯವರು ಧರ್ಮ ವಿರೋಧಿಯಾಗದೆ ಶಾಂತಿ ಸುವ್ಯವಸ್ಥೆಗೆ ಧಕ್ಕೆ ಬರದಂತೆ ನೋಡಿಕೊಳ್ಳಬೇಕಿದೆ. ಸಮಾಜದಲ್ಲಿ ಅಹಿತಕರ ಘಟನೆಗೆ ಕಾರಣವಾಗಬಾರದು. ಇದರಲ್ಲಿ ಎಲ್ಲರ ಹಿತ ಅಡಗಿದೆ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಲಂಕೆಯಲ್ಲಿ ಬಿಗಡಾಯಿಸಿರುವ ಆರ್ಥಿಕ ಪರಿಸ್ಥಿತಿ

ಮಾನ್ಯರೆ,

ನಮ್ಮ ನೆರೆಯ ದ್ವೀಪ ರಾಷ್ಟ್ರವಾದ ಶ್ರೀಲಂಕಾದಲ್ಲಿನ ಆರ್ಥಿಕ ಪರಿಸ್ಥಿತಿ ದಿನೇ ದಿನೇ ಬಿಗಡಾಯಿಸುತ್ತಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ. ಒಂದು ಕಾಲದಲ್ಲಿ ಅತ್ಯಂತ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಶ್ರೀಲಂಕಾ ಪ್ರವಾಸೋದ್ಯಮದಲ್ಲಿ ಒಳ್ಳೆಯ ಹೆಸರು ಗಳಿಸಿತ್ತು. ಆದರೆ ಈಗ ಆ ದೇಶದಲ್ಲಿ ಮುದ್ರಣ ಕಾಗದಕ್ಕೂ ಬರ ಉಂಟಾಗಿದ್ದು ಮಕ್ಕಳ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಹಾಗೆಯೇ ಇರುವ ಎರಡು ದಿನಪತ್ರಿಕೆಗಳು ತಮ್ಮ ಮುದ್ರಣವನ್ನು ಸ್ಥಗಿತಗೊಳಿಸಿವೆ. ದೇಶದಲ್ಲಿ ಹಣದುಬ್ಬರ ಹೆಚ್ಚಾಗಿ, ಲಂಕಾ ಹಣದ ಮೌಲ್ಯ ಕುಸಿದಿದೆ. ಅಕ್ಕಿ, ಬೇಳೆ ಮುಂತಾದವುಗಳ ಬೆಲೆ ಗಗನ ಮುಟ್ಟಿದೆ. ಒಂದು ಕೆಜಿ ಅಕ್ಕಿಯ ಬೆಲೆ 500 ರೂಪಾಯಿ, ಕಾಫಿ ಪುಡಿ ಒಂದು ಕೆಜಿ ಬೆಲೆ 300 ರೂಪಾಯಿ ಆಗಿದೆ. ಪೆಟ್ರೋಲ್ ಹಾಗೂ ಡೀಸೆಲ್‌ಗಳು ಸಿಗುವುದೇ ಇಲ್ಲ ಈ ರೀತಿ ಬೆಲೆ ಏರಿಕೆಯಿಂದ ತತ್ತರಿಸಿರುವ ಈ ದ್ವೀಪ ರಾಷ್ಟ್ರದಿಂದ ಅಲ್ಲಿನ ಜನ, ಭಾರತ ಸೇರಿದಂತೆ ಬೇರೆ ಬೇರೆ ದೇಶಗಳಿಗೆ ಗುಳೆ ಹೋಗುತ್ತಿದ್ದಾರೆ. ಅಲ್ಲಿನ ರಾಷ್ಟ್ರಪತಿ ಗೋಟಬಯ್ಯ ರಾಜಪಕ್ಸೆ, ಪರಿಸ್ಥಿತಿಯನ್ನು ನಿಭಾಯಿಸಲು ದೇಶದಲ್ಲಿ ಆರ್ಥಿಕ ತುರ್ತುಪರಿಸ್ಥಿತಿ ಘೋಷಿಸಿದ್ದಾರೆ ಹಾಗೂ ನೆರೆಯ ದೇಶಗಳಿಂದ ನೆರವು ಕೋರಿದ್ದಾರೆ. ಭಾರತ ಈಗಾಗಲೇ ಶ್ರೀಲಂಕೆಗೆ ನೆರವು ನೀಡಲು ಪ್ರಾರಂಭಿಸಿದೆ. ಬೇರೆ ಬೇರೆ ರಾಷ್ಟ್ರಗಳು ಸಹ ದ್ವೀಪ ರಾಷ್ಟ್ರದ ನೆರವಿಗೆ ಬರುತ್ತವೆ ಎಂಬ ನಿರೀಕ್ಷೆಯಿದೆ.

ಲಂಕೆಯಲ್ಲಿ ಜೀವನ ಮಾಡುವುದೇ ಕಷ್ಟವಾಗಿದೆ ಎಂಬ ಭಾವನೆ ಸಾರ್ವತ್ರಿಕವಾಗಿದೆ. ಒಂದು ಕಾಲದಲ್ಲಿ ತಮಿಳು ಉಗ್ರ ಸಂಘಟನೆಗಳಿಂದ ಸಾಕಷ್ಟು ತತ್ತರಿಸಿ ಹೋಗಿದ್ದ ಶ್ರೀಲಂಕಾ, ನಂತರದ ವರ್ಷಗಳಲ್ಲಿ ಸಾಮಾನ್ಯ ಸ್ಥಿತಿಗೆ ಹಿಂದಿರುಗಿದ್ದರೂ ಸಹ, ದೇಶದ ಅರ್ಥವ್ಯವಸ್ಥೆ ಡೋಲಾಯಮಾನವಾಗಿರುವುದು ಆತಂಕಕಾರಿಯಾಗಿದೆ. ಈ ಪುಟ್ಟ ದೇಶಕ್ಕೆ ಅಮೆರಿಕಾ ಸೇರಿದಂತೆ ಇತರ ದೇಶಗಳು ನೆರವಿನ ಹಸ್ತ ಚಾಚಿ, ಮುಳುಗುತ್ತಿರುವ ಈ ದೇಶಕ್ಕೆ ಮರುಹುಟ್ಟು ನೀಡಬೇಕಾಗಿದೆ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಗೋಳಾಟ

ಮಾನ್ಯರೆ,

ಮೈಸೂರು ವಿಶ್ವವಿದ್ಯಾಲಯವು ಪದವಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಎನ್‌ಇಪಿ ಸಿಲಬಸ್ ಅನ್ನು ಜಾರಿಗೆ ತಂದಿದ್ದು, ಪ್ರಥಮ ವರ್ಷದ ವಿದ್ಯಾರ್ಥಿನಿಯರು ಪರೀಕ್ಷಾ ಶುಲ್ಕವನ್ನು ಆನ್‌ಲೈನ್‌ನಲ್ಲಿ ಕಟ್ಟುವ ರೀತಿ ಮಾಡಿದ್ದಾರೆ. ಪರೀಕ್ಷಾ ಶುಲ್ಕ ಇದ್ದಿದ್ದು ರೂ.1200. ಆದರೆ ಇನ್ನು ಕೆಲವು ವಿಷಯಗಳು ಅಂದರೆ ಮನೋವಿಜ್ಞಾನ, ಮ್ಯೂಸಿಕ್ ಮುಂತಾದವುಗಳಿಗೆ ಇನ್ನೂ ಕೋಡಿಂಗ್ ಆಗದೇ ಇರುವ ಕಾರಣದಿಂದ ಪರೀಕ್ಷೆ ಶುಲ್ಕ ದಿನದಿಂದ ದಿನಕ್ಕೆ 100 ಹೆಚ್ಚುತ್ತಿದೆ. ಆದರೆ 300 ರೂ.ಗಳು ಸೇರಿ ಪರೀಕ್ಷೆ ಶುಲ್ಕ 1500 ರೂ.ಗಳಾಗಿದೆ. ವಿಶ್ವವಿದ್ಯಾಲಯವು ಇದರ ಬಗ್ಗೆ ಗಮನಹರಿಸಬೇಕು. ಮೈಸೂರು ವಿಶ್ವವಿದ್ಯಾನಿಲಯ ಮಾಡಿದ ತಪ್ಪಿಗೆ ವಿದ್ಯಾರ್ಥಿನಿಯರು ಹೆಚ್ಚು ಹಣ ಕಟ್ಟುವಂತಾಗಿದೆ. ಕೂಡಲೇ ಸಂಬಂಧಪಟ್ಟ ಮೈಸೂರು ವಿವಿ ಅಧಿಕಾರಿಗಳು ಗಮನಹರಿಸಬೇಕೆಂದು ಮನವಿ.

– ಪ್ರಿಯಾಂಕ ವೈ .ಕೆ, ಮಹಾರಾಣಿ ಮಹಿಳಾ ಕಲಾ ಕಾಲೇಜು, ಮೈಸೂರು



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಹೆಣ್ಣು ಮಕ್ಕಳು ಪ್ರೌಢಶಾಲೆಗಳಲ್ಲಿ ಏಕೆ ಮುಂದುವರೆಯಬೇಕು?

"ಕೋವಿಡ್ ತಂದ ಪಲ್ಲಟಗಳ ಕಾರಣದಿಂದಾಗಿ ಶೈಕ್ಷಣಿಕ ಅವಕಾಶಗಳ ಬಳಕೆಯಲ್ಲಿದ್ದ ಅಸಮಾನತೆ ಮತ್ತಷ್ಟು ಬಿಗಡಾಯಿಸಿದೆ. ಕೋವಿಡ್ ಪೂರ್ವದಲ್ಲೇ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿ ದಿನ 41,000 ಹೆಣ್ಣು ಮಕ್ಕಳು ತಮ್ಮ 18ನೇ ವಯಸ್ಸನ್ನು ತಲುಪುವ ಮುನ್ನವೇ ವಿವಾಹವಾಗುತ್ತಾರೆ ಎಂದು ವಿಶ್ವ ಬ್ಯಾಂಕ್‌ನ ಒಂದು ವರದಿ ಸೂಚಿಸಿತ್ತು. ಕೋವಿಡ್ ನಂತರ ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ಮನೆಯಲ್ಲೇ ಉಳಿಯಬೇಕಾದ ಪರಿಸ್ಥಿತಿ ಸೃಷ್ಟಿಯಾಗಿ ಕೌಟುಂಬಿಕ ಒತ್ತಡಗಳು, ಆರ್ಥಿಕ ಹೊರೆ ಅಥವಾ ನೆರೆಹೊರೆಯಲ್ಲಿ ಅವರ ಮೇಲೆ ಲೈಂಗಿಕ ದೌರ್ಜನ್ಯ ನಡೆಯಬಹುದು ಎಂಬ ಕಾರಣಗಳನ್ನು ಮುಂದಿಟ್ಟು ಅವರನ್ನು ವಿವಾಹದ ಕೂಪಕ್ಕೆ ತಳ್ಳಲಾಯಿತು. ದಕ್ಷಿಣ ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾದ ಅನೇಕ ಪ್ರದೇಶಗಳಲ್ಲಿ 2025 ರ ವೇಳೆಗೆ 25 ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಮಕ್ಕಳು ಬಾಲ್ಯವಿವಾಹದ ಪಿಡುಗಿಗೆ ಬಲಿಯಾಗುವ ಸಾಧ್ಯತೆ ಇದೆ ಎಂದು ಸೇವ್ ದಿ ಚಿಲ್ಡ್ರನ್ ಸಂಸ್ಥೆ ಕೈಗೊಂಡಿರುವ ಸಮೀಕ್ಷೆಯೊಂದು ತಿಳಿಸಿದೆ.

ಎರಡು ದಿನಗಳ ಹಿಂದೆಯಷ್ಟೇ ಆರಂಭವಾದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಿಗೆ ದಾಖಲಾಗಿರುವ 8.73 ಲಕ್ಷ ವಿದ್ಯಾರ್ಥಿಗಳಲ್ಲಿ ಹೆಣ್ಣು ಮಕ್ಕಳ ಪ್ರಮಾಣ ಶೇಕಡಾ 48 ರಷ್ಟಿದ್ದರೆ ಗಂಡು ಮಕ್ಕಳು ಶೇಕಡಾ 52ರಷ್ಟಿದ್ದಾರೆ. ಕಳೆದ ವರ್ಷ ಹೆಣ್ಣು ಮತ್ತು ಗಂಡು ಮಕ್ಕಳ ಪ್ರಾತಿನಿಧ್ಯ ಅನುಕ್ರಮವಾಗಿ ಶೇ. 46.7 ಹಾಗೂ ಶೇ. 53.3ರಷ್ಟಿದ್ದು, ಹೆಣ್ಣು ಮಕ್ಕಳ ಸಂಖ್ಯೆ ಈ ವರ್ಷ ಸ್ವಲ್ಪ ಹೆಚ್ಚಳವನ್ನು ಕಂಡಿರುವುದು ಸ್ತ್ರೀ ಶಿಕ್ಷಣ ಕ್ಷೇತ್ರದಲ್ಲಿ ಒಂದು ಧನಾತ್ಮಕವಾದ ಬೆಳವಣಿಗೆ ಗುರುತಿಸಬಹುದು. ಕೋವಿಡ್ ತಂದಿಟ್ಟ ಬಿಕ್ಕಟ್ಟುಗಳ ಪರಿಣಾಮವಾಗಿ ಶಾಲೆಗಳು ಅನೇಕ ಕಡೆಗಳಲ್ಲಿ ಮುಚ್ಚಿ ಹೆಣ್ಣು ಮಕ್ಕಳು ಶಾಲೆಗಳಿಗೆ ಹಿಂದಿರುಗದಿರುವ ಸಾಧ್ಯತೆ ಇರುವುದರಿಂದ ಪರೀಕ್ಷೆಗಳನ್ನು ತೆಗೆದುಕೊಳ್ಳುತ್ತಿರುವ ಹೆಣ್ಣು ಮಕ್ಕಳ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸವೂ ಆಗಿರಬಹುದು. ಆದರೆ ನಮಗೆ ಇಲ್ಲಿ ಮುಖ್ಯವಾಗಿರುವುದು ಶಿಕ್ಷಣದ ಮೇಲು ಮಟ್ಟಗಳಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಇಳಿಮುಖವಾಗಲು ನಾವು ಆಸ್ಪದ ನೀಡಬಾರದು ಎನ್ನುವುದು.

ದೇಶದಲ್ಲಿ ಪ್ರಾಥಮಿಕ ಶಾಲಾ ದಾಖಲಾತಿಯಲ್ಲಿ ಲಿಂಗ ಸಮಾನತೆಯನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಸಾಧಿಸಿದ್ದರೂ ಶಾಲಾ ಶಿಕ್ಷಣದ ಮಟ್ಟ ಏರುತ್ತಾ ಹೋದಂತೆ ಹೆಣ್ಣು ಮಕ್ಕಳ ಭಾಗವಹಿಸುವಿಕೆ ಇಳಿಮುಖವಾಗುತ್ತಾ ಹೋಗುತ್ತದೆ. ಇದು ವಿಶೇಷವಾಗಿ ಪ್ರೌಢಶಾಲೆಗಳಿಗೆ ಅನ್ವಯಿಸುತ್ತದೆ. ಇದಕ್ಕೆ ಮೂರು ಪ್ರಮುಖ ಕಾರಣಗಳನ್ನು ಗುರುತಿಸಬಹುದು. **ಮೊದಲನೆಯದಾಗಿ** ಪ್ರಾಥಮಿಕ ಶಾಲೆಗಳಿಗೆ ಹೋಲಿಸಿದಾಗ ಪ್ರೌಢಶಾಲೆಗಳ ಸಂಖ್ಯೆಯೇ ಕಡಿಮೆಯಿರುವುದು. ಕರ್ನಾಟಕ ಶಿಕ್ಷಣ ಇಲಾಖೆಯ ವರದಿಯೊಂದರ ಅನ್ವಯ ರಾಜ್ಯದಲ್ಲಿ 59,555 ಪ್ರಾಥಮಿಕ ಶಾಲೆಗಳಿದ್ದರೆ ಪ್ರೌಢಶಾಲೆಗಳ ಸಂಖ್ಯೆ 13,862 ಮಾತ್ರ. ಹೆಣ್ಣು ಮಕ್ಕಳ ಪ್ರೌಢಶಾಲಾ ದಾಖಲಾತಿ ಕಡಿಮೆಯಿರಲು **ಎರಡನೆಯ ಕಾರಣವೆಂದರೆ** ಶಾಲೆಗಳು ಮತ್ತು ವಾಸಸ್ಥಾನಗಳಿಗೆ ಇರುವ ಭೌತಿಕ ದೂರ. ಈ ದೂರ ಹೆಚ್ಚಾಗುತ್ತಾ ಹೋದ ಹಾಗೆಲ್ಲ ಪೋಷಕರು ತಮ್ಮ ಹದಿಹರೆಯದ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಹಿಂಜರಿಯುತ್ತಾರೆ. **ಮೂರನೇ ಅಂಶವೆಂದರೆ** ಎಷ್ಟೇ ಉತ್ತೇಜಕ ಯೋಜನೆಗಳಿದ್ದರೂ ಬಡತನದ ಕಾರಣದಿಂದಾಗಿ ಹೆಣ್ಣು ಮಕ್ಕಳನ್ನು ದುಡಿಮೆಗೆ ಹಚ್ಚುವುದು ಅಥವಾ ವಿವಾಹದ ನೊಗಕ್ಕೆ ಕಟ್ಟುವುದು. ಈ ಎಲ್ಲ ಸವಾಲುಗಳ ನಡುವೆಯೂ ಹೆಣ್ಣು ಮಕ್ಕಳ ಪ್ರೌಢಶಾಲಾ ದಾಖಲಾತಿ, ಹಾಜರಾತಿ ಮತ್ತು ಅವರ ಶೈಕ್ಷಣಿಕ ಸಾಧನೆಗಳು ಏರಿಕೆಯನ್ನು ಕಾಣುತ್ತಿದ್ದು ಈಗಾಗಲೇ ಶಾಲೆಗಳನ್ನು ಸೇರಿರುವವರನ್ನು ಅಲ್ಲಿಯೇ ಉಳಿಸಿಕೊಂಡು, ಪ್ರೌಢಶಾಲಾ ವಯೋಗುಂಪಿನ ಎಲ್ಲ ಹೆಣ್ಣು ಮಕ್ಕಳನ್ನು ಶಾಲೆಗಳತ್ತ ಕರೆತರುವುದು ಇಂದಿನ ಸುಸ್ಥಿರ ಅಭಿವೃದ್ಧಿ ಆದ್ಯತೆಗಳಲ್ಲಿ ಒಂದು.

ಹೆಣ್ಣು ಮಕ್ಕಳು ಶಾಲೆಗಳಲ್ಲಿ ಉಳಿದುಕೊಂಡಾಗ ಅವರು ಮೇಲುಮೇಲಿನ ತರಗತಿಗಳಿಗೆ ಹೋಗುವ ಸಾಧ್ಯತೆ ಹೆಚ್ಚು ಎನ್ನುವುದು ಒಂದು ಜಾಗತಿಕ ಸತ್ಯ. ಒಮ್ಮೆ ಅವರ ಪ್ರೌಢಶಾಲಾ ಪ್ರವೇಶ ಮತ್ತು ಹಾಜರಾತಿಗಳಿಗೆ ಪೂರಕವಾದ ವಾತಾವರಣ ಸೃಷ್ಟಿಯಾಯಿತೆಂದರೆ ಅವರು ಈ ಶಾಲಾ ಹಂತವನ್ನು ಯಶಸ್ವಿಯಾಗಿ ದಾಟುತ್ತಾರೆ ಎನ್ನುವುದನ್ನು ಅನೇಕ ಅಧ್ಯಯನಗಳು ಎತ್ತಿ ಹಿಡಿದಿವೆ. ಅಪ್ರಾಪ್ತ ವಯಸ್ಸಿನಲ್ಲಿ ವಿವಾಹ ಮತ್ತು ಗರ್ಭಧಾರಣೆ ಹೆಣ್ಣು ಮಕ್ಕಳು ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ದಾಖಲಾಗದಿರಲು ಪ್ರಮುಖ ಕಾರಣ ಎನ್ನುವುದು ಒಂದು ತಪ್ಪು ಕಲ್ಪನೆ. ಇವೆರಡು ಪರಿಸ್ಥಿತಿಗಳು ಉದ್ಭವವಾಗುವುದು ಅವರು ಶಾಲೆಯಿಂದ ದೂರ ಉಳಿದಾಗಲೇ ಎನ್ನುವುದನ್ನು ಸರ್ಕಾರ ಹಾಗೂ ನಾಗರಿಕ ಸಮಾಜಗಳೆರಡೂ ಮನಗಾಣಬೇಕು.

ಹೆಣ್ಣು ಮಕ್ಕಳ ಶಿಕ್ಷಣದ ಮೇಲೆ ಸಾಮಾಜಿಕ–ಆರ್ಥಿಕ ಸಂಪನ್ಮೂಲಗಳು ವ್ಯಯವಾದಾಗ ಆ ಮಕ್ಕಳ ಬದುಕಷ್ಟೇ ಅಲ್ಲ, ಅವರ ಇಡೀ ಕುಟುಂಬದ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ಸುಧಾರಿಸುತ್ತವೆ ಎಂದು ಜಗತ್ತಿನ ಅಭಿವೃದ್ಧಿಶೀಲ ದೇಶಗಳಲ್ಲಿ ಕೈಗೊಂಡಿರುವ ಅನೇಕ ಸಂಶೋಧನೆಗಳು ಸ್ಪಷ್ಟ ಪಡಿಸಿವೆ. ಎಲ್ಲಿಯವರೆಗೆ ಹದಿಹರೆಯದ ಹೆಣ್ಣು ಮಕ್ಕಳು ಶಾಲೆಗಳಲ್ಲಿ ಮುಂದುವರೆಯುತ್ತಾರೋ ಅಲ್ಲಿಯವರೆಗೆ ಅಪ್ರಾಪ್ತ ವಯಸ್ಕರ ವಿವಾಹಗಳ ಸಂಖ್ಯೆಯನ್ನು ನಿಯಂತ್ರಣದಲ್ಲಿ ಇಡಲು ಸಾಧ್ಯವಾಗುತ್ತದೆ. ಹೆಣ್ಣು ಮಗು ಶಾಲೆಯಲ್ಲಿ ಕಳೆಯುವ ಪ್ರತಿಯೊಂದು ವರ್ಷವೂ ಆಕೆಯ ದೈಹಿಕ–ಮಾನಸಿಕ ಬೆಳವಣಿಗೆಯ ಮೇಲಷ್ಟೇ ಅಲ್ಲ, ಆ ಮಗುವಿನ ಸಾಮಾಜಿಕ–ಆರ್ಥಿಕ ಸಶಕ್ತೀಕರಣಕ್ಕೂ ಕಾರಣವಾಗುತ್ತದೆ.

ಕೋವಿಡ್ ತಂದ ಪಲ್ಲಟಗಳ ಕಾರಣದಿಂದಾಗಿ ಶೈಕ್ಷಣಿಕ ಅವಕಾಶಗಳ ಬಳಕೆಯಲ್ಲಿದ್ದ ಅಸಮಾನತೆ ಮತ್ತಷ್ಟು ಬಿಗಡಾಯಿಸಿದೆ. ಕೋವಿಡ್ ಪೂರ್ವದಲ್ಲೇ ಅಭಿವೃದ್ಧಿಶೀಲ ದೇಶಗಳಲ್ಲಿ ಪ್ರತಿ ದಿನ 41,000 ಹೆಣ್ಣು ಮಕ್ಕಳು ತಮ್ಮ 18ನೇ ವಯಸ್ಸನ್ನು ತಲುಪುವ ಮುನ್ನವೇ ವಿವಾಹವಾಗುತ್ತಾರೆ ಎಂದು ವಿಶ್ವ ಬ್ಯಾಂಕ್‌ನ ಒಂದು ವರದಿ ಸೂಚಿಸಿತ್ತು. ಕೋವಿಡ್ ನಂತರ ಶಾಲೆಗಳು ಮುಚ್ಚಿದ್ದರಿಂದ ಮಕ್ಕಳು ಮನೆಯಲ್ಲೇ ಉಳಿಯಬೇಕಾದ ಪರಿಸ್ಥಿತಿ ಸೃಷ್ಟಿಯಾಗಿ ಕೌಟುಂಬಿಕ ಒತ್ತಡಗಳು, ಆರ್ಥಿಕ ಹೊರೆ ಅಥವಾ ನೆರೆಹೊರೆಯಲ್ಲಿ ಅವರ ಮೇಲೆ ಲೈಂಗಿಕ ದೌರ್ಜನ್ಯ ನಡೆಯಬಹುದು ಎಂಬ ಕಾರಣಗಳನ್ನು ಮುಂದಿಟ್ಟು ಅವರನ್ನು ವಿವಾಹದ ಕೂಪಕ್ಕೆ ತಳ್ಳಲಾಯಿತು. ದಕ್ಷಿಣ ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾದ ಅನೇಕ ಪ್ರದೇಶಗಳಲ್ಲಿ 2025ರ ವೇಳೆಗೆ 25 ಲಕ್ಷಕ್ಕೂ ಹೆಚ್ಚು ಸಂಖ್ಯೆಯ ಮಕ್ಕಳು ಬಾಲ್ಯ ವಿವಾಹದ ಪಿಡುಗಿಗೆ ಬಲಿಯಾಗುವ ಸಾಧ್ಯತೆ ಇದೆ ಎಂದು ಸೇವ್ ದಿ ಚಿಲ್ಡ್ರನ್ ಸಂಸ್ಥೆ ಕೈಗೊಂಡಿರುವ ಸಮೀಕ್ಷೆಯೊಂದು ತಿಳಿಸಿದೆ.

ಹೆಣ್ಣು ಮಕ್ಕಳು ಶಾಲೆಗಳಿಂದ ದೂರ ಉಳಿದಾಗ ಬಾಲ್ಯವಿವಾಹಗಳ ಸಂಖ್ಯೆ ಏರಿಕೆಯಾಗುತ್ತದೆ ಎನ್ನುವುದಕ್ಕೆ ನಿದರ್ಶನ ಮೈಸೂರು ಜಿಲ್ಲೆಯಲ್ಲಿಯೇ ಇದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶಿಶು ಸಹಾಯವಾಣಿ ನೀಡಿದ ಮಾಹಿತಿಯ ಪ್ರಕಾರ ಏಪ್ರಿಲ್ 2020ರವರೆಗೆ ಪ್ರತಿ ವರ್ಷವೂ ವರದಿಯಾಗುತ್ತಿದ್ದ ಬಾಲ್ಯವಿವಾಹಗಳ ಸಂಖ್ಯೆ 120ರಷ್ಟು ಇದ್ದು, ಕೋವಿಡ್ ಪ್ರಯುಕ್ತ ಶಾಲೆಗಳನ್ನು ಮುಚ್ಚಿದ ಮೇಲೆ, ಎಂದರೆ ಏಪ್ರಿಲ್ 2020ರಿಂದ ಮಾರ್ಚ್ 2021 ರವರೆಗೆ ಒಂದೇ ವರ್ಷದಲ್ಲಿ 200 ರಷ್ಟಾಗಿತ್ತು. ಯೂನಿಸೆಫ್ ಸಂಸ್ಥೆ ನೀಡಿರುವ ಒಂದು ಎಚ್ಚರಿಕೆ ಏನೆಂದರೆ ಕೋವಿಡ್ ಕಾರಣಕ್ಕಾಗಿ ಶಾಲೆಗಳನ್ನು ಮುಚ್ಚಿದ್ದರಿಂದ ಈ ದಶಕ ಕೊನೆಗೊಳ್ಳುವ ವೇಳೆಗೆ ಅಪ್ರಾಪ್ತ ವಯಸ್ಕರ ವಿವಾಹಗಳು 130 ಲಕ್ಷಗಳಷ್ಟು ಹೆಚ್ಚಾಗುತ್ತವೆ ಎಂದು. ಈ ಅಂಕಿ–ಅಂಶಗಳು ವರದಿಯಾಗಿರುವ ಪ್ರಕರಣಗಳಿಗೆ ಮಾತ್ರ ಸಂಬಂಧಿಸಿದ್ದು ನೈಜ ಚಿತ್ರಣ ಬೇರೆಯೇ ಇದೆ ಎಂದು ಹೇಳಲಾಗುತ್ತಿದೆ. ಇಂಥ ಪ್ರಕರಣಗಳನ್ನು ಗುರುತಿಸಿ ತಮ್ಮ ಭವಿಷ್ಯವನ್ನು ಕಳೆದುಕೊಂಡ ಹೆಣ್ಣು ಮಕ್ಕಳನ್ನು ಕಾನೂನುಬಾಹಿರ ವಿವಾಹಗಳಿಂದ ರಕ್ಷಿಸಿ ಹೊರತರುವ ಹಾಗೂ ಇದರ ಹಿಂದಿರುವ ಪುರುಷಪ್ರಧಾನ ವ್ಯವಸ್ಥೆಗೆ ತಕ್ಕ ಪಾಠವನ್ನು ಕಲಿಸುವ ಜವಾಬ್ದಾರಿ ಯಾರದ್ದು?

ಕೋವಿಡ್ ಪರಿಣಾಮಗಳನ್ನು ಅತ್ಯಂತ ಗಂಭೀರವಾಗಿ ಅನುಭವಿಸಿದವರು ಮಕ್ಕಳು. ಅವರು ಅತ್ಯಮೂಲ್ಯ ಶಾಲಾ ಸಮಯ ಹಾಗೂ ಕಲಿಕಾ ಅವಕಾಶಗಳನ್ನು, ತಮ್ಮ ಸ್ನೇಹಿತರ ಒಡನಾಟವನ್ನು ಕಳೆದುಕೊಂಡಿದ್ದು ಒಂದೆಡೆಯಾದರೆ ತಮ್ಮ ನೆರೆಹೊರೆ ಅಥವಾ ಕುಟುಂಬದ ಒಳಗೇ ಅವರು ವ್ಯಕ್ತ ಅಥವಾ ಅವ್ಯಕ್ತ ದೌರ್ಜನ್ಯಗಳನ್ನು ಎದುರಿಸಬೇಕಾದ್ದು ಮತ್ತೊಂದೆಡೆ ಅವರಿಗೆ ದೊಡ್ಡ ಹಿನ್ನಡೆ ಆಯ್ತು. ವಿಶೇಷವಾಗಿ ಹದಿಹರೆಯದ ಹೆಣ್ಣು ಮಕ್ಕಳು ಇಂಥ ಪರಿಸ್ಥಿತಿಗಳನ್ನು ಕಂಡವರು. ಆದ್ದರಿಂದ ಅವರನ್ನು ಶಾಲೆಗಳಿಗೆ ಮರು ಕರೆತರುವುದಾಗಲೀ ಅವರು ಕಳೆದುಕೊಂಡ ಮೇಲ್ಮುಖ ಚಲನೆಯ ಅವಕಾಶಗಳನ್ನು ಅವರಿಗೆ ಹಿಂದಿರುಗಿಸುವುದಾಗಲೀ ಆದ್ಯತೆಯ ಮೇಲಾಗಬೇಕಾಗಿರುವ ಕೆಲಸ.

ಹೆಣ್ಣು ಮಕ್ಕಳು ಶಾಲೆಗಳಿಗೆ ಹೋಗುವುದು ಮತ್ತೊಂದು ಕಾರಣಕ್ಕಾಗಿ ಬಹು ಮುಖ್ಯ. ಶಾಲೆ ಅವರ ಸಂಪರ್ಕ ವಲಯಗಳನ್ನು ವಿಸ್ತರಿಸುವ ಒಂದು ಸ್ಥಾನವಾಗಿದ್ದು ಅದು ಸಮವಯಸ್ಕರ ಒಡನಾಟದಿಂದ ಅವರಿಗೆ ಅನೇಕ ವಿಷಯಗಳನ್ನು ಕುರಿತ ಮಾಹಿತಿಯ ಮೂಲವೂ ಆಗಿರುತ್ತದೆ. ಇವುಗಳಲ್ಲಿ ಮುಖ್ಯವಾದುವು ವೈಯಕ್ತಿಕ ನೈರ್ಮಲ್ಯ, ಸಂತಾನೋತ್ಪತ್ತಿ, ತಮ್ಮ ದೇಹ ಅಥವಾ ಲೈಂಗಿಕತೆಗೆ ಸಂಬಂಧಿಸಿದ ವಿಚಾರಗಳು. ಇವುಗಳ ಬಗ್ಗೆ ಇರುವ ಅನುಮಾನಗಳನ್ನು ಅಂತರ್ಜಾಲ ಸೌಲಭ್ಯದ ಲಭ್ಯತೆ ಇರುವ ಹೆಣ್ಣು ಮಕ್ಕಳೇನೋ ಪರಿಹಾರ ಮಾಡಿಕೊಳ್ಳುತ್ತಾರೆ. ಆದರೆ ಆರ್ಥಿಕವಾಗಿ ಅಂಚಿನಲ್ಲಿರುವ ಕುಟುಂಬಗಳ ಮಕ್ಕಳಿಗೆ, ಅದರಲ್ಲೂ ಗ್ರಾಮಾಂತರ ಅಥವಾ ನಿರ್ಜನ ಪ್ರದೇಶಗಳಲ್ಲಿರುವವರಿಗೆ ಈ ಸೌಲಭ್ಯ ದೊರೆಯದ ಕಾರಣ ಅವರು ಮಾಹಿತಿಯ ಕೊರತೆಯನ್ನು ಎದುರಿಸಬೇಕಾಗುತ್ತದೆ. ಈ ವಿಚಾರದತ್ತ, ಹೆಣ್ಣು ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಬಗ್ಗೆ ಕಾಳಜಿ ಇರುವವರೆಲ್ಲ ಗಮನಹರಿಸಲೇಬೇಕು.

ನಾವು ಇಂದು ಬದುಕುತ್ತಿರುವುದು ಸಾಮಾಜಿಕ ಸಂದಿಗ್ಧಗಳ ನಡುವೆಯಾದ್ದರಿಂದ ಅನೇಕ ಗಂಭೀರವಾದ ವಿಷಯಗಳು ತೆರೆಗೆ ಸರಿಯುತ್ತಿವೆ. ಹಿಂದಿನ ಕಾಲು ಶತಮಾನದಲ್ಲಿದ್ದ ಪರಿಸ್ಥಿತಿಗೆ ಹೋಲಿಸಿದಾಗ ಇಂದು ಸರ್ಕಾರಿ ಹಾಗೂ ಸ್ವಯಂ ಸೇವಾ ವಲಯಗಳ ಪ್ರಯತ್ನಗಳಿಂದ ಹೆಣ್ಣು ಮಕ್ಕಳ ಶಾಲಾ ಪ್ರವೇಶ ಮತ್ತು ಹಾಜರಾತಿ ಮೇಲ್ಮುಖ ಚಲನೆಯನ್ನು ಕಂಡಿದೆ. ಅದನ್ನು ಹಿಮ್ಮೆಟ್ಟದಂತೆ ನೋಡಿಕೊಳ್ಳುವುದು ಸಂಬಂಧಿಸಿದ ಎಲ್ಲ ಭಾಗೀದಾರರ ಹೊಣೆಗಾರಿಕೆಯಾಗಬೇಕಷ್ಟೆ.

ಸಂಭವನೀಯ ಕೋವಿಡ್ 4ನೇ ಅಲೆ; ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ವೈದ್ಯರು, ಶುಶ್ರೂಷಕರಿಗೆ ತರಬೇತಿ

ತುರ್ತು, ನಿರ್ಣಾಯಕ ಸಂದರ್ಭದಲ್ಲಿ ಆರೈಕೆ, ಚಿಕಿತ್ಸೆ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ

ಮೈಸೂರು,ಮಾ.30(ಪಿಎಂ)– ಪ್ರಾಯಶಃ ಜೂನ್–ಜುಲೈನಲ್ಲಿ ಕೋವಿಡ್ 4ನೇ ಅಲೆ ದೇಶದಲ್ಲಿ ಕಾಣಿಸಿಕೊಳ್ಳಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ. ಈ ನಡುವೆ ಮೈಸೂರು ಜಿಲ್ಲಾಸ್ಪತ್ರೆಯು ಈ ಸಂಭವನೀಯ ಕೋವಿಡ್ ಅಲೆ ಎದುರಿಸಲು ಸಿದ್ಧತೆ ನಡೆಸುತ್ತಿದ್ದು, ಆಸ್ಪತ್ರೆ ವೈದ್ಯರು, ಶುಶ್ರೂಷಕ ಸಿಬ್ಬಂದಿಗೆ 'ತುರ್ತು ಮತ್ತು ನಿರ್ಣಾಯಕ ಸಂದರ್ಭದಲ್ಲಿ ಆರೈಕೆ ಮತ್ತು ಚಿಕಿತ್ಸೆಯ ವಿಧಾನಗಳ' ಕುರಿತು ಎರಡು ದಿನಗಳ ಕಾರ್ಯಾಗಾರ ನಡೆಯಿತು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೇರ್ ಇಂಡಿಯಾ ಸಹಯೋಗದಲ್ಲಿ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ವೈದ್ಯರು ಮತ್ತು ಶುಶ್ರೂಷಕರಿಗೆ ಮಂಗಳವಾರ ಮತ್ತು ಬುಧವಾರ ಸೇರಿದಂತೆ ಎರಡು ದಿನಗಳ ಕಾರ್ಯಾಗಾರ ನಡೆಸಿ, ಐಸಿಯು ಘಟಕ ಮತ್ತು ವೆಂಟಿಲೇಟರ್ ಉಪಕರಣ ಸಮರ್ಪಕ ಬಳಕೆ ಸೇರಿದಂತೆ ತುರ್ತು ಸಂದರ್ಭದಲ್ಲಿ ವೈದ್ಯಕೀಯ ಸೇವೆ ಒದಗಿಸುವ ಕುರಿತು ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು.

ಬೆಂಗಳೂರು ಮಲ್ಲೇಶ್ವರಂನ ಮಣಿಪಾಲ ಆಸ್ಪತ್ರೆ ಮತ್ತು ವಸಂತ್‌ನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆಯ ಕನ್ಸಲ್ಟೆಂಟ್ ಫಿಜಿಷಿಯನ್ ಮತ್ತು ಇಂಟೆನ್ಸಿವಿಸ್ಟ್ ಡಾ.ಬಸವರಾಜ್ ಕುಂಟೋಜಿ ನೇತೃತ್ವದ ತಂಡ ತರಬೇತಿ ನೀಡಿತು.

ಡಾ.ಬಸವರಾಜ್ ಕುಂಟೋಜಿ ನೇತೃತ್ವದಲ್ಲಿ ಡಾ. ಬಾಲಕೃಷ್ಣ, ಡಾ. ಅಬ್ರಾರ್, ಡಾ. ಸೆಂದಿಲ್, ಡಾ.ಅಂಕಿತ್, ಐಸಿಯು ಟ್ರೇನ್ಡ್ ನರ್ಸಿಂಗ್ ಸ್ಟಾಫ್‌ಗಳಾದ ಸಂತೋಷ್, ಸತೀಶ್ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಿದರು.

ಈ ಕುರಿತಂತೆ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಜಿಲ್ಲಾಸ್ಪತ್ರೆ ಸ್ಥಾನಿಕ ವೈದ್ಯಾಧಿಕಾರಿ ಡಾ. ಎಂ.ಐ. ನಯಾಜ್ಹ್ ಪಾಷ, ರಾಜ್ಯದಲ್ಲಿ ಆಯ್ದ ಜಿಲ್ಲಾಸ್ಪತ್ರೆಗಳಲ್ಲಿ ಕೋವಿಡ್ 4ನೇ ಅಲೆ ಹಿನ್ನೆಲೆಯಲ್ಲಿ ಪೂರ್ವಭಾವಿಯಾಗಿ ತರಬೇತಿ ನೀಡಲು ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂತೆಯೇ ನಮ್ಮ ಜಿಲ್ಲಾಸ್ಪತ್ರೆಯಲ್ಲೂ ಎರಡು ದಿನಗಳ ಕಾಲ ತರಬೇತಿ ಕಾರ್ಯಾಗಾರ ನಡೆಸಲಾಗಿದೆ ಎಂದು ತಿಳಿಸಿದರು.

ಜೂನ್–ಜುಲೈನಲ್ಲಿ ಸಂಭವನೀಯ 4ನೇ ಅಲೆ ನಿಭಾಯಿಸಲು ಇದು ಅನುಕೂಲವಾಗಲಿದೆ. ಜೊತೆಗೆ ತರಬೇತಿ ಪಡೆದವರ ಪೈಕಿ ನಮ್ಮ ಜಿಲ್ಲಾಸ್ಪತ್ರೆಯ ತಂಡವೊಂದನ್ನು ರಚಿಸಿ, ಇನ್ನಿತರ ಸರ್ಕಾರಿ ಆಸ್ಪತ್ರೆ ವೈದ್ಯರು ಮತ್ತು ಶುಶ್ರೂಷಕರಿಗೆ ತರಬೇತಿ ಕಲ್ಪಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದರು.

4ನೇ ಅಲೆ ಹಿನ್ನೆಲೆಯಲ್ಲಿ ಜಿಲ್ಲಾಸ್ಪತ್ರೆಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮರ್ಥ್ಯ ಅಭಿವೃದ್ಧಿ ಕ್ರಮಗಳಿಗೆ ಒತ್ತು ನೀಡಲಾಗುತ್ತಿದೆ. ಇದೇ ಹಿನ್ನೆಲೆಯಲ್ಲಿ ಈ ತರಬೇತಿ ಆಯೋಜಿಸಲಾಗಿತ್ತು. ಕೋವಿಡ್ ಸನ್ನಿವೇಶದಲ್ಲಿ ರೋಗಿ, ಐಸಿಯು ಘಟಕ ಮತ್ತು ವೆಂಟಿಲೇಟರ್ ಸಮರ್ಥ ನಿರ್ವಹಣೆ ಕುರಿತು ಬಹು ಮುಖ್ಯವಾಗಿ ತರಬೇತಿ ನೀಡಲಾಗಿದೆ ಎಂದರು.

ಜನತೆ ಕೋವಿಡ್–19 ನಾಲ್ಕನೇ ಅಲೆಗೆ ಯಾವುದೇ ಭಯಪಡುವ ಅಗತ್ಯವಿಲ್ಲ. ಕೋವಿಡ್ ಅನ್ನು ಯಾವುದೇ ಆತಂಕವಿಲ್ಲದೆ, ಸಮರ್ಥವಾಗಿ ನಿಭಾಯಿಸಲು ಸರ್ಕಾರ ಎಲ್ಲಾ ತರದ ಸಿದ್ಧತೆ ಮಾಡಿ ಕೊಳ್ಳುತ್ತಿದೆ. ಅಂತೆಯೇ ಜಿಲ್ಲಾಸ್ಪತ್ರೆಯಲ್ಲೂ ಸಮರ್ಥವಾಗಿ ಸೇವೆ ನೀಡಲು ಸಜ್ಜಾಗು ತ್ತಿದ್ದೇವೆ. 4ನೇ ಅಲೆಯಿಂದ ಯಾವುದೇ ಸಮಸ್ಯೆ ಆಗದಿದ್ದರೆ ಒಳ್ಳೆಯದು. ಸರ್ಕಾರ ಹೆಚ್ಚಿನ ಎಚ್ಚರಿಕೆ ವಹಿಸುತ್ತಿದ್ದು, ಜನತೆ ಭಯ ಭೀತರಾಗುವ ಅಗತ್ಯವಿಲ್ಲ ಎಂದರು.



ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಆಸ್ಪತ್ರೆ ವೈದ್ಯರು, ಶುಶ್ರೂಷಕ ಸಿಬ್ಬಂದಿಗೆ 'ತುರ್ತು ಮತ್ತು ನಿರ್ಣಾಯಕ ಸಂದರ್ಭದಲ್ಲಿ ಆರೈಕೆ ಮತ್ತು ಚಿಕಿತ್ಸಾ ವಿಧಾನಗಳ' ಕುರಿತು ಬುಧವಾರ ಪ್ರಾತ್ಯಕ್ಷಿಕೆ ಮೂಲಕ ತರಬೇತಿ ನೀಡಲಾಯಿತು.

ಜಿಲ್ಲಾಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸಾ ವ್ಯವಸ್ಥೆ

ಮೈಸೂರು: ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆ ನೀಡಲು ಒತ್ತು ನೀಡಿದ್ದು, ಈ ನಿಟ್ಟಿನಲ್ಲಿ ಇಂತಹ ತರಬೇತಿ ಕಾರ್ಯಕ್ರಮ ಅನುಕೂಲವಾಗಲಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕರಾದ ಡಾ.ಹೆಚ್.ಆರ್.ರಾಜೇಶ್ವರಿ ದೇವಿ ಹೇಳಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕೋವಿಡ್ ಹಿನ್ನೆಲೆಯಲ್ಲಿ ಮಾತ್ರವಲ್ಲದೆ, ನಾನ್ ಕೋವಿಡ್‌ನ ತೀವ್ರತರ ಅನಾರೋಗ್ಯ ಸಮಸ್ಯೆಗಳಿಗೂ ಗುಣಮಟ್ಟದ ಚಿಕಿತ್ಸೆ ನೀಡಲು ಇಂತಹ ತರಬೇತಿ ಪೂರಕವಾಗುತ್ತದೆ ಎಂದರು.

ಐಸಿಯುನಲ್ಲಿ (ತೀವ್ರ ನಿಗಾ ಘಟಕ) ರೋಗಿಗಳ ಶುಶ್ರೂಷೆ, ಈ ಘಟಕದಲ್ಲಿರುವ ಉಪಕರಣಗಳ ಸಮರ್ಪಕ ನಿರ್ವಹಣೆ, ಔಷಧ ಅಡ್ಡಪರಿಣಾಮದ ಸನ್ನಿವೇಶದ ನಿರ್ವಹಣೆ, ರೋಗಿ ಕಡೆಯವರೊಂದಿಗೆ ಸಮಾಲೋಚಿಸುವ ವಿಧಾನ, ಮರಣ ಹೊಂದಿದ ಸಂಬಂಧ ಘೋಷಣೆಗೂ ಮುನ್ನ ಎಚ್ಚರಿಕೆ ವಹಿಸುವ ಕ್ರಮಗಳು ಸೇರಿದಂತೆ ಹಲವು ವಿಷಯಗಳ ಕುರಿತು ವಿಶೇಷ ತರಬೇತಿ ನೀಡಲಾಗಿದೆ. ಈ ಹಿಂದೆಯೂ ಆಸ್ಪತ್ರೆಯಲ್ಲಿ ಹಲವು ತರಬೇತಿಗಳು ಆಗಿದ್ದು, ಇನ್ನಷ್ಟು ಪರಿಪೂರ್ಣತೆ ಸಾಧಿಸಲು ಈ ತರಬೇತಿಯೂ ನೆರವಾಗಲಿದೆ. ಆಸ್ಪತ್ರೆಯ 15 ವೈದ್ಯರು, 25 ಶುಶ್ರೂಷಕರು ಮತ್ತು 30 ತಂತ್ರಜ್ಞರು ಸೇರಿದಂತೆ 75 ಮಂದಿ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು ಎಂದು ವಿವರಿಸಿದರು.

ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ತರಬೇತಿ ನೀಡುವ ಉದ್ದೇಶ

ಮುಖ್ಯವಾಗಿ ಐಸಿಯುನಲ್ಲಿರುವ ಎನ್‌ಐವಿ, ವೆಂಟಿಲೇಟರ್, ಹೆಚ್‌ಎಫ್‌ಎನ್‌ಸಿ ಉಪಕರಣಗಳ ಬಗ್ಗೆ ಕೂಲಂಕುಷವಾಗಿ ಮಾಹಿತಿ ನೀಡಿ, ಪ್ರಾತ್ಯಕ್ಷಿಕೆ ಮೂಲಕ ವಿವರಿಸಲಾಗಿದೆ. ಆಸ್ಪತ್ರೆಗಳಲ್ಲಿ ಐಸಿಯು, ವೆಂಟಿಲೇಟರ್ ಉಪಕರಣಗಳು ಲಭ್ಯವಿದ್ದರೂ ಅವುಗಳ ಸೂಕ್ತ ಬಳಕೆ ಮುಖ್ಯ. ತೀವ್ರತರ ಅನಾರೋಗ್ಯದಲ್ಲಿ ರೋಗಿಗಳು ಬಂದಾಗ ಸೂಕ್ತ ಸಮಯಕ್ಕೆ ಸಮರ್ಪಕವಾಗಿ ಈ ಉಪಕರಣ ಬಳಸಲು ತಮ್ಮ ತರಬೇತಿ ಪರಿಣಾಮಕಾರಿ ಆಗಲಿದೆ ಎಂಬ ವಿಶ್ವಾಸವಿದೆ. ಈಗಾಗಲೇ ಬಾಗಲಕೋಟೆ, ವಿಜಯಪುರ, ಯಾದಗಿರಿ, ಹಾವೇರಿ ಜಿಲ್ಲಾಸ್ಪತ್ರೆಗಳಲ್ಲಿ ಈ ತರಬೇತಿ ಕಾರ್ಯಾಗಾರ ಮಾಡಿದ್ದು, ಇದೀಗ ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ತರಬೇತಿ ಪೂರ್ಣಗೊಳಿಸಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾಸ್ಪತ್ರೆಗಳಲ್ಲಿ ಈ ತರಬೇತಿ ನಡೆಸುವ ಉದ್ದೇಶ ಹೊಂದಲಾಗಿದೆ.

–ಡಾ.ಬಸವರಾಜ್ ಕುಂಟೋಜಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 500 + 25 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮನೆ ಮಾರಾಟಕ್ಕಿದೆ

ಮೈಸೂರಿನ ಬೃಂದಾವನ ಬಡಾವಣೆ, 2ನೇ ಹಂತ, 2ನೇ ಮೇನ್‌ನಲ್ಲಿ ಗಣಪತಿ ದೇವಸ್ಥಾನದ ಎದುರಿನ ರಸ್ತೆಯಲ್ಲಿರುವ 40x60 ಅಡಿ ಅಳತೆಯ ಡಬಲ್ ಬೆಡ್ ರೂಂ ಮನೆ (ನಾರ್ತ್ ಫೇಸಿಂಗ್) ಮಾರಾಟಕ್ಕಿದೆ.

9900527576 / 9731501970

ನಿವೇಶನ ಮಾರಾಟಕ್ಕಿದೆ

ಮೈಸೂರಿನ ಯೂನಿವರ್ಸಿಟಿ ಲೇ ಔಟ್ ಬಳಿ ರಿಂಗ್ ರಸ್ತೆಗೆ ಹೊಂದಿಕೊಂಡಂತಿರುವ ಆರ್.ಆರ್.ನಗರದಲ್ಲಿ 40x60 ಅಡಿ ಅಳತೆಯ (ಈಸ್ಟ್ ಫೇಸಿಂಗ್) ನಿವೇಶನ ಮಾರಾಟಕ್ಕಿದೆ.

9900527576 / 9731501970

ಬೇಕಾಗಿದ್ದಾರೆ

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8 ಸಾವಿರದಿಂದ 10 ಸಾವಿರದವರೆಗೆ ಹಾಗೂ ಹುಡುಗರು ಫೀಲ್ಡ್ ವರ್ಕ್‌ಗೆ ಬೇಕಾಗಿದ್ದಾರೆ. ಸಂಬಳ: 11 ಸಾವಿರ.
ಅಫೀಸ್: ಎನ್.ಆರ್.ಮೊಹಲ್ಲಾ ಹಾಗೂ ಚಾಮುಂಡಿಪುರಂ

9535926093

SRI VINAYAKA CENTRAL SCHOOL, TARIPURA

WANTED TEACHERS

Trained & experienced graduate teachers required for all subjects, including computer, Arts & Craft & NST for Primary and High School. Free transport facility available. Hostel facility available from 7th to 10th Std. for boys.

8971577685 / 9980631121

Send your resume through SMS

ROOM FOR RENT

#1434, Thyagaraja Road, 6th Cross, Agrahara, Mysore.

For more information contact:

9141076024, 7892443297

Home Appliances Service

ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD.

AC Sales & Service

Contact : Srinivas

Mob : 9379699229

ಶ್ರೀ ಗೌರಿಶಂಕರ ಟೂರಿಸ್ಟ್

10–4–22 (1 ದಿನ):– ಕೋಟಿಲಿಂಗ, ಘಾಟಿ ಸುಬ್ರಮ್ಮಣ್ಯ, ಕೈವಾರ, ಚಿಕ್ಕ ತಿರುಪತಿ.
11–05–22 (6 ದಿನ):– ಗುರುವಾಯೂರು, ತ್ರಿಸೂರು, ಮುನ್ನಾರ್, ತ್ರಿವೇಂಡ್ರಂ, ಆಲಪ್ಪಿ, ಕೊಚ್ಚಿನ್ ಇತ್ಯಾದಿ.
21–05–22 (14/18 ದಿನ) ಆಗ್ರಾ, ಅಲಹಾಬಾದ್, ಕಾಶಿ, ಅಯೋಧ್ಯೆ, ಹರಿದ್ವಾರ್, ವೈಷ್ಣೋದೇವಿ, ಅಮೃತ್‌ಸರ, ದೆಹಲಿ ಇತ್ಯಾದಿ. (ವಿಮಾನ, ಟ್ರೈನ್ ಮತ್ತು ಎ.ಸಿ. ಬಸ್ಸಿನಲ್ಲಿ) ಊಟ, ವಸತಿ ಸೇರಿರುತ್ತದೆ.

9620002114

ಬೇಕಾಗಿದ್ದಾರೆ

ಹೋಟೆಲ್ ಕೆಲಸಕ್ಕೆ ಹೆಲ್ಪರ್ ಹಾಗೂ ಕ್ಲೀನರ್ ಬೇಕಾಗಿದ್ದಾರೆ

9686442768

SITE FOR SALE

40x60 S/F Dattagalli 3rd Stage

8050956412
9686041643

ಸೈಟು ಮತ್ತು ಮನೆ ಮಾರಾಟಕ್ಕಿದೆ

30x40 ಸೈಟು
30x40 2BHK ಮನೆ
ನ್ಯಾಯಾಂಗ ಬಡಾವಣೆ

9741076619

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK

ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ನಿರ್ಮಲಧಾರೆ SOLUTIONS

ಸಂಪು ಕ್ಲೀನಿಂಗ್‌ಗಾಗಿ

ಸಂಪರ್ಕಿಸಿ:

9606871188

SITES FOR SALE

DTCP Approved
16.5 kms from Mysore City Adjacent to NH 766
T.N.Pura Road at Duddugere Gate
30x40, 30x50 etc.,

9901877532
7975183634

ಬಟ್ಟಲು ಸಾಂಬ್ರಾಣಿ ಉದ್ಯೋಗ

ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:

7406375196
9880548596

ಮಳಿಗೆಗಳು ಬಾಡಿಗೆಗೆ ಇದೆ

ಅರಸು ರಸ್ತೆ ಮತ್ತು ವಿನೋಬ ರಸ್ತೆಯ ಅಡ್ಡರಸ್ತೆಯಲ್ಲಿ ಕುಂಚಿಟಿಗರ ಸಂಘದ ವಿದ್ಯಾರ್ಥಿನಿಲಯದ ಕಟ್ಟಡದಲ್ಲಿ (ಶಂಕರ್ ಟೀ ಸ್ಟಾಲ್ ಎದುರು) 5 ಮಳಿಗೆಗಳು ಖಾಲಿ ಇದೆ. ಅಗಲ:15 ಅಡಿ, ಉದ್ದ: 30 ಅಡಿ, ಎತ್ತರ: 18 ಅಡಿ ಇರುತ್ತದೆ. ಸಂಪರ್ಕಿಸಿ. ಕುಂಚಿಟಿಗರ ಸಂಘ (ರಿ), ದಿವಾನ್ಸ್ ರಸ್ತೆ, ಮೈಸೂರು

0821-2422973

WANTED

(Office Work)
Sales Executive - 10
Customer Care Executive-2
Business Development Executive - 2

7975826464
9740372920

Timing: 12:00pm to 7:00pm

APARTMENT FOR SALE

2BHK East Facing Ground Floor with Beautiful Central Garden. at Brigade Sparkle, J.P.Nagar, Mysore Contact:

9901231117

ತಕ್ಷಣ ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 40 ರವರೆಗೆ ಮೊದಲು ಬಂದವರಿಗೆ ಆದ್ಯತೆ. ವಿದ್ಯಾರ್ಹತೆ: ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ ESI+PF ಮತ್ತು ಉಚಿತ ಊಟದ ವ್ಯವಸ್ಥೆ ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್,ಬ್ಯಾಂಕ್ ಪಾಸ್‌ಬುಕ್, ಫೋಟೋ–06, ಟಿ.ಸಿ.ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

8453408502 / 9108100117

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru


MYSURU 9611028523 MANGALORE 9343142258

BRIGADE FLAT FOR LEASE

Address : BRIGADE TOPAZ Near Devegowda Circle, Bannur Road, Opp. Milk Dairy, 2nd Floor (202) 2 BHK. Amenities : Gym, Party Hall, Swimming Pool, Gaming Arena, Park etc., Call :

8595926807
9686677208

Maruthi Tube Wells (R)



8184000444

COMMERCIAL SITE FOR SALE

40x60 - T.N.Pura, N.H.Road, Near Prakruthi Layout, DTCP Approved, 11B Khatha.
Contact: Rajesh

8050332377

SSLC SUMMER CRASH COURSE

Organised by DISHA Academy, 4th April 2022 to 13th May 2022, Maths and Science (For 9th Passed Students) We are providing Hostel Facility for Boys & Girls

8147792930

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ + ಓಟಿ 15,000/– ರಿಂದ 46,000/–

7259865221 / 8867373902

Dr.D.H.BAGALKOT SEXOLOGIST (Since 1983)

ಲೈಂಗಿಕ ನಿಶ್ಯಕ್ತಿ ಹಾಗೂ ನಶಾಮುಕ್ತಿ



ಶೀಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತೆಳಿಯಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ

*ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ, ಧನವಂತ್ರಿ ರೋಡ

ಹೆಡ್ ಆಫೀಸ್: ಎ.ಡಿ.ಬಾಗಲಕೋಟ (ನೋಂ) ಹೆಲ್ತ್ ಕ್ಲಿನಿಕ್ ಹುಬ್ಬಳ್ಳಿ Cell:9743193428
www.drbagalkot.com

EASY FILING

- Filing of Income Tax
- GST Regn., & Returns Filing
- Accounts Maintenance
- Bank Project Report

BUSINESS SOLUTIONS

Call : 9972 000 268

ತಕ್ಷಣ ಬೇಕಾಗಿದ್ದಾರೆ

PART TIME / FULL TIME / HOME-BASED

E-CODE GAS SAFE

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC ,Dip,Degree	4 HOURS	6000/-
SSLC,PUC ,Dip,Degree	8 HOURS	16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು

9986621226

IMKTA - PRE-SCHOOL TEACHER TRAINING

Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in

ALPHA INTERNATIONAL SCHOOL
@ Srirampura & Gokulam

Call: 7829937469, 9901803394

ONLINE TRAINING AVAILABLE

ಮಳಿಗೆಗಳು ಬಾಡಿಗೆಗೆ ಇದೆ

ಸಂತೇಪೇಟೆ ರಸ್ತೆಯಲ್ಲಿರುವ ಶ್ರೀಮತಿ ದೇವಿ ಸಾಕಮ್ಮ ಕಾಂಪ್ಲೆಕ್ಸ್‌ನಲ್ಲಿ ನೆಲ ಅಂತಸ್ತಿನಲ್ಲಿ 9.9 ಅಡಿ ಮತ್ತು 16.4 ಅಡಿಗಳ ಮಳಿಗೆ ಸಂಖ್ಯೆ: 09, 13, 14 ಹಾಗೂ ಮೊದಲ ಅಂತಸ್ತಿನಲ್ಲಿ 9.9 ಅಡಿ ಮತ್ತು 16.4 ಅಡಿಗಳ ಮಳಿಗೆ ಸಂಖ್ಯೆ: 10 ರ ಮಳಿಗೆಗಳು ಖಾಲಿ ಇದೆ. ಸಂಪರ್ಕಿಸಿ. ಕುಂಚಿಟಿಗರ ಸಂಘ (ರಿ), ದಿವಾನ್ಸ್ ರಸ್ತೆ, ಮೈಸೂರು

0821-2422973

ಜಮೀನುಗಳು ಬೇಕಾಗಿದೆ

ತೋಟಗಳು ಮತ್ತು ನೀರಾವರಿ ಸೌಲಭ್ಯವಿರುವ ವ್ಯವಸಾಯದ ಜಮೀನುಗಳು ಕ್ರಯಕ್ಕೆ ಬೇಕಾಗಿದೆ. 10 ಎಕರೆ ಮೇಲ್ಪಟ್ಟಿರಬೇಕು.

9845627489

ಬೇಕಾಗಿದ್ದಾರೆ

KRS ರೋಡ್ ಬೆಳಗೊಳ ಸುತ್ತಮುತ್ತ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ SSLC, PUC

9611786861
9611786862

ಔಟ್ ಹೌಸ್ ಬಾಡಿಗೆಗೆ / ಭೋಗ್ಯಕ್ಕೆ

ಪೂರ್ವ ಮತ್ತು ಉತ್ತರ, ಸೋಲಾರ್ ಮತ್ತು 24 ಗಂಟೆಗಳ ನೀರಿನ ಸೌಲಭ್ಯ. ವಿಳಾಸ–1779, 5ನೇ ಕ್ರಾಸ್ ಉತ್ತರ, ಅನಿಕೇತನ ರಸ್ತೆ, ಕುವೆಂಪುನಗರ, ಮೈಸೂರು. (Near Akash NEET)

9342156709

ತಕ್ಷಣ ಬೇಕಾಗಿದ್ದಾರೆ

1. B.E(Civil) - 5 No's
2. Diploma(Civil) - 5 No's
* Civil Construction Work in Project Work(Construction) of Building & Roads)
* Minimum of 5-yrs of Experience
3. Supervisor - 3 No's
4. Manager (Hotel) - 3 No's

Contact Immediately -

9513004592

AVAILABLE FOR RENT

JCB, HITACHI, ROCK BREAKER, TIPPER & TRAILER

Contact Khushi Earth Mover's

77959 14922

PLOT FOR SALE

Muda Approved
30X40
East Facing @ 15 lakhs in Telecom Layout.

IMMEDIATE REGISTRATION
Off Hunsur Bypass Road

Call: 98800 65122/ 77956 09173

ಬೇಕಾಗಿದ್ದಾರೆ

ಕುಶಾಲನಗರದಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಹೋಟೆಲ್‌ಗೆ ವೆಯಿಟರ್ಸ್, ಕ್ಯಾಪ್ಟನ್ಸ್, ದೊಸೆ ಭಟ್ಟರು–2, ಕಾಫಿ, ಟೀ ಮೇಕರ್ಸ್, ಟೇಬಲ್ ಕ್ಲೀನರ್ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ.

8123132161

ಬೇಕಾಗಿದ್ದಾರೆ

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8 ಸಾವಿರದಿಂದ 10 ಸಾವಿರದವರೆಗೆ ಹಾಗೂ ಹುಡುಗರು ಫೀಲ್ಡ್ ವರ್ಕ್‌ಗೆ ಬೇಕಾಗಿದ್ದಾರೆ. ಸಂಬಳ: 11 ಸಾವಿರ.
ಅಫೀಸ್: ಎನ್.ಆರ್.ಮೊಹಲ್ಲಾ ಹಾಗೂ ಚಾಮುಂಡಿಪುರಂ

9535926093

ಮನೆಯಿಂದಲೇ ಸಂಪಾದಿಸಿ

ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ

7795560970

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:

7676844160
6361056646

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

MOBILE ರಿಪೇರಿ ಟ್ರೈನಿಂಗ್

18 ವರ್ಷದಿಂದ Mobile, Electrical, Electronics ಮತ್ತು Computer Hardware ರಿಪೇರಿ ಹೇಳಿಕೊಡುತ್ತಿರುವ ಏಕೈಕ ಸಂಸ್ಥೆಯಲ್ಲಿ ಶೀಘ್ರದಲ್ಲಿ ಹೊಸ ಬ್ಯಾಚ್ ಪ್ರಾರಂಭ. ಯಾವುದೇ ವಿದ್ಯಾರ್ಹತೆ ಹಾಗೂ ವಯೋಮಿತಿಯ ಅಗತ್ಯವಿಲ್ಲ. ಕೂಡಲೇ ಸಂಪರ್ಕಿಸಿ:

SMM Institute,
ಶ್ರೀ ವೀರಭದ್ರೇಶ್ವರಸ್ವಾಮಿ ದೇವಸ್ಥಾನದ ಎದುರು, ದಳವಾಯಿ ಶಾಲೆಯ ರಸ್ತೆ, ಕೆ.ಆರ್.ಮೊಹಲ್ಲಾ ಮೈಸೂರು.

Mob.: 9986926101

HOMES FOR LEASE / RENT

Newly constructed, semi furnished, east facing, ground floor 2BHK homes for lease/ Rent. Address: Near Sai Baba Temple, opposite to MPro Palace Hotel, Yaraganahalli, Mysuru-570029.Contact:

9448392488

SITE FOR SALE

ಜ್ಞಾನಭಾರತಿ ಲೇಔಟ್, 2ನೇ ಹಂತ, ದಡದಹಳ್ಳಿ, ಮೈಸೂರು, ಪೂರ್ವಾಭಿಮುಖ, ಜೆ.ಪಿ.ನಗರದ ರಿಂಗ್ ರಸ್ತೆಯಿಂದ ಕೇವಲ 6 ಕಿ.ಮೀ ದೂರ, ಮುಡಾ ಖಾತೆ ಆಗಿದೆ
30x40 ಡೈರೆಕ್ಟ್ ರಿಜಿಸ್ಟ್ರೇಶನ್ ಮಾತ್ರ

9342123373

Sudarshan Saur

SOLAR WATER HEATER



ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available

SUNZONE SOLAR SYSTEM
Vishwamanava Double Road, Kuvempunagar, Mysuru

9845175443

SDJ GOLD COMPANY

Tele Callers ಮತ್ತು Sales Executive ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
Basic Salary 10,000 ಮತ್ತು Incentive 10,000
Total Salary 20,000
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ.

ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ತಕ್ಷಣವೇ ನಾವೇ ಬಿಡಿಸಿ ಉಳಿದ ಹಣ ಕೊಡುತ್ತೇವೆ.

9513870702

Wanted Teachers

Himalayan Education trust (R)
Pavaman innovative H.Primary School

Post: Nursery-2, Primary-5 (Eng,P.E, Math, Kan,Hindi), Qua: NST/D ED,/B Ed,/Any Degree (Females Only) English Communication Computer Knowledge must. # 7th Cross, 3rd Main, B M Shree Nagar, Metagalli Mysore,Contact

8197695840/9880964695

Jnanajyothi Vidyalaya. Beerihundi [H.P.S] Mysore (Tq)

Wanted Teachers

With Good Communication Skill Academic Coordinator-1, Kannada-1 , English -2, Hindi-1, Science & Mathematics-2, Social Science-1, C.Ped/B.ped-1, Nurssery-2, Contact

9845390377
8197057626

KRISHIK Sarvodaya Foundation (R), Mysore branch, The Training Institute for Competative Exams

Graduate Primary School Teachers Recruitment (GPSTR)

Starting From 05.04.2022

Contact: 0821-2301564
9945752592 / 9611855309

ಸುವರ್ಣ ಯಾತ್ರಾ

11/06/22 ಚಾರ್‌ಧಾಮ ಪ್ರವಾಸ 13 ದಿನಗಳು ವಿಮಾನದಲ್ಲಿ ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ, ಬದ್ರಿನಾಥ
18/05/22 ಶಿಮ್ಲ, ಕುಲು, ಮನಾಲಿ ಹಾಗೂ ವೈಷ್ಣೋದೇವಿ ಪ್ರವಾಸ 9 ದಿನಗಳು
18/05/22 ದೆಹಲಿ, ಆಗ್ರಾ, ಮಥುರ, ಬೃಂದಾವನ ಜಾರ್ಖಂಡ್ ಹಾಗೂ ಕಾಶಿ ಪ್ರವಾಸ 9 ದಿನಗಳು

8970949434 / 9019462508

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ

ರಿಸೆಪ್ಷನಿಸ್ಟ್ / ಹೌಸ್ ಕೀಪಿಂಗ್ / ಕುಕಿಂಗ್ / ಕುಕಿಂಗ್ ಹೆಲ್ಪರ್

8884448385

SITE FOR SALE

40x60 Site for Sale. 60 ft Road, 2nd Phase, 4th Stage, Vijayanagar, Near Marimallappa Educational Institution Contact:SMS S.Kumar

9483504650

ವಾಸ್ತು ಪ್ರಕಾರ

ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿ ಕೊಡಲಾಗುತ್ತದೆ. ಒಂದು ಚದರಕ್ಕೆ 1,50,000/–
ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್

9945442361 / 9380885787

1 ಲಕ್ಷಕ್ಕೆ ಒಂದು ದಿನಕ್ಕೆ 200 ರೂ. ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು

ಪ್ರತಿ ದಿನ ಚಿನ್ನಾಭರಣದ ವಹಿವಾಟಿಗೆ 1 ಲಕ್ಷಕ್ಕೆ ಒಂದು ದಿನಕ್ಕೆ 200 ರೂ. ಸೇರಿಸಿ ಸಂಜೆ ವಾಪಸ್ ಕೊಡಲಾಗುವುದು. ಕೊಟ್ಟಿರುವ ಹಣಕ್ಕೆ ಚಿನ್ನವನ್ನು ಸೆಕ್ಯೂರಿಟಿಯಾಗಿ ನೀಡಲಾಗುವುದು. ಸಂಪರ್ಕಿಸಿ.MNM ಗೋಲ್ಡ್, ರೇನ್‌ಬೋ ಸ್ಟುಡಿಯೋ ಪಕ್ಕ, ಅಶೋಕ ರಸ್ತೆ, ಮೈಸೂರು.

7259214732

ನಿಮ್ಮ ಚಿನ್ನಾಭರಣಕ್ಕೆ 1%ಬಡ್ಡಿ ಹಾಗೂ ಗಿರವಿ ಚಿನ್ನಾಭರಣ ಖರೀದಿ

ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಆಭರಣ ಬಿಡಿಸಿ. 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಲಾಗುವುದು. ಸಂಪರ್ಕಿಸಿ.MNM ಗೋಲ್ಡ್, ರೇನ್‌ಬೋ ಸ್ಟುಡಿಯೋ ಪಕ್ಕ, ಅಶೋಕ ರಸ್ತೆ, ಮೈಸೂರು.

7259214732

H & S Health care (R)

HOME NURSING SERVICES

Elder care , Bedriden care, post operative care, Dementia care, Tracheostomy, Colostomy care. mother and baby care, etc

We send well trained Male and Female caretakers on weekly monthly and quarterly basis Contact

9916905188/08214524105

ಮನೆ ಭೋಗ್ಯಕ್ಕಿದೆ

3BHK ಇಂಡಿಪೆಂಡೆಂಟ್ ಹೌಸ್, 9 ಲಕ್ಷ, ದಾಸನಕೊಪ್ಪಲು, ರೂಪನಗರ.

ಸೈಟು ಮಾರಾಟಕ್ಕಿದೆ

20x30 ನಾರ್ತ್ ಫೇಸಿಂಗ್ 27 ಲಕ್ಷ ಬೋಗಾದಿ, ರೂಪನಗರ, ಮೈಸೂರು

9845765573

ಮನೆ ಕಟ್ಟುವವರೇ ಗಮನಿಸಿ

ನಮ್ಮಲ್ಲಿ ಎಂ.ಸ್ಯಾಂಡ್, ಜೆಲ್ಲಿ, ಇಟ್ಟಿಗೆ ರಿಯಾಯಿತಿ ದರದಲ್ಲಿ ದೊರೆಯುತ್ತದೆ.

9902723656

COMMERCIAL SPACE RENT / SALE

Total 2200 Sq.ft. Ground, 1st, 2nd Floor, Manjunath .C, #291, Lakshmi Villas Road, Devaraj Mohalla, Mysore. Near Jagan Mohan Palace.

Manjunath.C Owner 8105696137
Manjula Receptionsit 8618603193

OFFICE SPACE FOR RENT

1500 Sq.ft. Space is available for Rent at 2nd Floor at K.N.Agrahara Behind Bannumaiah Collage, Mysore

7892313469 / 7975491399

ನಾಟ್ಯ (ರಿ)

ಮಕ್ಕಳ ಸೈನ್ಯ ಬೇಸಿಗೆ ಶಿಬಿರ
(ಮೋಜು – ಮಜಾ – ಮಸ್ತಿ)
ಏಪ್ರಿಲ್ 3 ರಿಂದ ಮೇ 1 ರವರೆಗೆ ಬೆಳಿಗ್ಗೆ 10 ರಿಂದ ಸಂಜೆ 4
ನೃತ್ಯ– ಅಭಿನಯ–ಹಾಡು–ಚಿತ್ರಕಲೆ ಮುಂತಾದ 20 ಕ್ಕೂ ಹೆಚ್ಚು ಚಟುವಟಿಕೆಗಳನ್ನು ಹೇಳಿಕೊಡಲಾಗುತ್ತದೆ.

9964491957 / 9964566070

ಸುವರ್ಣಾವಕಾಶ

ಮನೆಯಲ್ಲೇ ಕುಳಿತು ಫಾರಂನಲ್ಲಿ ಅಂಕಿಗಳನ್ನು ತುಂಬುವ ಕೆಲಸ ವಾರಕ್ಕೆ ಗಳಿಸಿ 3,000–5,000 ಕೊರಿಯರ್ ಸೌಲಭ್ಯವಿದೆ.

7406536901 / 8722483693

ಮನೆ ಭೋಗ್ಯಕ್ಕೆ ಇದೆ

ಸಿಂಗಲ್ ಅಟ್ಯಾಚ್ಡ್ ಬಾತ್ ರೂಮ್ ಭೋಗ್ಯಕ್ಕೆ. ಎಲ್ಲಾ ಸೌಲಭ್ಯವಿದೆ. (2nd Floor) #23, 4th Cross, 5th Main, ವಿದ್ಯಾರಣ್ಯಪುರಂ, ಮೈಸೂರು. for 25 Lakhs ಸಂಪರ್ಕಿಸಿ: Harish

9663311557

COMMERCIAL SPACE FOR RENT

2000 Sq.ft. First Floor at No.148, Kalidas Road, above Bank of Maharastra.

9845114148

ಶ್ರೀ ಸಿದ್ಧೇಶ್ವರ ಟೂರಿಸ್ಟ್ & ಟ್ರಾವೆಲ್ಸ್

ದಿನಾಂಕ: 05.06–2022 ರಿಂದ 35 ದಿನಗಳು ಚಾರ್‌ಧಾಮ್ ಯಾತ್ರೆ, ಕೊಲ್ಹಾಪುರ, ಶಿರಡಿ, ಉಜ್ಜಯಿನಿ, ಆಗ್ರಾ, ದೆಹಲಿ, ಕುರುಕ್ಷೇತ್ರ, ಅಮೃತ್‌ಸರ, ವಾಘಬಾರ್ಡರ್, ಜಮ್ಮು, ವೈಷ್ಣೋದೇವಿ, ಕುಲುಮನಾಲಿ, ಹರಿದ್ವಾರ, ಕೇದರ್‌ನಾಥ, ಬದರಿನಾಥ್, ಯಮುನೋತ್ರಿ, ಗಂಗೋತ್ರಿ, ಋಷಿಕೇಶ್, ಅಯೋಧ್ಯ, ನೇಪಾಳ, ಕಠ್‌ಮಂಡ್ ಕಾಶಿ, ಪಂಡರಾಪುರ, ಕೂಡಲಸಂಗಮ ಇತ್ಯಾದಿ. ವ್ಯವಸ್ಥಾಪಕರು:

9343288718 / 8296956718

ಬೇಕಾಗಿದ್ದಾರೆ

1) ಹೆಲ್ಪರ್
2) ಲೇಬರ್

ಪಿ.ಆರ್.ಏಜೆನ್ಸಿ, ಭೋಗಾದಿ

9901265552
9035690942

AFFIDAVIT

My Name Savitha P mentioned in LIC Policy No.725586671 D/o Late Parasurama, No.79/B, T.K.Layout, Mysore-570009. In Adhar, Pan Card & Bank Passbook, My name is mentioned as Sowmya.P. Sowmya P and Savitha.P are one & the same & belongs to me.

Sd/- Sowmya.P

WANTED

Female Telecaller - No 10
Male marketing executive10
Event Manger -No 5
Data entry operator- No 8
contact

9743283001

ಶುಭಲಗ್ನಂ.ಕಾಂ

ಎಲ್ಲಾ ಜಾತಿಯ ವಧು ವರರಿಗೆ ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ. ನಿಮ್ಮ ಫೋಟೋ ಬಯೋಡೆಟಾ & ಜಾತಕವನ್ನು ವಾಟ್ಸಾಪ್ ಮಾಡಿರಿ : ಗುರೂಜಿ

9449408551
6361740552

shubalagnam.com

ಉಚಿತ ಉಚಿತ ಉಚಿತ

25Kg ಹಳೆಯ BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು, 2Kg ಸಕ್ಕರೆ, 1Kg ಫೈನ್ ತೊಗರಿಬೇಳೆ, ಅಥವಾ 2 ಲೀ ಸನ್‌ಪ್ಯೂರ್ ಅಡುಗೆ ಎಣ್ಣೆ ಉಚಿತ
ಬೆಲೆ ರೂ 1350/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್, ಶಿವರಾಂಪೇಟೆ ಮೋರ್ ಹತ್ತಿರ ಮೈಸೂರು

9206470833

ಬೇಕಾಗಿದ್ದಾರೆ

ಅಡುಗೆ ಭಟ್ಟರು ಮತ್ತು ಹೋಟೆಲ್ ಸಹಾಯಕರು ಬೇಕಾಗಿದ್ದಾರೆ. (ಇಡ್ಲಿ, ದೋಸೆ, ಕಾಫಿ, ಟೀ ಮಾಡಲು) ಉತ್ತಮ ಸಂಬಳ ಹಾಗೂ ವಸತಿ ಸೌಲಭ್ಯ ನೀಡಲಾಗುವುದು. ವಯೋಮಿತಿ: 18–25 ವರ್ಷ, ಸ್ಥಳ: ಮೈಸೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9964644225

ಬೇಕಾಗಿದ್ದಾರೆ

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 8 ಸಾವಿರದಿಂದ 10 ಸಾವಿರದವರೆಗೆ ಹಾಗೂ ಹುಡುಗರು ಫೀಲ್ಡ್ ವರ್ಕ್‌ಗೆ ಬೇಕಾಗಿದ್ದಾರೆ. ಸಂಬಳ: 11 ಸಾವಿರ.
ಅಫೀಸ್: ಎನ್.ಆರ್.ಮೊಹಲ್ಲಾ ಹಾಗೂ ಚಾಮುಂಡಿಪುರಂ

9535926093

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ವಶೀಕರಣ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.9741806990

ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡೇಶ್ವರಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವ್ಯಾಪಾರ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳದ ಕೇರಿ, ಮೈಸೂರು. ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಅಂಜನ ಶಾಸ್ತ್ರದ ಮೂಲಕ ಪರಿಹಾರ

ಶ್ರೀ ಅಂಜನ ದೇವಿ ಆರಾಧಕರು ಪಂ|| ಶ್ರೀನಿವಾಸ್ ಆಚಾರ್ಯ

ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಅಗುವ ಮಾತೇ ಇಲ್ಲ. ಫೋನಿನ ಮೂಲಕ ಪರಿಹಾರ.

9663466548

ಸೋಮವಾರ
ಗುರುವಾರ
ಶನಿವಾರ

ಪ್ರತಿ ಜಾಹೀರಾತಿಗೆ ರೂ.525 ಮಾತ್ರ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ–571404 ದೂ: 222026 (ಕ) ಫ್ಯಾಕ್ಸ್: 08232–222026, ಮೊ: 8762960325. E-Mail : mandya@mysurumithra.com

ಕೆ.ಆರ್.ಪೇಟೆ ಪುರಸಭೆ: ಎಂಟೂವರೆ ಕೋಟಿ ರೂ. ಆಯ–ವ್ಯಯ ಮಂಡನೆ



ಕೆ.ಆರ್.ಪೇಟೆ, ಮಾ.30(ಶ್ರೀನಿವಾಸ್)– ಪಟ್ಟಣದ ಸಮಗ್ರವಾದ ಅಭಿವೃದ್ಧಿಗೆ ಪೂರಕ 2022–23ನೇ ಸಾಲಿನ ಎಂಟೂವರೆ ಕೋಟಿ ಗಾತ್ರದ ಆಯ–ವ್ಯಯದಲ್ಲಿ 2,65,500 ರೂ.ಗಳ ಉಳಿತಾಯ ಬಜೆಟ್ ಅನ್ನು ಪುರಸಭೆ ಅಧ್ಯಕ್ಷರಾದ ಮಹಾದೇವಿನಂಜುಂಡ ಮಂಡಿಸಿದರು.

ಕೆ.ಆರ್.ಪೇಟೆ ಪಟ್ಟಣದ ಪುರಸಭೆಯ ಶಹರಿ ರೋಜ್‌ಗಾರ್ ಯೋಜನಾ ಭವನದಲ್ಲಿ ನಡೆದ ಕೌನ್ಸಿಲರ್ ಸಭೆಯಲ್ಲಿ 2022–23ನೇ ಸಾಲಿಗೆ 8 ಕೋಟಿ, 55 ಲಕ್ಷ ರೂ ಆದಾಯವನ್ನು ನಿರೀಕ್ಷೆ ಮಾಡಲಾಗಿದೆ. ಅದೇ ರೀತಿ 8 ಕೋಟಿ 52 ಲಕ್ಷ ರೂ.ಗಳ ನಿರೀಕ್ಷಿತ ವೆಚ್ಚವಾಗಲಿದ್ದು, ಸುಮಾರು 2,65000 ಉಳಿತಾಯ ಬಜೆಟ್ ಅನ್ನು ಪುರಸಭೆ ಅಧ್ಯಕ್ಷೆ ಮಹಾದೇವಿ ನಂಜುಂಡ ಮಂಡಿಸಿದರು. ಕೆ.ಆರ್.ಪೇಟೆ, ಹೊಸ ಹೊಳಲು ಅವಳಿ ಪಟ್ಟಣಗಳ ಸಮಗ್ರ ಅಭಿವೃದ್ಧಿಗೆ ಮಂಡಿಸಲಾಗಿರುವ ಆಯ–ವ್ಯಯಕ್ಕೆ ಎಲ್ಲಾ ಸದಸ್ಯರು ಒಪ್ಪಿಗೆ ಸೂಚಿಸಿ ಬಜೆಟ್ ವಿಷಯಗಳ ಮೇಲೆ ಚರ್ಚೆ ನಡೆಸುವಂತೆ ಸದಸ್ಯರಲ್ಲಿ ಮನವಿ ಮಾಡಿದರು.

ಉಳಿತಾಯ ಬಜೆಟ್ ಕುರಿತು ಮಾತನಾಡಿದ ವಿಪಕ್ಷದ ಹಿರಿಯ ಸದಸ್ಯರಾದ ಕೆ.ಸಿ.ಮಂಜುನಾಥ್, ಡಿ.ಪ್ರೇಮಕುಮಾರ್, ರವೀಂದ್ರಬಾಬು, ಹೆಚ್.ಎನ್.ಪ್ರವೀಣ್ ಮತ್ತು ಕೆ.ಬಿ.ಮಹೇಶ್ ಕ್ಷೇತ್ರದ ಶಾಸಕರು ಹಾಗೂ ಸಚಿವ ಡಾ.ನಾರಾಯಣಗೌಡರ ನೇತೃತ್ವದಲ್ಲಿ ಪಟ್ಟಣದ ಅಭಿವೃದ್ಧಿಗಾಗಿ ವಿಶೇಷ ಅನುದಾನವನ್ನು ಬಿಡುಗಡೆ ಮಾಡಿಸಲು ಸೂಕ್ತ ಕ್ರಮ ವಹಿಸಬೇಕು. ಪಟ್ಟಣದ ಅಭಿವೃದ್ಧಿಯ ದೃಷ್ಟಿಯಿಂದ ಉಳಿತಾಯ ಬಜೆಟ್ ಅನ್ನು ಸ್ವಾಗತಿಸುತ್ತೇವೆ. ಪುರಸಭೆಯ ಸದಸ್ಯರ ಗೌರವ ಧನವನ್ನು ಹೆಚ್ಚಿಸಲು ಸರ್ಕಾರಕ್ಕೆ ಶಿಫಾರಸು ಮಾಡುವುದು, ಪಟ್ಟಣದ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ತಲುಪಿಸಲು ಸದಸ್ಯರ ಅಧ್ಯಯನ ಪ್ರವಾಸ ಹಮ್ಮಿಕೊಳ್ಳಲು ಹಣ ಮೀಸಲಿಡುವುದು, ಎಸ್.ಸಿ.ಎಸ್.ಟಿ ವರ್ಗದವರಿಗೆ ಹಾಗೂ ಹಿಂದುಳಿದ ವರ್ಗಗಳ ಜನರ ಕಲ್ಯಾಣಕ್ಕೆ ಮೀಸಲಿಟ್ಟಿರುವ ಅನುದಾನವನ್ನು ನಾಲ್ಕು ಪಟ್ಟು ಹೆಚ್ಚಿಸುವುದು ಸೇರಿದಂತೆ ವಿವಿಧ ಅಭಿವೃದ್ಧಿ ವಿಚಾರಗಳ ಬಗ್ಗೆ ಸಲಹೆ ಸೂಚನೆಗಳನ್ನು ನೀಡಿದರು.

ಹೊಸಹೊಳಲು ಕ್ಷೇತ್ರದ ಸದಸ್ಯ ಎಚ್.ಆರ್.ಲೋಕೇಶ್ ಮಾತನಾಡಿ, ತಾಲೂಕಿನಲ್ಲಿ ಕಾರ್ಯನಿರ್ವಹಿಸುವ ಪತ್ರಕರ್ತರಿಗೆ ಪುರಸಭೆಯ ವತಿಯಿಂದ ಕ್ಷೇಮನಿಧಿ ಸ್ಥಾಪನೆ ಮಾಡಬೇಕು ಎಂದು ಒತ್ತಾಯ ಮಾಡಿದರು. ಆಗ ಅಧ್ಯಕ್ಷೆ ಮಹಾದೇವಿನಂಜುಂಡ ಹಾಗೂ ಮುಖ್ಯಾಧಿಕಾರಿ ಕುಮಾರ್ ಅವರು ಬಜೆಟ್‌ನಲ್ಲಿ ಸೇರಿಸುವ ಭರವಸೆ ನೀಡಿದರು.

ಸದಸ್ಯರಾದ ಕೆ.ಎಸ್.ಸಂತೋಷ್, ಹೆಚ್.ಆರ್.ಲೋಕೇಶ್, ಕೆ.ಎಸ್.ಪ್ರಮೋದ್, ಹೆಚ್.ಡಿ.ಅಶೋಕ್, ಶಾಮಿಯಾನತಿಮ್ಮೇಗೌಡ, ಗಿರೀಶ್, ಡಾ.ಕೆ.ಎಸ್.ರಾಜೇಶ್, ಹನುಮಂತರಾಜ್, ಮಹೇಶ್, ಯಶಸ್ವಿನಿ ಮಂಜುನಾಥ್, ಪದ್ಮ, ಶುಭಾಗಿರೀಶ್, ಶೋಭಾ ದಿನೇಶ್, ಕಲ್ಪನಾ ದೇವರಾಜು, ಇಂದ್ರಾಣಿ ವಿಶ್ವನಾಥ್, ಪಂಕಜಾಪ್ರಕಾಶ್, ಖಮ್ಮರ್ ಬೇಗಂ, ಹಾಜಿ ಜಬೀವುಲ್ಲಾ ಹುಸೇನ್, ಸೌಭಾಗ್ಯ ಸುಗುಣ ರಮೇಶ್, ಕೆ.ಆರ್.ನೀಲಕಂಠ ಮತ್ತಿತರರು ಪಟ್ಟಣದ ಅಭಿವೃದ್ಧಿಗೆ ಪೂರಕವಾದ ಸಲಹೆಗಳನ್ನು ನೀಡಿದರು.

ಪುರಸಭೆ ಉಪಾಧ್ಯಕ್ಷೆ ಗಾಯಿತ್ರಿಸುಬ್ಬಣ್ಣ, ಮುಖ್ಯಾಧಿಕಾರಿ ಎಂ.ಕೆ. ಕುಮಾರ್, ಮುಖ್ಯ ಲೆಕ್ಕಾಧಿಕಾರಿ ಚಂದ್ರಕಲಾ, ಪರಿಸರ ಇಂಜಿನಿಯರ್ ಅರ್ಚನಾ ಆರಾಧ್ಯ, ಲೆಕ್ಕಾಧಿಕಾರಿ ಮಂಜುಳಾ, ಆರೋಗ್ಯ ನಿರೀಕ್ಷಕ ಅಶೋಕ್ ಭಾಗವಹಿಸಿದ್ದರು.

ಮೇಲುಕೋಟೆಯಲ್ಲಿ ಟಿಪ್ಪು ಹೆಸರಲ್ಲಿ ಜಾರಿಯಲ್ಲಿರುವ

ದೀವಟಿಗೆ ಸಲಾಂ ನಿಲ್ಲಿಸಲು ಧಾರ್ಮಿಕ ಪರಿಷತ್ ಆಗ್ರಹ

ಮೇಲುಕೋಟೆ,ಮಾ.30(ಮೋಹನ್ ರಾಜ್)– ಹಿಂದೂ ಧಾರ್ಮಿಕ ಸನ್ನಿಧಿಗಳಲ್ಲಿ ಅನ್ಯ ಸಮುದಾಯದವರಿಗೆ ಅಸಹಕಾರ ಚಟುವಟಿಕೆ ಇದೀಗ ಮಂಡ್ಯ ಜಿಲ್ಲೆಗೂ ಕಾಲಿಟ್ಟಿದ್ದು, ದಶಕಗಳ ಕಾಲದಿಂದ ಮಂಡ್ಯ ಜಿಲ್ಲೆಯ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯಲ್ಲಿ ಆಚರಣೆಗೆ ಒಳಪಟ್ಟಿದ್ದ ದೀವಟಿಗೆ ಸಲಾಂ ಅನ್ನು ನಿಲ್ಲಿಸಲು ಧಾರ್ಮಿಕ ಪರಿಷತ್ತಿನ ಕಾರ್ಯಕರ್ತರು ಅಪರ ಜಿಲ್ಲಾಧಿಕಾರಿ ಹಾಗೂ ಪಾಂಡವಪುರ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದ್ದಾರೆ.

ಮೇಲುಕೋಟೆಯ ಶ್ರೀ ಚೆಲುವ ನಾರಾಯಣಸ್ವಾಮಿ ಸನ್ನಿಧಿಯಲ್ಲಿ ಪ್ರತಿನಿತ್ಯ ಸಂಜೆ 7 ಗಂಟೆ ಸಮಯದಲ್ಲಿ ದೀವಟಿಗೆ ಸಲಾಂ ಅನ್ನು ಆಚರಿಸಲಾಗುತ್ತಿದ್ದು ಯಾವುದೇ ಕೆಡುಕು ನಡೆಯದಂತೆ ಚೆಲುವನಾರಾಯಣನಿಗೆ ಸ್ಥಾನಿಕ ಅರ್ಚಕರು ಪಂಜನ್ನು ಹಿಡಿದು ಮಂಡಿಯೂರಿ ಚೆಲುವನಾರಾಯಣನ ಸನ್ನಿಧಿಯ ಹೊರಗೆ ಈ ಸಂಪ್ರದಾಯವನ್ನು ಮಾಡುತ್ತಿದ್ದರು. ಇದನ್ನು ದೀವಟಿಗೆ ಸಲಾಂ ಎಂದು ಕರೆಯಲಾಗುತ್ತಿತ್ತು. ಪಾರಂಪರಿಕವಾಗಿ ದಶಕಗಳಿಂದ ನಡೆದುಕೊಂಡು ಬಂದ ಈ ಪ್ರಾರ್ಥನೆಯನ್ನು ಈಗಲೂ ಮುಂದುವರೆಸಲಾಗುತ್ತಿದ್ದು ಇದನ್ನು ಸ್ಥಗಿತಗೊಳಿಸುವಂತೆ ಅಥವಾ ಹೆಸರು ಬದಲಿಸುವಂತೆ ಧಾರ್ಮಿಕ ಪರಿಷತ್ತಿನ ಕಾರ್ಯಕರ್ತರು ಆಗ್ರಹಿಸಿದ್ದಾರೆ.

ಏನಿದು ದೀವಟಿಗೆ ಸಲಾಂ: ಟಿಪ್ಪು ಸುಲ್ತಾನ್ ಶ್ರೀರಂಗಪಟ್ಟಣದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸಂದರ್ಭದಲ್ಲಿ ಮೇಲುಕೋಟೆ ಧಾರ್ಮಿಕ ಕ್ಷೇತ್ರವನ್ನು ವಶಪಡಿಸಿಕೊಂಡಾಗ ಪ್ರತಿನಿತ್ಯ ಸಂಜೆ 7 ಗಂಟೆ ಸಮಯದಲ್ಲಿ ದೀವಟಿಗೆ ಸಲಾಂ ಅನ್ನು ಟಿಪ್ಪು ಗೌರವಾರ್ಥ ನಡೆಸಿಕೊಂಡು ಬರಲಾಗಿತ್ತು. ಟಿಪ್ಪು ಆದೇಶದ ಮೇರೆಗೆ ಅಲ್ಲಿನ ಸ್ಥಾನಿಕ ಅರ್ಚಕರು ಪ್ರತಿನಿತ್ಯ ಸಂಜೆ 7 ಗಂಟೆಗೆ ದೀವಟಿಗೆ ಸಲಾಂ ಅನ್ನು ಆಚರಿಸುತ್ತಿದ್ದರು. ಅದರಂತೆ ಇಂದಿಗೂ ಏಳು ಗಂಟೆಯಾಗುತ್ತಲೇ ಪಂಜನ್ನು ಹಿಡಿದು ದೇವಾಲಯದ ಆವರಣದಲ್ಲಿ ಮಂಡಿಯೂರಿ ಕುಳಿತು ಪ್ರಾರ್ಥಿಸಲಾಗುತ್ತಿತ್ತು. ಇದು ಈಗ ವಿವಾದಕ್ಕೆ ಕಾರಣವಾಗಿದೆ.

ಹಿಂದೂ ದೇವಾಲಯದಲ್ಲಿ ಮುಸ್ಲಿಂ ಧರ್ಮದ ಪ್ರಾರ್ಥನೆಯಾಗಿ ದೀವಟಿಗೆ ಸಲಾಂ ಸಲ್ಲಿಸುವುದು ಎಷ್ಟು ಸರಿ. ಈ ಪಾಠನೆ ಅನುಸರಿಸಲೇಬೇಕೆಂದರೆ ಹೆಸರು ಬದಲಿಸಿ, ಇಲ್ಲವೇ ದೀವಟಿಗೆ ಸಲಾಂ ಅನ್ನೇ ರದ್ದುಗೊಳಿಸಿ ಎಂದು ಧಾರ್ಮಿಕ ಪರಿಷತ್ ಆಗ್ರಹಿಸಿ, ಎಡಿಸಿ ಶೈಲಜಾ ಅವರಿಗೆ ಮನವಿ ಸಲ್ಲಿಸಿದೆ.

ಇಂದು ಅನೆಗೊಳದಲ್ಲಿ ಧರ್ಮರಾಜ್ಯ ಸ್ಥಾಪನೆ ನಾಟಕ ಪ್ರದರ್ಶನ

ಕಿಕ್ಕೇರಿ, ಮಾ.30– ಹೋಬಳಿಯ ಅನೆಗೊಳ ಗ್ರಾಮದಲ್ಲಿ ಆಂಜನೇಯ ಶ್ರೀ ಭೈರವೇಶ್ವರ ಕೃಪಾಪೋಷಿತ ನಾಟಕ ಮಂಡಳಿ, ಜೆಡಿಎಸ್ ಅಭಿಮಾನಿ ಬಳಗದ ವತಿಯಿಂದ ಮಾ.31ರ ಗುರುವಾರ ರಾತ್ರಿ ಸುಬ್ರಹ್ಮಣ್ಯ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಎಂ. ಕಿರಣ್ ನೇತೃತ್ವದಲ್ಲಿ ಧರ್ಮರಾಜ್ಯ ಸ್ಥಾಪನೆ(ಛಲದೊಳ್ ದುರ್ಯೋಧನ) ಪೌರಾಣಿಕ ನಾಟಕ ಏರ್ಪಡಿಸಲಾಗಿದೆ. ಆದಿಚುಂಚನಗಿರಿ ಪ್ರೌಢಶಾಲಾ ಆವರಣದಲ್ಲಿ ರಾತ್ರಿ 7ಕ್ಕೆ ನಾಟಕ ನಡೆಯಲಿದ್ದು, ಅಧ್ಯಕ್ಷತೆ ಶ್ರವಣಬೆಳಗೊಳ ಕ್ಷೇತ್ರ ಶಾಸಕ ಸಿ.ಎನ್. ಬಾಲಕೃಷ್ಣ, ಉದ್ಘಾಟನೆ ರಾಜ್ಯ ಮಾರಾಟ ಮಹಾ ಮಂಡಳಿ ನಿರ್ದೇಶಕ ಸಿ.ಎನ್. ಪುಟ್ಟಸ್ವಾಮಿಗೌಡ. ಮುಖ್ಯ ಅತಿಥಿಗಳಾಗಿ ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು, ಮನ್‌ಮುಲ್ ನಿರ್ದೇಶಕ ಎಚ್.ಟಿ. ಮಂಜು, ಜೆಡಿಎಸ್ ಮುಖಂಡ ಬಿ.ಎಸ್. ಮಂಜುನಾಥ್, ಜೆಡಿಎಸ್ ತಾಲೂಕು ಅಧ್ಯಕ್ಷ ಜಾನಕೀರಾಂ, ಯುವ ಜೆಡಿಎಸ್ ಅಧ್ಯಕ್ಷ ಬಸ್ ಸಂತೋಷ್, ಹೋಬಳಿ ಅಧ್ಯಕ್ಷ ಕಾಯಿ ಮಂಜೇಗೌಡ, ಎಂಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಅಶೋಕ್, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ. ಹರೀಶ್, ಮುಖಂಡರಾದ ಬಿ.ಎಸ್. ಮಂಜುನಾಥ್, ಗದ್ದೆಹೊಸೂರು ಅಶ್ವಿನ್‌ಕುಮಾರ್, ಐನೋರಹಳ್ಳಿ ಮಲ್ಲೇಶ್, ಬಸ್ ಕೃಷ್ಣೇಗೌಡ ಮತ್ತಿತರರು ಭಾಗವಹಿಸಲಿದ್ದಾರೆ.

ಆರೋಗ್ಯ ಕಾರ್ಯಕ್ರಮ ಅನುಷ್ಠಾನದಲ್ಲಿ ಮಂಡ್ಯ ಜಿಲ್ಲೆ ಮುಂಚೂಣಿ



ಮಂಡ್ಯ, ಮಾ.30(ಮೋಹನ್‌ರಾಜ್)– ಇಡೀ ದೇಶದಲ್ಲಿಯೇ ಸರ್ಕಾರದ ಆರೋಗ್ಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಮಂಡ್ಯ ಜಿಲ್ಲೆಯು ಮುಂಚೂಣಿಯಲ್ಲಿದ್ದು, ಎಲ್ಲಾ ಇಲಾಖೆಗಳ ಸಹಕಾರದೊಂದಿಗೆ ಮಂಡ್ಯ ಮಾದರಿ ಜಿಲ್ಲೆಯಾಗಿದೆ ಎಂದು ಡಿಎಚ್‌ಓ ಡಾ. ಧನಂಜಯ ಹೇಳಿದರು.

"ವಿಶ್ವ ಕ್ಷಯರೋಗ ದಿನ" ಅಂಗವಾಗಿ ಜಿಲ್ಲೆಯ ಮಿಮ್ಸ್ ವೈದ್ಯಕೀಯ ಕಾಲೇಜಿನ ವಿಭಾಗೀಯ ಪ್ರಯೋಗಶಾಲೆಯಲ್ಲಿ IGRA ಪರೀಕ್ಷಾ ಅಭಿಯಾನವನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ಸಾಲಿನಲ್ಲಿ ರಾಜ್ಯಮಟ್ಟದಿಂದ ಸಮೀಕ್ಷೆ ನಡೆಸಲಾಗುತ್ತಿದ್ದು ಹೊಸ ಕ್ಷಯರೋಗ ಪ್ರಕರಣಗಳು ಶೇ 20 ರಷ್ಟು ಕಡಿಮೆಯಾಗಿದೆ. ಜಿಲ್ಲೆಯಲ್ಲಿ ಲಕ್ಷಕ್ಕೆ ಸಾವಿರ ಜನರಲ್ಲಿ ಟಿಬಿ ಪ್ರಕರಣಗಳು ದಾಖಲಾಗುತ್ತಿದ್ದು, ನಿಯಂತ್ರಣಕ್ಕೆ ತರುವಲ್ಲಿ ಸತತ ಪ್ರಯತ್ನ ಮಾಡಲಾಗುತ್ತಿದೆ ಎಂದರು. ಕ್ಷಯರೋಗ ನಿಯಂತ್ರಣದಲ್ಲಿ ಜಿಲ್ಲೆಗೆ ಕಂಚಿನ ಪದಕ ದೊರೆತಿದ್ದು, ಚಿನ್ನದ ಪದಕ ಪಡೆಯಲು ವೈಜ್ಞಾನಿಕವಾಗಿ ಕೆಲಸ ನಿಗದಿ ಮಾಡಿಕೊಂಡು ಹಾಗೂ ಸ್ಮಾರ್ಟ್ ವರ್ಕ್ ಮಾಡಬೇಕು. ರಾಜ್ಯದಲ್ಲಿ ಕ್ಷಯ ರೋಗ ಸಮೀಕ್ಷೆ ಮಾಡಲಾಗಿದ್ದು, ಜಿಲ್ಲೆಯು ಪದಕ ಪಡೆಯಲು ಪ್ರಮುಖವಾಗಿ ಲ್ಯಾಬ್ ಟೆಕ್ನಿಷಿಯನ್ಸ್‌ಗಳು, ಫೀಲ್ಡ್ ವರ್ಕರ್ಸ್‌ಗಳು ಕೆಲಸ ಮಾಡಿದ್ದಾರೆ ಹಾಗೂ ಎಲ್ಲಾ ಆಶಾ ಕಾರ್ಯಕರ್ತೆಯರು ಸಹ ಹೆಚ್ಚು ಶ್ರಮ ಪಟ್ಟಿದ್ದಾರೆ. ಜಿಲ್ಲೆಯಲ್ಲಿ 3ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗದಂತೆ ಮುನ್ನೆಚ್ಚರಿಕೆ ವಹಿಸುವುದು ಬಹಳ ಮುಖ್ಯ ಎಂದು ನುಡಿದರು.

ಕಾರ್ಯಕ್ರಮದಲ್ಲಿ ಮಾನಸಿಕ ರೋಗ ತಜ್ಞ ಡಾ.ಕೆ.ಪಿ.ಅಶ್ವತ್, ಕ್ಷಯರೋಗ ವಿಭಾಗದ ಅಧಿಕಾರಿ ಡಾ.ಆಶಾಲತಾ, ಡಾ.ಶಶಿಧರ್, ಸರ್ವೇಕ್ಷಣಾಧಿಕಾರಿ ಡಾ. ಸಂಜಯ್, ಡಾ. ಶಶಿಧರ್, ಬಸವರಾಜು ಮತ್ತಿತರರು ಉಪಸ್ಥಿತರಿದ್ದರು.

ಇಂದಿನಿಂದ ಬಿ.ಜಿ.ಪುರದಲ್ಲಿ ಮಂಟೇಸ್ವಾಮಿ ಯುಗಾದಿ ಜಾತ್ರೆ



ಮಳವಳ್ಳಿ, ಮಾ.30(ಮೋಹನ್‌ರಾಜ್)– ತಾಲೂಕಿನ ಐತಿಹಾಸಿಕ ಪುಣ್ಯಕ್ಷೇತ್ರ ಬಿ.ಜಿ.ಪುರ ಗ್ರಾಮದ ಧರೆಗೆ ದೊಡ್ಡವರ ಮಂಟೇಸ್ವಾಮಿಯ ಯುಗಾದಿ ಜಾತ್ರೆ ಮಾ.31 ಮತ್ತು ಏ.1ರಂದು ವಿಜೃಂಭಣೆಯಿಂದ ನಡೆಯಲಿದೆ.

ಕೋವಿಡ್‌ನಿಂದ ಕಳೆದ ಎರಡು ವರ್ಷಗಳಿಂದ ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರು ಸಿದ್ದಪ್ಪಾಜಿ, ಕೆ.ಆರ್.ನಗರ ಕಪ್ಪಡಿಯ ರಾಚಪ್ಪಾಜಿ ಜಾತ್ರೆ ಹಾಗೂ ತಾಲೂಕಿನ ಬಿ.ಜಿ.ಪುರ ಮಂಟೇಸ್ವಾಮಿ ಜಾತ್ರೆಗಳು ರದ್ದಾಗಿದ್ದವು. ಆದರೆ ಪ್ರಸ್ತುತ ವರ್ಷ ಸೋಂಕು ಕಡಿಮೆಯಾಗಿರುವುದರಿಂದ ಎಲ್ಲೆಡೆ ಜಾತ್ರೆಗಳು ನಡೆಯುತ್ತಿವೆ. ಹೀಗಾಗಿ ಏಪ್ರಿಲ್ 1 ರಂದು ನಡೆಯುವ ಎದುರು ಸೇವೆಯಲ್ಲಿ ರಾಜ್ಯದ ನಾನಾ ಭಾಗಗಳ ಸುಮಾರು 2 ಲಕ್ಷ ಮಂದಿ ಭಕ್ತರು ಮಂಟೇಸ್ವಾಮಿ ಮಠಕ್ಕೆ ಆಗಮಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಯುಗಾದಿ ಹಬ್ಬಕ್ಕೆ ಕೆಲ ದಿನಗಳ ಮುನ್ನ ಸಾವಿರಾರು ಭಕ್ತರು ಕೆ.ಆರ್.ನಗರದ ಕಪ್ಪಡಿಜಾತ್ರೆ ಹೋಗಿ ಅಲ್ಲಿಂದ ಮಠಕ್ಕೆ ಆಗಮಿಸುವ ಮುನ್ನ ತಾಲೂಕಿನ ಬಿ.ಜಿ.ಪುರ ಮಠದಿಂದ 7–8 ಕಿ.ಮೀ ದೂರದ ಪೂರಿಗಾಲಿ, ಮುಟ್ಟನಹಳ್ಳಿ, ಬಳ್ಳಗೆರೆ ತೋಪುಗಳಲ್ಲಿ ಮಾ.31ರಂದು ರಾತ್ರಿ ವಾಸ್ತವ್ಯ ಮಾಡಿ ಏ.01 ರಂದು ಎಲ್ಲರೂ ನಡೆದುಕೊಂಡು ಮಠಕ್ಕೆ ಬರುವ ಸಂಪ್ರದಾಯ ಇದೆ. ಲಕ್ಷಾಂತರ ಮಂದಿ ಭಕ್ತರಿಗೆ ಸ್ಥಳೀಯ ಜನರು ಕುಡಿಯುವ ನೀರು, ಪಾನಕ, ಮಜ್ಜಿಗೆಯನ್ನು ವಿತರಿಸುತ್ತಾರೆ. ದರ್ಶನ ಪಡೆದ ಬಳಿಕ ಮಠದ ವತಿಯಿಂದ ಅನ್ನಸಂತರ್ಪಣೆಯು ನಡೆಯಲಿದೆ. ಮರುದಿನ ಪಂಕ್ತಿಸೇವೆ, ಸಾರಪಂಕ್ತಿ ಸೇರಿದಂತೆ ಒಟ್ಟು 5 ಪಂಕ್ತಿಗಳು ನಡೆಯುವುದು ಇಲ್ಲಿನ ವಿಶೇಷ.

ಜಾತ್ರೆ ಸಿದ್ಧತೆ; ಮಂಟೇಸ್ವಾಮಿ ಮಠದ ಆಡಳಿತಾಧಿಕಾರಿ ಭರತ್‌ರಾಜ್‌ಅರಸ್ ನೇತೃತ್ವದಲ್ಲಿ ಬಿ.ಜಿ.ಪುರ, ಕೋಣನಕೊಪ್ಪಲು, ತಿಗಡಹಳ್ಳಿ, ಕಾಳಬಸವನಹುಂಡಿ, ಚಿಕ್ಕಲ್ಲೂರು ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ದೊಡ್ಡಮ್ಮತಾಯಿ ದೇವಸ್ಥಾನದ ಆವರಣ ಹಾಗೂ ಕಟ್ಟೆಯನ್ನು ಸ್ವಚ್ಛಗೊಳಿಸಿದ್ದು, ಲಕ್ಷಾಂತರ ಮಂದಿ ಭಕ್ತರು ಭಾಗಿಯಾಗುವುದರಿಂದ ಭಕ್ತರಿಗೆ ಕುಡಿಯುವ ನೀರು, ದಾಸೋಹ ವ್ಯವಸ್ಥೆ ಜೊತೆಗೆ ಶೌಚಾಲಯ, ಮುಡಿ ಕೊಡುವ ಜಾಗವನ್ನು ನಿರ್ಮಿಸಲಾಗಿದೆ. ಭಕ್ತರಿಗೆ ಯಾವುದೇ ಅನಾನುಕೂಲ ಆಗದಂತೆ ನೋಡಿಕೊಳ್ಳಲು ಸ್ವಯಂ ಯುವಕರನ್ನು ನೇಮಿಸಿಕೊಳ್ಳಲಾಗಿದೆ. ರಸ್ತೆಬದಿಯಲ್ಲಿ ವ್ಯಾಪಾರಕ್ಕೆ ಪ್ರತ್ಯೇಕ ಸ್ಥಳ ಹಾಗೂ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಸುಮಾರು 200ಕ್ಕೂ ಅಧಿಕ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಬೆಳಕವಾಡಿ ಪಿಎಸ್‌ಐ. ವಿ.ಸಿ.ಅಶೋಕ್ ನೇತೃತ್ವದಲ್ಲಿ ಮಠ ಪ್ರವೇಶಿಸುವ 5 ರಿಂದ 6 ಕಡೆ ಚೆಕ್ ಪೋಸ್ಟ್ ನಿರ್ಮಾಣ ಮಾಡಲಾಗಿದೆ.

ಕೊಳವೆ ಬಾವಿಗಳ ಕೇಬಲ್ ವೈರ್ ಕಳವು

ನಾಗಮಂಗಲ, ಮಾ.30– ಕೊಳವೆ ಬಾವಿಗಳಿಗೆ ಅಳವಡಿಸಿದ್ದ ಕೇಬಲ್ ವೈರ್‌ಗಳನ್ನು ದುಷ್ಕರ್ಮಿಗಳು ಕಳವು ಮಾಡಿರುವ ಘಟನೆ ತಾಲೂಕಿನ ದೇವಲಾಪುರ ಹೋಬಳಿಯ ಬಿಟಗೋನಹಳ್ಳಿ, ಮತ್ತು ಗೊಗ್ಗನಕೊಪ್ಪಲು ಗ್ರಾಮದ ಬಳಿ ನಡೆದಿದೆ.

ಇಲ್ಲಿನ ರೈತರು ತಮ್ಮ ಜಮೀನಿನಲ್ಲಿ ಪಂಪ್‌ಸೆಟ್ ಬಾವಿಗೆ ವಿದ್ಯುತ್ ವೈರ್ ಅಳವಡಿಸಿಕೊಂಡಿದ್ದು, ಬುಧವಾರ ಜಮೀನಿನ ಬಳಿ ನೀರು ಹಾಯಿಸಲು ಹೋದಾಗ ಜಮೀನು ಅಗೆದು ವೈರ್‌ಗಳನ್ನು ಕಳವು ಮಾಡಿರುವುದು ಕಂಡುಬಂದಿದೆ. ಗೊಗ್ಗನಕೊಪ್ಪಲು ಗ್ರಾಮದ ರಾಮಿ, ಗುರು ಕುಮಾರ ಮತ್ತು ಬಿಟಗೋನಹಳ್ಳಿ ಗ್ರಾಮದ ಸೀನ ಚಂದ್ರು, ಪದ್ಮ ಎಂಬುವರ ಪಂಪ್ ಸೆಟ್ ಬಾವಿಯ ಮೋಟಾರಿಗೆ ಅಳವಡಿಸಿದ್ದ ಸುಮಾರು ಹತ್ತು ಮಂದಿ ರೈತರ ಕೇಬಲ್ ವೈರ್‌ಗಳನ್ನು ಕಳವು ಮಾಡಿದ್ದಾರೆನ್ನಲಾಗಿದೆ.

ಯುವಕ ಆತ್ಮಹತ್ಯೆ

ನಾಗಮಂಗಲ, ಮಾ.30– ಯುವಕನೊಬ್ಬ ನಿರ್ಮಾಣವಾಗುತ್ತಿದ್ದ ಕಟ್ಟಡವೊಂದರಲ್ಲಿ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಬೆಳ್ಳೂರು ಕ್ರಾಸ್‌ನಲ್ಲಿ ನಡೆದಿದೆ. ಹೊಣಕೆರೆ ಹೋಬಳಿಯ ತಟ್ಟೆಕೆರೆ ಗ್ರಾಮದ ರಾಜೇಗೌಡರ ಮಗ ಲೋಕೇಶ್ ಆತ್ಮಹತ್ಯೆ ಮಾಡಿಕೊಂಡಿದ್ದು, ಈತ ಬೆಂಗಳೂರಿನಲ್ಲಿ ಆಟೋ ಓಡಿಸಿಕೊಂಡು ಜೀವನ ಮಾಡುತ್ತಿದ್ದನೆಂದು ತಿಳಿದು ಬಂದಿದೆ. ಮಂಗಳವಾರ ರಾತ್ರಿ ಕ್ರಾಸ್‌ನಲ್ಲಿ ತೀರ್ಥಂಕರ ಬೇಕರಿಯ ಹಿಂಭಾಗದಲ್ಲಿ ಪುಟ್ಟರಾಜು ಎಂಬುವವರು ನಿರ್ಮಾಣ ಮಾಡುತ್ತಿರುವ ಕಟ್ಟಡದಲ್ಲಿ ಹಗ್ಗದಿಂದ ನೇಣುಹಾಕಿ ಕೊಂಡ ಸ್ಥಿತಿಯಲ್ಲಿ ಕಂಡುಬಂದಿದ್ದು, ಈ ಬಗ್ಗೆ ಬೆಳ್ಳೂರು ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದುಷ್ಕರ್ಮಿಗಳಿಂದ ರಾಗಿ ಹುಲ್ಲು ಮೆದೆಗೆ ಬೆಂಕಿ



ನಾಗಮಂಗಲ, ಮಾ.30(ಮಹೇಶ್)– ತಾಲೂಕಿನ ಪಡುವಲ ಪಟ್ಟಣ ಗ್ರಾಮದ ಹೊರವಲಯದ ಜಮೀನಿನಲ್ಲಿ ರಾಗಿ ಹುಲ್ಲಿನ ಮೆದೆಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿರುವ ಘಟನೆ ಬುಧವಾರ ಬೆಳಗಿನ ಜಾವ ನಡೆದಿದೆ.

ಮೂರು ದಿನಗಳ ಹಿಂದೆ ರಾಮೇಗೌಡ ಎಂಬುವರ ಹುಲ್ಲಿನ ಮೆದೆಗೆ ಬೆಂಕಿ ಹಾಕಲಾಗಿತ್ತು. ಇದೀಗ ಮತ್ತೆ ಮಂಜುನಾಥ್ ಹಾಗೂ ಶಿವಣ್ಣ ಎಂಬುವರ ಹುಲ್ಲಿನ ಮೆದೆಗೆ ಬೆಂಕಿ ಹಾಕಿರುವುದು ಗ್ರಾಮಸ್ಥರಲ್ಲಿ ಭಯ ಉಂಟು ಮಾಡಿದೆ. ಬೆಂಕಿ ಬಿದ್ದಿರುವುದನ್ನು ಕಂಡು ಗ್ರಾಮಸ್ಥರು ಸ್ಥಳಕ್ಕೆ ದೌಡಾಯಿಸಿ ಬೆಂಕಿ ನಂದಿಸಲು ಪ್ರಯತ್ನಿಸಿದರಾದರೂ ಬೆಂಕಿಯ ತೀವ್ರತೆಯಿಂದಾಗಿ ಸಾಧ್ಯವಾಗಲಿಲ್ಲ. ಕೂಡಲೇ ಅಗ್ನಿಶಾಮಕ ದಳಕ್ಕೆ ಕರೆ ಮಾಡಲಾಯಿತಾದರೂ ಅವರು ಬರುವಷ್ಟರಲ್ಲಿ ಎರಡು ಮೆದೆಗಳು ಸಂಪೂರ್ಣವಾಗಿ ಸುಟ್ಟು ಬೂದಿಯಾಗಿತ್ತು. ಇದರಿಂದ ಒಟ್ಟು ಒಂದು ಲಕ್ಷಕ್ಕೂ ಹೆಚ್ಚು ಬೆಲೆ ಬಾಳುವ ಹುಲ್ಲು ಭಸ್ಮವಾಗಿದೆ.

ಹುಲ್ಲು ಮೆದೆ ನಾಶವಾಗಿರುವ ರೈತರಿಗೆ ಕೂಡಲೇ ಪರಿಹಾರ ನೀಡಬೇಕು. ಜೊತೆಗೆ ಇಂಥ ಅವಘಡಗಳು ಮರುಕಳಿಸದಂತೆ ಪೊಲೀಸ್ ಇಲಾಖೆ ಎಚ್ಚರವಹಿಸಿ ದುಷ್ಕರ್ಮಿಗಳ ಬಂಧನಕ್ಕೆ ಕ್ರಮವಹಿಸಬೇಕೆಂದು ಗ್ರಾಮದ ಮುಖಂಡ ಪಿ.ಜೆ.ಜಯರಾಂ ಒತ್ತಾಯಿಸಿದ್ದಾರೆ.

ಕುಂಬಾರಕೊಪ್ಪಲು ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಚಿನಕುರಳಿ, ಮಾ.30(ಸಿ.ಎ.ಲೋಕೇಶ್)– ಇಲ್ಲಿನ ಸಮೀಪದ ಕುಂಬಾರಕೊಪ್ಪಲು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಅಧ್ಯಕ್ಷೆಯಾಗಿ ನಾಗಮ್ಮ, ಉಪಾಧ್ಯಕ್ಷೆಯಾಗಿ ಪ್ರೇಮ ಅವಿರೋಧವಾಗಿ ಆಯ್ಕೆಯಾದರು.

9 ಮಂದಿ ನಿರ್ದೇಶಕರ ಬಲ ಹೊಂದಿರುವ ಡೈರಿಯ ನೂತನ ಆಡಳಿತ ಮಂಡಳಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ನಾಗಮ್ಮ, ಉಪಾಧ್ಯಕ್ಷ ಸ್ಥಾನಕ್ಕೆ ಪ್ರೇಮ ನಾಮಪತ್ರ ಸಲ್ಲಿಸಿದರು. ಇವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಸಂಘದ ನೂತನ ಅಧ್ಯಕ್ಷರಾಗಿ ನಾಗಮ್ಮ, ಉಪಾಧ್ಯಕ್ಷರಾಗಿ ಪ್ರೇಮ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಎಂ.ಎಸ್.ಪಾರ್ವತಮ್ಮ ಘೋಷಿಸಿದರು.

ನೂತನ ಅಧ್ಯಕ್ಷೆ ನಾಗಮ್ಮ, ಉಪಾಧ್ಯಕ್ಷೆ ಪ್ರೇಮ ಅವರನ್ನು ಎಲ್ಲಾ ನಿರ್ದೇಶಕರು ಮುಖಂಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಚಿಕ್ಕತಾಯಮ್ಮ, ಜಯಮ್ಮ, ಗೀತ, ಪುಟ್ಟ ಲಕ್ಷ್ಮಿ, ಅರ್ಪಿತ, ವರಲಕ್ಷ್ಮಿ, ಸವಿತ, ಕಾರ್ಯದರ್ಶಿ ವರಲಕ್ಷ್ಮಿ, ಯಜಮಾನರು, ಹಿರಿಯ ಮುಖಂಡರು ಹಾಜರಿದ್ದರು.

ಏ.1ರಂದು ಸಿದ್ಧಗಂಗಾ ಶಿವಕುಮಾರಸ್ವಾಮಿಗಳ ಜಯಂತಿಗೆ ಸಿದ್ಧತೆ



ಕೆ.ಆರ್.ಪೇಟೆ, ಮಾ.30– ತ್ರಿವಿಧ ದಾಸೋಹಿಗಳಾದ ಪದ್ಮಭೂಷಣ, ಕರ್ನಾಟಕ ರತ್ನ ಶ್ರೀ ಶಿವಕುಮಾರ ಸ್ವಾಮೀಜಿಗಳ 115 ನೇ ಹುಟ್ಟುಹಬ್ಬದ ಅಂಗವಾಗಿ ಏಪ್ರಿಲ್ 1ರಂದು ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಗೆ ಅನ್ನದಾನ, ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಕಾರ್ಯಕ್ರಮ, ಬಡವರಿಗೆ ವಸ್ತ್ರದಾನ, ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ತಾಲೂಕು ಘಟಕದ ಅಧ್ಯಕ್ಷ ವಿ.ಎಸ್. ಧನಂಜಯಕುಮಾರ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾರ್ಯಕ್ರಮದ ಹಿನ್ನೆಲೆಯಲ್ಲಿ ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಪದಾಧಿಕಾರಿಗಳ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಏ.1 ರಂದು ಪ್ರವಾಸಿ ಮಂದಿರದಲ್ಲಿ ಡಾ.ಶಿವಕುಮಾರ ಮಹಾ ಸ್ವಾಮೀಜಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಸಿಹಿ ವಿತರಣೆ ಮಾಡಿ ನಂತರ ತಾಲೂಕು ಕಚೇರಿಗೆ ಮೆರವಣಿಗೆಯ ಮೂಲಕ ತೆರಳಿ ಜಗದ್ಗುರುಗಳಿಗೆ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಪತ್ರವನ್ನು ತಹಸೀಲ್ದಾರ್ ಮೂಲಕ ನೀಡಲಾಗುವುದು. ನಂತರ ಸಾರ್ವಜನಿಕರಿಗೆ ಅನ್ನದಾನ, ಬಡವರಿಗೆ ವಸ್ತ್ರದಾನ, ವಿದ್ಯಾರ್ಥಿಗಳಿಗೆ ಲೇಖನ ಸಾಮಗ್ರಿ ವಿತರಣೆ ಹಮ್ಮಿಕೊಳ್ಳಲಾಗಿದೆ ಎಂದರು.

ಸಭೆಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎಸ್.ಈರಪ್ಪ, ಉಪಾಧ್ಯಕ್ಷರಾದ ಎಂ.ಪಿ.ಪ್ರಕಾಶ್, ಜಯನಂದಿನಿ, ನಂಜುಂಡಪ್ಪ, ಸಂಘದ ಹಿರಿಯ ನಿರ್ದೇಶಕ ಮಹದೇಶ್, ವಸಂತಪ್ಪ, ಮಹೇಂದ್ರಕುಮಾರ್, ಶಿವಮೂರ್ತಿ, ಮಹಾ ಪೋಷಕ ವೀರಪ್ಪ, ಮೀನಾಕ್ಷಿನಿಂಗರಾಜು, ಶ್ರುತಿ ನಾಗೇಂದ್ರ, ಪುರಸಭಾ ಸದಸ್ಯ ಡಾ.ಕೆ.ಎಸ್.ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ನಗರ ಸುದ್ದಿಗಳು..

ರಾಜ್ಯದಲ್ಲಿ ಕೊರೊನಾ ಭಾರೀ ಇಳಿಕೆ: 35 ಮಂದಿಗೆ ಪಾಸಿಟಿವ್; 1 ಸಾವು!

ಬೆಂಗಳೂರು, ಮಾ.30– ರಾಜ್ಯದಲ್ಲಿ ಕೊರೊನಾ ಮೂರನೇ ಅಲೆಯ ಅಬ್ಬರ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿದ್ದು, ಕಳೆದ 24 ಗಂಟೆಯಲ್ಲಿ ಕೇವಲ 35 ಹೊಸ ಪಾಸಿಟಿವ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸೋಂಕಿತರ ಸಂಖ್ಯೆ 39,45,436ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೊನಾದಿಂದ ಇಂದು ಒಬ್ಬರು ಮಾತ್ರ ಮೃತಪಟ್ಟಿದ್ದಾರೆ. ಇದರೊಂದಿಗೆ ಸಾವಿನ ಸಂಖ್ಯೆ 40,053ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 25 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 17,81,573ಕ್ಕೆ ಏರಿಕೆಯಾಗಿದೆ ಇಂದು ರಾಜಧಾನಿಯಲ್ಲಿ ಕೊರೊನಾದಿಂದ ಯಾವುದೇ ಸಾವು ಸಂಭವಿಸಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 105 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 39,03,756 ಕ್ಕೆ ಏರಿಕೆಯಾಗಿದೆ ಇನ್ನು 1,585 ಸಕ್ರಿಯ ಪ್ರಕರಣಗಳಿವೆ.

ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಸಂಸ್ಥೆಯಿಂದ ಶೇರುದಾರರಿಗೆ ಶೇ.25ರಷ್ಟು ಡಿವಿಡೆಂಡ್


ಸರ್ಕಾರದ ಡಿವಿಡೆಂಡ್ 23.68 ಲಕ್ಷದ ಚೆಕ್ ಸಿಎಂಗೆ ಹಸ್ತಾಂತರ



ಮೈಸೂರು, ಮಾ.30–ಪ್ರತಿಷ್ಠಿತ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಸಂಸ್ಥೆಯು 2020–21ನೇ ಸಾಲಿನಲ್ಲಿ 39.75 ಕೋಟಿ ರೂ.ಗಳಷ್ಟು ವಹಿವಾಟು ನಡೆಸಿ 6.75 ಕೋಟಿ ರೂ. ತೆರಿಗೆ ಮುಂಚಿನ ಲಾಭ ಗಳಿಸಿದೆ.

ಸಂಸ್ಥೆಯು ತನ್ನ ಶೇರುದಾರರಿಗೆ ಶೇ.25ರಷ್ಟು ಡಿವಿಡೆಂಡ್ ಘೋಷಿಸಿದೆ. ಅದರಂತೆ ಕರ್ನಾಟಕ ಸರ್ಕಾರದ ಡಿವಿಡೆಂಡ್ ಮೊತ್ತ 23,68,250 ರೂ.ಗಳ ಚೆಕ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸ್ಥೆ ಪರವಾಗಿ ನೀಡಲಾಯಿತು. ಈ ವೇಳೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ.ನಾಗರಾಜ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರವಿಕುಮಾರ್, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ರಮಣ ರೆಡ್ಡಿ, ಶ್ರೀಮತಿ ವಂದಿತಾ ಶರ್ಮಾ, ಸಂಸ್ಥೆ ನಿರ್ದೇಶಕ ಭರತ್ ಕುಮಾರ್, ವ್ಯವಸ್ಥಾಪಕ ನಿರ್ದೇಶಕ ಹರಕುಮಾರ್ ಉಪಸ್ಥಿತರಿದ್ದರು.

ತಾತ, ತಂದೆ ಬಿಟ್ಟು ಜೆಡಿಎಸ್ ಜಿಲ್ಲಾ ಪಂಚಾಯತ್‌ನಲ್ಲಿ ಗೆದ್ದು ತೋರಿಸಲಿ



ನಿಖಿಲ್‌ಗೆ ಸಂಸದೆ ಸುಮಲತಾ ಸವಾಲು



ನವದೆಹಲಿ, ಮಾ.30– ಸಂಸದೆ ಸುಮಲತಾ ಅಂಬರೀಶ್ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನಡುವೆ ಮಂಡ್ಯದಲ್ಲಿ 2019ರ ಲೋಕಸಭಾ ಚುನಾವಣೆ ವೇಳೆ ಜಟಾಪಟಿ ನಡೆದಿತ್ತು. ಅಂದು ಆರಂಭವಾದ ವಾಕ್ಸಮರ ಈವರೆಗೂ ನಿಂತಿಲ್ಲ.

'ನಿಖಿಲ್ ಕುಮಾರಸ್ವಾಮಿ ಅವರ ಪಕ್ಷ, ತಾತ, ತಂದೆ ಹೆಸರು ಬಿಟ್ಟು ಜಿಲ್ಲಾ ಪಂಚಾಯತ್ ಚುನಾವಣೆ ಗೆಲ್ಲಲಿ, ಗೆದ್ದ ಬಂದು ಆಮೇಲೆ ನನಗೆ ಸಲಹೆ ನೀಡಲಿ ಎಂದು ಸುಮಲತಾ ಸವಾಲು ಹಾಕಿದ್ದಾರೆ.

ದೆಹಲಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸುಮಲತಾ, ಜೆಡಿಎಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ಸುಮಲತಾ ಅಂಬರೀಶ್ ಬಗ್ಗೆ ಮಾತನಾಡಿದರೆ ಮೈಲೇಜ್ ಸಿಗುತ್ತದೆ ಎಂದು ಜೆಡಿಎಸ್ ಯುವ ನಾಯಕರಿಗೆ ಗೊತ್ತಾಗಿದೆ. ಮಾಧ್ಯಮಗಳಲ್ಲಿ ವರದಿಯಾಗಲೆಂದೇ ಮಾತನಾಡುತ್ತಾರೆ ಎಂದು ನಿಖಿಲ್ ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದರು.

ನಿಖಿಲ್ ಕುಮಾರಸ್ವಾಮಿಗೆ ಸುಮಲತಾ ತಿರುಗೇಟು: ಈಗ ನಿಖಿಲ್ ಕುಮಾರಸ್ವಾಮಿ ರಾಜಕೀಯದಲ್ಲಿ ಬಹಳ ಅನುಭವಿಯಂತೆ ಸಲಹೆ ನೀಡಿದ್ದಾರೆ. ನನ್ನ ಸಾಧನೆ ಏನು? ನನ್ನ ಕೊಡುಗೆ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಅವರು ಚಿಕ್ಕವರಾದರೂ ಪರವಾಗಿಲ್ಲ. ನನ್ನಿಂದ ತಪ್ಪಾಗಿದ್ದರೆ ಸಲಹೆ ಸ್ವೀಕರಿಸುವೆ. ಆದರೆ ಅವರು ಫ್ಯಾಕ್ಟ್ ಇಟ್ಟುಕೊಂಡು ಮಾತನಾಡಬೇಕು. ಅವರು ಸೋತವರು, ಸೋತವರು ಗೆದ್ದವರಿಗೆ ಬುದ್ದಿ ಹೇಳುವುದನ್ನು ಬಿಡಬೇಕು ಎಂದು ನಿಖಿಲ್ ಕುಮಾರಸ್ವಾಮಿಗೆ ಸುಮಲತಾ ತಿರುಗೇಟು ನೀಡಿದರು.

ಅಭಿಷೇಕ್ ನನ್ನ ಮಾತು ಕೇಳಲ್ಲ: ಅಭಿಷೇಕ್ ಅಂಬರೀಶ್ ಮಗ ಅವನು ಯಾರ ಮಾತನ್ನೂ ಕೇಳುವುದಿಲ್ಲ. ಚುನಾವಣೆಗೆ ನಿಲ್ಲುವ ಬಗ್ಗೆ ಅವನೇ ನಿರ್ಧಾರ ಮಾಡಬೇಕು. ಮಂಡ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಿಂದ ಅಭಿಷೇಕ್ ಸ್ಪರ್ಧೆ ಮಾಡಬೇಕು ಎಂಬ ಆಹ್ವಾನ ಬರುತ್ತಿವೆ. ಮಂಡ್ಯದಲ್ಲಿ ಅಭಿಷೇಕ್‌ಗೆ ಜನರ ಪ್ರೀತಿ ಸಿಗುತ್ತಿದೆ. ಚುನಾವಣೆ ಸ್ಪರ್ಧೆ ಮಾಡಿ ಎಂದು ಜನರು ಎಲ್ಲಾ ಕಡೆ ಹೇಳುತ್ತಿದ್ದಾರೆ. ರಾಷ್ಟ್ರೀಯ ಪಕ್ಷಗಳಿಂದ ಹಿಡಿದು ಎಲ್ಲಾ ಪಕ್ಷಗಳು ಟಿಕೆಟ್ ನೀಡಲು ಸಿದ್ದವಿವೆ. ಆದರೆ ಸದ್ಯ ಅಭಿಷೇಕ ರಾಜಕೀಯದ ಬಗ್ಗೆ ನಿರ್ಧಾರ ಮಾಡಿಲ್ಲ.

ಕೆಲ ನಾಯಕರು ನನ್ನ ಪ್ರತಿಕ್ರಿಯೆಯ ನಿರೀಕ್ಷೆ ಮಾಡುತ್ತಿದ್ದಾರೆ. ನಾನು ಏನೂ ಹೇಳಿಲ್ಲ ಎಂದು ಬೇಜಾರು ಮಾಡಿಕೊಂಡಿದ್ದಾರೆ. ಆದರೆ ಅಭಿಷೇಕ್ ಏನನ್ನೂ ತೀರ್ಮಾನ ಮಾಡಿಲ್ಲ. ಸದ್ಯ ಅಭಿಷೇಕ್ ಸಿನಿಮಾದ ಮೇಲೆ ಹೆಚ್ಚು ಗಮನ ಹರಿಸಿದ್ದಾನೆ. ಮುಂದಿನ ಮಾರ್ಚ್ ಅಥವಾ ಎಪ್ರಿಲ್ ತಿಂಗಳಲ್ಲಿ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಜೊತೆಗೆ 'ನಾನು ವಿಧಾನಸಭೆ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಮೈಸೂರಲ್ಲಿ ಮಹಿಳೆ ಸರ ಕಳವು



ಮೈಸೂರು, ಮಾ.30(ಎಸ್‌ಬಿಡಿ)– ಖದೀಮರು ಮಹಿಳೆಯ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಮೈಸೂರಿನ ವಿಜಯನಗರ ಸಮೀಪದ ಮಹದೇಶ್ವರ ಬಡಾವಣೆಯಲ್ಲಿ ಬುಧವಾರ ಸಂಜೆ ನಡೆದಿದೆ. ಬಡಾವಣೆಯ ಮಹಿಳೆಯೊಬ್ಬರು ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಪಲ್ಸರ್ ಬೈಕ್‌ನಲ್ಲಿ ಬಂದ ಇಬ್ಬರು ಖದೀಮರು ಈ ದುಷ್ಕೃತ್ಯ ವೆಸಗಿದ್ದಾರೆ. ಹಠಾತ್ತನೆ ಮಹಿಳೆಯ ಸರ ಕಿತ್ತುಕೊಂಡು ಬೈಕ್ ಅನ್ನು ವೇಗವಾಗಿ ಚಾಲಿಸಿಕೊಂಡು ಪರಾರಿಯಾಗಿದ್ದಾರೆ ಎಂದು ತಿಳಿದು ಬಂದಿದೆ. ಈ ಸಂಬಂಧ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸರಗಳ್ಳರ ಸೆರೆಗೆ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಮೈಸೂರು ಮಿತ್ರ ಕೊಡಗು ಕಛೇರಿ: ಪೂಜಾ ಆರ್ಕೇಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ಅರಣ್ಯ ಶಾಸ್ತ್ರ ಪದವೀಧರರಿಗೆ ಮೀಸಲಾತಿ ಕಡಿತ

ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳ ಪ್ರತಿಭಟನೆ



ಗೋಣಿಕೊಪ್ಪ, ಮಾ.30– ಅರಣ್ಯ ಇಲಾಖೆ ಹುದ್ದೆಯಲ್ಲಿ ಅರಣ್ಯ ಶಾಸ್ತ್ರ ಪದವೀಧರರಿಗೆ ಮೀಸಲಿಟ್ಟಿದ್ದ ಶೇ.75ರ ಮೀಸಲಾತಿಯನ್ನು ಶೇ.50ಕ್ಕೆ ಕಡಿತಗೊಳಿಸಿರುವುದನ್ನು ಖಂಡಿಸಿ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಕಾಲೇಜು ಆವರಣದಿಂದ ಮೆರವಣಿಗೆ ಮೂಲಕ ತಹಸೀಲ್ದಾರ್ ಕಚೇರಿಗೆ ಆಗಮಿಸಿದ ವಿದ್ಯಾರ್ಥಿಗಳು ಸರ್ಕಾರದ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಇಲಾಖೆಯ ಎ, ಬಿ ಮತ್ತು ಸಿ ಗ್ರೂಪ್ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಅರಣ್ಯ ಶಾಸ್ತ್ರದಲ್ಲಿ ಬಿಎಸ್ಸಿ ಪದವಿ ಪಡೆದವರಿಗೆ ಶೇ. 75 ಮೀಸಲಾತಿ ನೀಡಲಾಗಿತ್ತು. ಇದೀಗ ಶೇ.50ಕ್ಕೆ ಇಳಿಸಿರುವುದು ಸರಿಯಲ್ಲ. ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿ ಚಿಂತನೆಯಲ್ಲಿ ಶ್ರಮಿಸಲು ಸರ್ಕಾರಿ ಹುದ್ದೆ ನೀಡಿ ದೇಶ ಮಾದರಿಯಾಗಿತ್ತು. ಅರಣ್ಯ ಕಾರ್ಯ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಹೆಚ್ಚು ಕೆಲಸ ನಿರ್ವಹಿಸಿರುತ್ತಾರೆ. ತರಬೇತಿ ಕೇಂದ್ರಗಳಲ್ಲಿ ಚಿನ್ನ, ಬೆಳ್ಳಿ, ಮುಖ್ಯಮಂತ್ರಿ ಪದಕ, ಯಂಗ್ ಸೈಂಟಿಸ್ಟ್, ಅರಣ್ಯ ಸೇವಾ ಪ್ರಶಸ್ತಿ, ಪ್ರಕೃತಿ ಮಿತ್ರ, ಸರ್ವೋತ್ತಮ ಪ್ರಶಸ್ತಿ ಪಡೆದಿರುವ ಅಧಿಕಾರಿಗಳು ಹೆಚ್ಚಿದ್ದಾರೆ. ಇದಕ್ಕೆಲ್ಲಾ ಅರಣ್ಯ ಶಾಸ್ತ್ರ ಮೂಲವಾಗಿದ್ದು, ಹೆಚ್ಚಿನ ವಿದ್ಯಾರ್ಥಿಗಳು ಅರಣ್ಯ ಶಾಸ್ತ್ರಕ್ಕೆ ಮೊರೆ ಹೋಗಿದ್ದಾರೆ. ಆದರೆ, ಸರ್ಕಾರ ನಮ್ಮ ಮೀಸಲಾತಿ ಹಕ್ಕನ್ನು ಕಿತ್ತುಕೊಂಡಿದೆ ಎಂದು ಆರೋಪಿಸಿದರು.

ಅರಣ್ಯ ವಿದ್ಯಾರ್ಥಿಗಳು ಕೃಷಿ ವಿಜ್ಞಾನ, ತೋಟಗಾರಿಕೆ, ಪಶು ವೈದ್ಯಕೀಯ, ರೇಷ್ಮೆ ಕೃಷಿ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಗಳ ನೇರ ನೇಮಕಾತಿಯಲ್ಲಿ ಆಯಾ ವಿಷಯದ ಪದವಿಯನ್ನೇ ಕನಿಷ್ಠ ವಿದ್ಯಾರ್ಹತೆಯನ್ನಾಗಿ ಕಡ್ಡಾಯಗೊಳಿಸಲಾಗಿದೆ. ಅದರಂತೆ ಅರಣ್ಯ ಶಾಸ್ತ್ರ ಕೂಡ ಪ್ರತ್ಯೇಕವಾಗಿದ್ದು, ನಮಗೆ ನಮ್ಮ ಮಾತ್ರ ಇಲಾಖೆಯಲ್ಲಿ ಸಂಪೂರ್ಣ ಮೀಸಲಾತಿ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಭಾರತೀಯ ಅರಣ್ಯ ನೀತಿಯಲ್ಲಿ ಅರಣ್ಯ ಸೇವೆ ಮತ್ತು ರಾಜ್ಯ ಅರಣ್ಯ ಸೇವೆಗಳಲ್ಲಿ ತಾಂತ್ರಿಕ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಲು ಅರಣ್ಯ ಶಾಸ್ತ್ರ ಪದವಿ ಪಡೆದಿರುವ ಬಗ್ಗೆ ಉಲ್ಲೇಖವಿದೆ. ಪರಿಸರ ನಾಶ ತಡೆಯಲು, ಅವೈಜ್ಞಾನಿಕ ಅರಣ್ಯ ಸಂರಕ್ಷಿಸಲು ಅರಣ್ಯ ಪದವೀಧರರಿಗೆ ಅವಕಾಶ ನೀಡಲು ನಿಯಮವಿದೆ. ಸರ್ಕಾರ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು. ಈ ವೇಳೆ ಶಿರಸ್ತೇದಾರ್ ರಾಧಾಕೃಷ್ಣ ಮನವಿ ಸ್ವೀಕರಿಸಿ ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ವಿರಾಜಪೇಟೆ ಪಪಂಗೆ 20 ಲಕ್ಷ ರೂ. ಉಳಿತಾಯ ಬಜೆಟ್



ವಿರಾಜಪೇಟೆ, ಮಾ.30– ಇಲ್ಲಿನ ಪಪಂ ಸಭಾಂಗಣದಲ್ಲಿ 2022–23ನೇ ಸಾಲಿನ ಬಜೆಟ್ ಮಂಡನಾ ಸಭೆ ಅಧ್ಯಕ್ಷೆ ಸುಶ್ಮಿತಾ ಅಧ್ಯಕ್ಷತೆಯಲ್ಲಿ ನಡೆಯಿತು.

2022–23ನೇ ಸಾಲಿನ ಬಜೆಟ್ ಮಂಡಿಸಿದ ಅಧ್ಯಕ್ಷೆ ಸುಶ್ಮಿತಾ, ಬಜೆಟ್‌ನ ಮೊತ್ತ 19,13,93,500 ರೂ. ಆಗಿದೆ. ಆರಂಭಿಕ ಶಿಲ್ಕು 5,43,75,023 ರೂ. ಹಾಗೂ ನಿರೀಕ್ಷಿತ ಆದಾಯ 3,90,18,500 ರೂ. ಸೇರಿದಂತೆ ಒಟ್ಟು 19,33,93,523 ರೂ. ಆದಾಯ ಸಂಗ್ರಹವಾಗುವ ನಿರೀಕ್ಷೆಯಿದೆ. ಇದರಲ್ಲಿ 19,13,93,500 ರೂ.ಗಳನ್ನು ವಿವಿಧ ಖರ್ಚುಗಳಿಗೆ ಬಳಸುವುದರಿಂದ 20 ಲಕ್ಷ ರೂ. ಉಳಿತಾಯವಾಗುವ ನಿರೀಕ್ಷೆ ಇದೆ ಎಂದರು.

ಸದಸ್ಯ ಸಿ.ಕೆ.ಪೃಥ್ವಿನಾಥ್ ಮಾತನಾಡಿ, ಈ ಬಾರಿಯ ಬಜೆಟ್‌ನಲ್ಲಿ ಪಟ್ಟಣದ ಜನತೆಗೆ ಹೊಸ ಯೋಜನೆ ಅಥವಾ ಕೊಡುಗೆ ನೀಡಿಲ್ಲ. ಕುಡಿಯುವ ನೀರಿಗೆ ಹೆಚ್ಚು ತೆರಿಗೆ ವಿಧಿಸಿದ್ದೀರಿ. ಅನೇಕ ವರ್ಷಗಳಿಂದ ಹಳೆ ಪಂಚಾಯಿತಿ ಕಟ್ಟಡದಲ್ಲಿಯೇ ಇದ್ದೇವೆ. ಪಪಂಗೆ ನೂತನ ಕಟ್ಟಡದ ಅವಶ್ಯಕತೆ ಇದ್ದು, ಬಜೆಟ್‌ನಲ್ಲಿ ಅನುದಾನ ಇಡಬಹುದಿತ್ತು ಎಂದರು.

ಸದಸ್ಯ ಮಹಮ್ಮದ್ ರಫಿ ಮಾತನಾಡಿ, ಪಟ್ಟಣ ವ್ಯಾಪ್ತಿಯ ರಾಜ ಕಾಲುವೆ ಹೂಳೆತ್ತಲು ಈ ಹಿಂದೆ ನಡೆದ ಪೂರ್ವಭಾವಿ ಸಭೆಯಲ್ಲಿ ಅನುದಾನ ಕೋರಲಾಗಿತ್ತು. ಆದರೆ ಇದಕ್ಕೆ ಬಜೆಟ್‌ನಲ್ಲಿ ಯಾವುದೇ ಅನುದಾನ ಒದಗಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ಇದು ಉಳಿತಾಯ ಬಜೆಟ್ ಅಲ್ಲ. ಇದು ನಿರಾಶದಾಯಕ ಖೋತಾ ಬಜೆಟ್. ನೀರಿನ ಕರ ಮತ್ತು ಆಸ್ತಿ ತೆರಿಗೆ ಹೆಚ್ಚಿಸಲಾಗಿದೆ. ಈ ಹಿಂದೆ ಸುಮಾ ವಸಂತ್ ಸಚಿವರಾಗಿದ್ದ ಸಂದರ್ಭ ಪಟ್ಟಣಕ್ಕೆ ಕಾವೇರಿ ನೀರನ್ನು ಒದಗಿಸುವ ಯೋಜನೆ ತರಲಾಯಿತು. ಆದರೆ ಇದೀಗ ಪಟ್ಟಣಕ್ಕೆ ಸಮಗ್ರ ಕುಡಿಯುವ ನೀರನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ ಎಂದಾಗ ಸದಸ್ಯರಾದ ರಂಜಿ ಪೂಣಚ್ಚ ಮತ್ತು ಅಗಸ್ಟಿನ್ ಬೆನ್ನಿ ಧ್ವನಿಗೂಡಿಸಿದರು. ಈ ವೇಳೆ ಎಂ.ಕೆ. ದೇಚಮ್ಮ ಮಾತನಾಡಿ, ನೀರಿನ ಕರ ಹೆಚ್ಚಳ ಸಂಬಂಧ ಮುಂದಿನ ಸಾಮಾನ್ಯ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದರು.

ಸದಸ್ಯ ಸಚಿನ್ ಕುಟ್ಟಯ್ಯ ಮಾತನಾಡಿ, ಕುಡಿಯುವ ನೀರಿನ ಯೋಜನೆ ಪೂರ್ಣಗೊಳಿಸಿದವರು ಶಾಸಕ ಕೆ.ಜಿ.ಬೋಪಯ್ಯ. ಪಟ್ಟಣದಲ್ಲಿ ಹೆಚ್ಚು ಜನಸಂಖ್ಯೆ ಇರುವುದರಿಂದ ಕಾವೇರಿ ನೀರನ್ನು ಒದಗಿಸುವ 2ನೇ ಹಂತದ ಯೋಜನೆಗೆ ಅನುದಾನ ನೀಡುವ ಭರವಸೆಯನ್ನು ಶಾಸಕರು ನೀಡಿದ್ದು, ಶೀಘ್ರ ಕಾರ್ಯ ರೂಪಕ್ಕೆ ಬರಲಿದೆ ಎಂದರು.

ಸದಸ್ಯ ರಜನಿಕಾಂತ್ ಮಾತನಾಡಿ, ಪಟ್ಟಣದ ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿ ಅಭಿವೃದ್ಧಿಗೆ ಹೆಚ್ಚಿನ ಅನುದಾನದ ಅಗತ್ಯವಿದೆ. ಕಡು ಬಡವರಿಗೆ ಮನೆ, ನಿವೇಶನ ನೀಡಬೇಕು. ಇದರ ಬಗ್ಗೆ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಪಪಂ ಉಪಾಧ್ಯಕ್ಷ ವಿನಾಂಕ್ ಕುಟ್ಟಪ್ಪ, ಮುಖ್ಯಾಧಿಕಾರಿ ಚಂದ್ರ ಕುಮಾರ್, ಸದಸ್ಯರಾದ ಮಹಾದೇವ್, ಆಶಾ ಸುಬ್ಬಯ್ಯ, ಮತೀನ್, ಯಶೋಧ, ಅನಿತಾ ಮಾತನಾಡಿದರು. ಪಂಚಾಯಿತಿ ಸಿಬ್ಬಂದಿ ಹಾಜರಿದ್ದರು.

ಕಂಡಂಗಾಲದಲ್ಲಿ ಹುಲಿ ಸೆರೆಗೆ ಕಾರ್ಯಾಚರಣೆ

ಗೋಣಿಕೊಪ್ಪ, ಮಾ.30– ಇಲ್ಲಿನ ಕಂಡಂಗಾಲ ಗ್ರಾಮದಲ್ಲಿ ನರಭಕ್ಷಕ ಹುಲಿ ಪತ್ತೆ ಕಾರ್ಯಾಚರಣೆ ನಡೆಯುತ್ತಿದ್ದು, ಮೊದಲ ದಿನ ನಿರಾಸೆಯಾಗಿದೆ. 5 ತಂಡ ರಚಿಸಿಕೊಂಡು ಗ್ರಾಮದಲ್ಲಿ ಕೂಂಬಿಂಗ್ ನಡೆಸಲಾಯಿತು. ಹೊಳೆ ಬದಿಗಳಲ್ಲಿ ಸಾಕಾನೆ ಬಳಸಿಕೊಂಡು ಹುಡುಕಿದರೂ ಹುಲಿಯ ಜಾಡು ದೊರೆಯಲಿಲ್ಲ.

ಹುಲಿ ಸೆರೆಗಾಗಿ 2 ಸ್ಥಳದಲ್ಲಿ ಬೋನ್ ಇರಿಸಲಾಗಿದೆ ಆದರೆ, ಅತ್ತ ಹುಲಿ ಬಂದಿರುವ ಬಗ್ಗೆ ಸುಳಿವು ದೊರೆತಿಲ್ಲ. ಏತನ್ಮಧ್ಯೆ ಕಾರ್ಮಿಕ ಗಣೇಶ ಅವರನ್ನು ಬಲಿ ಪಡೆದ ಜಾಗದ ಸಮೀಪ ಸ್ಥಳೀಯರಿಗೆ ಮಂಗಳವಾರ ಹುಲಿ ದರ್ಶನವಾಗಿದೆ. ಆದರೆ, ಕಾರ್ಯಾಚರಣೆ ತಂಡಕ್ಕೆ ಹುಲಿ ಪತ್ತೆಯಾಗಿಲ್ಲ. ಕಂಡಂಗಾಲ ಸರ್ಕಾರಿ ಶಾಲೆಯಲ್ಲಿ ತಂಡ ಶಿಬಿರ ಆರಂಭಿಸಿದೆ.

ಹಂದಿ ಅಟ್ಟಾಡಿಸಿದ ಹುಲಿ; ಕಂಡಂಗಾಲ ಗ್ರಾಮದಿಂದ ಸುಮಾರು 7 ಕಿಮೀ ದೂರವಿರುವ ಕುಟ್ಟಂದಿ ಗ್ರಾಮದಲ್ಲಿ ಬುಧವಾರ ಹುಲಿ ಕಾಡು ಹಂದಿ ಅಟ್ಟಾಡಿಸಿರುವುದನ್ನು ಸ್ಥಳೀಯರು ಗಮನಿಸಿದ್ದಾರೆ. ಆದರೆ ಇದೇ ಬೇರೆ ಹುಲಿಯಾಗಿರಬಹುದು ಎಂದು ಅಂದಾಜಿಸಲಾಗಿದೆ. ಕಾರ್ಯಾಚರಣೆ ತಂಡ ಅಲ್ಲಿ ಕೂಡ ಪರಿಶೀಲನೆ ನಡೆಸಿತು. ಕುಂದಾ ಗ್ರಾಮದಲ್ಲಿ ಕರುವನ್ನು ಬಲಿ ಪಡೆದಿದ್ದ ಸ್ಥಳಕ್ಕೆ ಮತ್ತೆ ಹುಲಿ ಬಂದಿರುವ ಬಗ್ಗೆ ಸ್ಥಳೀಯರಿಗೆ ಮಾಹಿತಿ ಇಲ್ಲ. ಕುಂದ ಬೆಟ್ಟಕ್ಕೆ ತೆರಳಿರಬಹುದು ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಈ ವೇಳೆ ಪಶುವೈದ್ಯ ಡಾ.ರಮೇಶ್, ಸ್ಥಳಕ್ಕೆ ಕೊಡಗು ವೃತ್ತ ಸಂರಕ್ಷಣಾಧಿಕಾರಿ ಶಂಕರ್, ಡಿಸಿಎಫ್‌ಗಳಾದ ಚಕ್ರಪಾಣಿ, ಎ.ಟಿ.ಪೂವಯ್ಯ, ವನ್ಯಜೀವಿ ಡಿಸಿಎಫ್ ಶಿವರಾಮಬಾಬು, ತಿತಿಮತಿ ಎಸಿಎಫ್ ಪಿ.ಪಿ.ಉತ್ತಪ್ಪ, ಮಾಕುಟ್ಟ ಎಸಿಎಫ್ ದಯಾನಂದ, ಆರ್‌ಎಫ್‌ಒ ಡಿನ್ನಿ ದೇಚಮ್ಮ, ಅಶೋಕ್ ಪರಿಶೀಲಿಸಿದರು.

ಸೋಮವಾರಪೇಟೆ ಪಪಂಗೆ 3.53 ಲಕ್ಷ ಉಳಿತಾಯ ಬಜೆಟ್



ಸೋಮವಾರಪೇಟೆ, ಮಾ.30– ಇಲ್ಲಿನ ಪಟ್ಟಣ ಪಂಚಾಯಿತಿಯಲ್ಲಿ ಅಧ್ಯಕ್ಷ ಪಿ.ಕೆ.ಚಂದ್ರು ಅವರು 2020–23ನೇ ಸಾಲಿಗೆ 3.53 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ನಂತರ ಮಾತನಾಡಿದ ಅವರು, ಸೋಮವಾರಪೇಟೆ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ಸಮಸ್ಯೆಗಳೂ ಹೆಚ್ಚಾಗುತ್ತಿವೆ. ಈ ಹಿನ್ನೆಲೆಯಲ್ಲಿ ಕುಡಿಯುವ ನೀರು, ರಸ್ತೆ, ಬೀದಿ ದೀಪದಂತಹ ಮೂಲ ಸೌಲಭ್ಯ ಕಲ್ಪಿಸಲು ಮೊದಲ ಆದ್ಯತೆ ನೀಡಬೇಕಿದೆ. ರಾಜ್ಯ ಸರ್ಕಾರದ ಎಸ್ ಎಫ್‌ಸಿ ಅನುದಾನ, 15ನೇ ಹಣಕಾಸು ಅನುದಾನ ಸೇರಿದಂತೆ ವಿವಿಧ ಮೂಲಗಳಿಂದ ಅನುದಾನ ಸಂಗ್ರಹಿಸಿ ಮೂಲ ಸೌಕರ್ಯ ಕಲ್ಪಿಸಲು ಚಿಂತನೆ ನಡೆಸಿದ್ದು, ಸಾರ್ವಜನಿಕರು ಸಹಕರಿಸಬೇಕೆಂದು ಮನವಿ ಮಾಡಿದರು. ಇದೇ ವೇಳೆ 2022–23ನೇ ಸಾಲಿಗೆ 998.15 ಲಕ್ಷ ರೂ. ಆದಾಯ ನಿರೀಕ್ಷೆಯೊಂದಿಗೆ, 994.62 ಲಕ್ಷ ರೂ. ಖರ್ಚು ಕಳೆದು ಉಳಿದ 3.53 ಲಕ್ಷ ರೂ. ಉಳಿತಾಯ ನಿರೀಕ್ಷಿಸಲಾಗಿದೆ ಎಂದರು. ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷೆ ಜಯಂತಿ ಹಾಗೂ ಸದಸ್ಯರು, ಮುಖ್ಯಾಧಿಕಾರಿ ನಾಚಪ್ಪ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಇಂದು ಜನರಲ್ ತಿಮ್ಮಯ್ಯ ಜನ್ಮ ದಿನಾಚರಣೆ

ಸ್ಮಾರಕ ಭವನಕ್ಕೆ ಪ್ರವೇಶ ಉಚಿತ



ಮಡಿಕೇರಿ ಮಾ.30– ಜಿಲ್ಲಾಡಳಿತದಿಂದ ಜನರಲ್ ಕೆ.ಎಸ್.ತಿಮ್ಮಯ್ಯ ಅವರ 116ನೇ ಜನ್ಮ ದಿನಾಚರಣೆ ಮಾ.31 ರಂದು ಬೆಳಗ್ಗೆ 10.30ಕ್ಕೆ ಜನರಲ್ ತಿಮ್ಮಯ್ಯ ಸ್ಮಾರಕ ಭವನ(ಸನ್ನಿಸೈಡ್)ದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಜನರಲ್ ತಿಮ್ಮಯ್ಯ ಸ್ಮಾರಕ ಭವನ ಆವರಣದಲ್ಲಿರುವ ಅಪರೂಪದ ವಸ್ತುಗಳ (CURIO SHOP/ ಕೆಫೆಟೇರಿಯಾ) ಮಾರಾಟ ಮಳಿಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಆ ಪ್ರಯುಕ್ತ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗೆ ಸ್ಮಾರಕಕ್ಕೆ ಉಚಿತ ಪ್ರವೇಶ ಕಲ್ಪಿಸಲಾಗಿದೆ. ಇದರ ಸದುಪಯೋಗವನ್ನು ಸಾರ್ವಜನಿಕರು ಹಾಗೂ ಶಾಲಾ ಮಕ್ಕಳು ಪಡೆಯುವಂತೆ ಡಿಸಿ ಡಾ.ಬಿ.ಸಿ.ಸತೀಶ್ ತಿಳಿಸಿದ್ದಾರೆ.

ಹುಲಿ ದಾಳಿಯಿಂದ ಮೃತಪಟ್ಟ ಕಾರ್ಮಿಕನ ಮನೆಗೆ ಗಿರಿಜನ ಕಲ್ಯಾಣಾಧಿಕಾರಿ ಭೇಟಿ



ಗೋಣಿಕೊಪ್ಪಲು, ಮಾ.30– ಬಿಟ್ಟಂಗಾಲ ಸಮೀಪದ ಒಂದನೇ ರುದ್ರಗುಪ್ಪೆಯಲ್ಲಿ ಹುಲಿ ದಾಳಿಯಿಂದ ಮೃತಪಟ್ಟ ಕೂಲಿ ಕಾರ್ಮಿಕ ಯರವರ ಗಣೇಶ್ ಅವರ ಲೈನ್‌ಮನೆಗೆ ಪೊನ್ನಂಪೇಟೆ ತಾಲೂಕು ಗಿರಿಜನ ಕಲ್ಯಾಣಾಧಿಕಾರಿ ಡಿ.ಜಿ.ಗುರುಶಾಂತಪ್ಪ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು.

ಅತ್ತೂರು ಸಮೀಪದ ಗದ್ದೆಮನೆ ಬಳಿ ಮೃತನ ಪತ್ನಿ ಜ್ಯೋತಿ ಹಾಗೂ ಮಕ್ಕಳಿಗೆ ಸಾಂತ್ವನ ಹೇಳಿ ವೈಯಕ್ತಿಕವಾಗಿ 5 ಸಾವಿರ ರೂ. ನೀಡಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಇಲಾಖೆಯಿಂದ ಸಹಕರಿಸುವುದಾಗಿ ಭರವಸೆ ನೀಡಿದರು. ಅಲ್ಲದೇ ಮಕ್ಕಳ ಕಲಿಕೆಯನ್ನು ಯಾವುದೇ ಕಾರಣಕ್ಕೂ ನಿಲ್ಲಿಸದಂತೆ ಸಲಹೆ ನೀಡಿದರು. ಅಗತ್ಯವಿದ್ದಲ್ಲಿ ಶಾಸಕರ ಗಮನ ಸೆಳೆದು ವಸತಿ ನಿಲಯಗಳಲ್ಲಿ ಪತ್ನಿ ಜ್ಯೋತಿಗೆ ತಾತ್ಕಾಲಿಕ ಉದ್ಯೋಗ ನೀಡುವ ಭರವಸೆ ನೀಡಿದರು.

ಕ್ಷುಲ್ಲಕ ಕಾರಣಕ್ಕೆ ಹೊಡೆದಾಟ: ದೂರು, ಪ್ರತಿದೂರು ದಾಖಲು

ವಿರಾಜಪೇಟೆ, ಮಾ.30– ಕ್ಷುಲ್ಲಕ ಕಾರಣಕ್ಕೆ ಇಬ್ಬರು ಹೊಡೆದಾಡಿಕೊಂಡು ಆಸ್ಪತ್ರೆಗೆ ದಾಖಲಾದ ಘಟನೆ ವಿರಾಜಪೇಟೆ ನಗರದಲ್ಲಿ ನಡೆದಿದೆ.

ವಿರಾಜಪೇಟೆಯ ನೆಹರು ನಗರದ ನಿವಾಸಿ ಬಶೀರ್(45) ಮತ್ತು ಬೂದಿಮಾಳ ಗ್ರಾಮದ ನಿವಾಸಿ ಶರೀಫ್(43) ಪರಸ್ಪರ ಹೊಡೆದಾಡಿಕೊಂಡು ಆಸ್ಪತ್ರೆಗೆ ದಾಖಲಾದವರು.

ಘಟನೆ ವಿವರ: ವಿರಾಜಪೇಟೆ ನಗರದ ಖಾಸಗಿ ಬಸ್ ನಿಲ್ದಾಣದ ಸಮೀಪವಿರುವ ಪಟ್ಟಣ ಪಂಚಾಯಿತಿ ಮಾರುಕಟ್ಟೆಯಲ್ಲಿ ಇಸ್ಮಾಯಿಲ್ ಎಂಬುವರ ಮಾಂಸದ ಅಂಗಡಿಯಲ್ಲಿ ಬಶೀರ್ ಎಂಬವರು ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದರು. ಮಾ.29ರ ರಾತ್ರಿ 7 ಗಂಟೆ ವೇಳೆಗೆ ಕೋಳಿ ಮಾಂಸ ಖರೀದಿ ಮಾಡಲು ಬೂದಿಮಾಳ ಗ್ರಾಮದ ಶಫೀಕ್ ಆಗಮಿಸಿದ್ದಾರೆ. ಈ ಸಂದರ್ಭ ಮಾಂಸ ಕಡಿಯುತ್ತಿದ್ದಾಗ ಮಾಂಸದ ರಕ್ತ ಶಫೀಕ್ ಅವರ ಬಟ್ಟೆಯ ಮೇಲೆ ಹಾರಿದೆ. ಈ ಸಂದರ್ಭ ಬಶೀರ್ ಕ್ಷಮೆ ಕೇಳಿದ್ದಾರೆ ಎನ್ನಲಾಗಿದ್ದು, ಆದರೂ ಶಫೀಕ್ ಅವಾಚ್ಯ ಪದಗಳಿಂದ ನಿಂದಿಸಿ, ಬಶೀರ್ ಮೇಲೆ ಹಲ್ಲೆ ನಡೆಸಿದ್ದು, ತಲೆ ಮತ್ತು ಮೂಗಿನ ಭಾಗಗಳಿಗೆ ಗಾಯಗಳಾಗಿದೆ. ಜಗಳದ ಸಂದರ್ಭ ಬಶೀರ್ ಉಪಯೋಗಿಸುತ್ತಿದ್ದ ಮಾಂಸದ ಕತ್ತಿ ಶಫೀಕ್ ಅವರ ಬಲಗೈಗೆ ತಗುಲಿದ್ದು, ಶಫೀಕ್ ಅವರ ಕೈಗೆ ಗಾಯವಾಗಿದೆ.

ಬಳಿಕ ಇಬ್ಬರೂ ವಿರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ವಿರಾಜಪೇಟೆ ನಗರ ಠಾಣೆ ಪೊಲೀಸರು ದೂರು, ಪ್ರತಿದೂರು ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ವೀಕ್ಷಕರ ಭೇಟಿ

ಸುಗಮವಾಗಿ ನಡೆದ ಆಂಗ್ಲ ಭಾಷೆ ಪರೀಕ್ಷೆ: 24 ವಿದ್ಯಾರ್ಥಿಗಳು ಗೈರು



ಕುಶಾಲನಗರ, ಮಾ.30– ತಾಲೂಕಿನ ವಿವಿಧ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಗಳಿಗೆ ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕರೂ ಆದ ಪರೀಕ್ಷಾ ಜಿಲ್ಲಾ ನೋಡಲ್ ಅಧಿಕಾರಿ ಭಾರತಿ ಬುಧವಾರ ಭೇಟಿ ನೀಡಿ ಪರಿಶೀಲಿಸಿದರು.

ಸಮೀಪದ ಕೂಡಿಗೆ ಅಂಜೆಲಾ ವಿದ್ಯಾ ನಿಕೇತನ ಶಾಲೆಯ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾ ವೀಕ್ಷಕರೂ ಆದ ಚಾಮರಾಜನಗರ ಡಯಟ್‌ನ ಉಪ ನಿರ್ದೇಶಕ (ಅಭಿವೃದ್ಧಿ) ಹಾಗೂ ಪ್ರಾಂಶುಪಾಲ ಹೆಚ್.ಕೆ.ಪಾಂಡು ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಪರೀಕ್ಷಾ ವೀಕ್ಷಕರಾದ ಲಿಂಗರಾಜು ಅರಸ್, ಸ್ನೇಹಾ, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕ ಟಿ.ಜಿ.ಪ್ರೇಮ್‌ಕುಮಾರ್, ಅಭಿರಕ್ಷ ಎಂ.ಎನ್. ವೆಂಕಟನಾಯಕ್, ಸ್ಥಾನಿಕ ಜಾಗೃತಿದಳ ಅಧಿಕಾರಿ ಎಂ.ಎಂ.ಯಶವಂತ ಕುಮಾರ್, ಅಧಿಕಾರಿಗಳಾದ ಬಿ.ಇ.ರಮೇಶ್, ಸಿಆರ್‌ಪಿ ಎಸ್.ಆರ್. ಶಿವಲಿಂಗ, ಆರೋಗ್ಯ ಕಾರ್ಯಕರ್ತೆಯರು ಇದ್ದರು.

ಬಿಇಓ ಭೇಟಿ : ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ವಿ.ಸುರೇಶ್ ನೇತೃತ್ವದಲ್ಲಿ ಬಿಆರ್‌ಸಿ ಜಿ.ಎಂ. ಹೇಮಂತ್ ಮತ್ತಿತರ ಅಧಿಕಾರಿಗಳು ಕುಶಾಲನಗರ ಪರೀಕ್ಷಾ ಕೇಂದ್ರ ಸೇರಿದಂತೆ ಸೋಮವಾರಪೇಟೆ ನಗರದ ವಿವಿಧ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದರು.

24 ವಿದ್ಯಾರ್ಥಿಗಳು ಗೈರು: ತಾಲೂಕಿನ 5 ಪರೀಕ್ಷಾ ಕೇಂದ್ರಗಳಲ್ಲಿ ಬುಧವಾರ ನಡೆದ ದ್ವಿತೀಯ ಭಾಷೆ ಆಂಗ್ಲ ಭಾಷಾ ಪರೀಕ್ಷೆಗೆ 24 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು. ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಕೇಂದ್ರದಲ್ಲಿ 230 ವಿದ್ಯಾರ್ಥಿಗಳ ಪೈಕಿ 5 ವಿದ್ಯಾರ್ಥಿಗಳು ಗೈರಾಗಿದ್ದರು.

ಫಾತಿಮಾ ಕಾನ್ವೆಂಟ್ ಕೇಂದ್ರದಲ್ಲಿ 276ರ ವಿದ್ಯಾರ್ಥಿಗಳ ಪೈಕಿ 9 ವಿದ್ಯಾರ್ಥಿಗಳು ಗೈರು, ಫಾತಿಮಾ ಪ್ರೌಢಶಾಲೆಯ 138 ವಿದ್ಯಾರ್ಥಿಗಳ ಪೈಕಿ 7 ವಿದ್ಯಾರ್ಥಿಗಳು ಗೈರು, ಹೆಬ್ಬಾಲೆ ಪರೀಕ್ಷಾ ಕೇಂದ್ರದಲ್ಲಿ 130 ವಿದ್ಯಾರ್ಥಿಗಳ ಪೈಕಿ 5 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದರು ಹಾಗೂ ಕೂಡಿಗೆ ಅಂಜೆಲಾ ಕಾನ್ವೆಂಟ್‌ನಲ್ಲಿ 140 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 688 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಎರಡನೇ ದಿನದ ಪರೀಕ್ಷೆ ಸುಗಮ ಹಾಗೂ ವ್ಯವಸ್ಥಿತವಾಗಿ ನಡೆಯಿತು. ಪರೀಕ್ಷಾ ಕೇಂದ್ರದಲ್ಲಿ ಮಕ್ಕಳಿಗೆ ಪರೀಕ್ಷೆ ಬಗ್ಗೆ ಭಯಪಡದೇ ಆತ್ಮ ವಿಶ್ವಾಸದಿಂದ ಬರೆಯುವಂತೆ ಧೈರ್ಯ ತುಂಬಲಾಯಿತು.

ಪರೀಕ್ಷೆಗೂ ಮುನ್ನಾ ಆಗಮಿಸಿದ ಮಕ್ಕಳ ಆರೋಗ್ಯ ಮತ್ತು ದೈಹಿಕ ಪರೀಕ್ಷೆಯನ್ನು ಆಶಾ ಕಾರ್ಯಕರ್ತೆಯರು ನಡೆಸಿದರು. ಮಕ್ಕಳು ಅತಿ ಉತ್ಸಾಹದಿಂದ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಬರೆದರು. ತಾಲೂಕು ವ್ಯಾಪ್ತಿಯ 18 ಪ್ರೌಢ ಶಾಲೆ ಹಾಗೂ ಮೊರಾರ್ಜಿ ದೇಸಾಯಿ ಶಾಲೆಗಳ ವಿದ್ಯಾರ್ಥಿಗಳು ಪರೀಕ್ಷೆ ಬರೆದರು.

ಕೇಂದ್ರದ ಮುಖ್ಯ ಅಧೀಕ್ಷಕರಾಗಿ ಸರ್ಕಾರಿ ಪಿಯು ಕಾಲೇಜಿನ ಉಪ ಪ್ರಾಂಶುಪಾಲ ಪರಮೇಶ್, ಬಸವನಹಳ್ಳಿ ಸರ್ಕಾರಿ ಪ್ರೌಢ ಶಾಲೆ ಮುಖ್ಯ ಶಿಕ್ಷಕಿ ಆಯಾಚ್ಚು, ಫಾತಿಮಾ ಪ್ರೌಢಶಾಲೆ ಮುಖ್ಯ ಶಿಕ್ಷಕ ಜೆಫ್ರಿ ಡಿಸೋಜಾ, ಬಾಲಕಿಯರ ಪ್ರೌಢಶಾಲೆ ಮುಖ್ಯ ಶಿಕ್ಷಕಿ ಪುಷ್ಪಾ, ಕೂಡು ಮಂಗಳೂರು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮ್ ಕುಮಾರ್, ಪ್ರಶ್ನೆಪತ್ರಿಕೆ ಅಭಿರಕ್ಷಕ ಮೆ.ನಾ. ವೆಂಕಟನಾಯಕ್ ಹಾಗೂ 40ಕ್ಕೂ ಹೆಚ್ಚಿನ ಕೊಠಡಿ ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸಿದರು. ನಕಲು ತಡೆಗಟ್ಟಲು ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೇ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಅಳವಡಿಸಲಾಗಿತ್ತು. ಮಕ್ಕಳಿಗೆ ಪರೀಕ್ಷೆ ಬರೆಯಲು ಅಡೆತಡೆಯಾಗದಂತೆ ಮುನ್ನೆಚ್ಚರಿಕೆಯಾಗಿ ಆಸನ ವ್ಯವಸ್ಥೆ ಮಾಡಲಾಗಿದೆ.

ಮೈಸೂರು ನಗರ ಸುದ್ದಿಗಳು..



ನಿರ್ವಹಣೆ ಕೊರತೆಯಿಂದ ಅಧ್ವಾನವಾಗಿರುವ ಪಾರ್ಕುಗಳು

ಕೆಲವು ಉದ್ಯಾನಗಳಲ್ಲಿ ಪುಂಡ ಪೋಕರಿಗಳ ಹಾವಳಿ

- ಗಾಂಜಾ, ಸಿಗರೇಟು ಘಾಟು
- ಹುಡುಗ–ಹುಡುಗಿಯರ ಅಸಭ್ಯ ವರ್ತನೆ
- ಕೆಲ ಪಾರ್ಕ್‌ಗಳಿಗೆ ಗೇಟೇ ಇಲ್ಲ
- ಕೆಲವೆಡೆ ಕಸದ ರಾಶಿ, ಬಾಟಲುಗಳ ಸದ್ದು





ಮೈಸೂರು, ಮಾ.30(ಜಿಎ)– ಮೈಸೂರು ನಗರದಲ್ಲಿ 529 ಉದ್ಯಾನಗಳಿದ್ದು, ಇವುಗಳಲ್ಲಿ ಬಹುತೇಕ ನಿರ್ವಹಣೆ ಕೊರತೆಯಿಂದ ಹಾಳಾಗಿವೆ.

ನಗರ ಪಾಲಿಕೆಯ ಪ್ರತಿ ಕೌನ್ಸಿಲ್ ಸಭೆಯಲ್ಲೂ ಸಾಮಾನ್ಯ ವಿಷಯಗಳ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಉದ್ಯಾನಗಳ ಅಧ್ವಾನ ಪ್ರತಿಧ್ವನಿಸುತ್ತದೆ. ನಗರದ ಸೌಂದರ್ಯ ಹೆಚ್ಚಿಸುವ, ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ನೆರವಾಗುವ ಉದ್ಯಾನಗಳ ಸೂಕ್ತ ನಿರ್ವಹಣೆ ಪಾಲಿಕೆಗೆ ಸವಾಲಾಗಿದೆ. ಯಾವುದಾದರೂ ಅನುದಾನದಲ್ಲಿ ಒಮ್ಮೆ ಅಭಿವೃದ್ಧಿಪಡಿಸಿದರೂ ನಂತರದಲ್ಲಿ ಅದನ್ನು ಕಾಯ್ದುಕೊಳ್ಳುವುದು ಕಷ್ಟವಾಗಿದೆ. ಸದ್ಯ ಪ್ರಾಯೋಜಕರ ಸಹಕಾರದಿಂದ ಉದ್ಯಾನಗಳ ನಿರ್ವಹಣೆ ಮಾಡುವ ಪ್ರಯತ್ನ ನಡೆದಿದೆ.

ಉದ್ಯಾನವೆಂದರೆ ಹಚ್ಚಹಸಿರಿನಿಂದ ಕಂಗೊಳಿಸಬೇಕು. ಸೊಂಪಾದ ಗಿಡ–ಮರಗಳಲ್ಲಿ ಹಕ್ಕಿಗಳ ಕಲರವ ಮಾರ್ದನಿಸುತ್ತಿರಬೇಕು. ವಾಯುವಿಹಾರಿಗಳಿಗೆ ಅನುಕೂಲವಾಗುವಂತಹ ವಾಕಿಂಗ್ ಪಾತ್ ಇರಬೇಕು. ಪುಟ್ಟ ಮಕ್ಕಳಲ್ಲಿ ನಿಸರ್ಗದ ಬಗ್ಗೆ ಕಾಳಜಿ ಮೂಡುವಂತಹ ಪ್ರಯತ್ನಗಳಿರಬೇಕು. ಒಂದು ಭಾಗದಲ್ಲಿ ಆಟವಾಡಲು ವ್ಯವಸ್ಥೆ ಕಲ್ಪಿಸಿರಬೇಕು. ಮತ್ತೊಂದೆಡೆ ವ್ಯಾಯಾಮ ಉಪಕರಣಗಳನ್ನೂ ಅಳವಡಿಸಿರಬೇಕು. ಒಟ್ಟಾರೆ ಉದ್ಯಾನದಲ್ಲಿ ಸುಂದರವಾದ ವಾತಾವರಣ ನಿರ್ಮಾಣವಾಗಬೇಕು. ಆಕರ್ಷಕ ಉದ್ಯಾನಗಳ ರಕ್ಷಣೆಗೆ ಸುತ್ತಲೂ ಸೂಕ್ತ ಫೆನ್ಸಿಂಗ್ ಅಳವಡಿಸಿ, ಕಾವಲುಗಾರರನ್ನು ನಿಯೋಜಿಸಬೇಕು. ಆದರೆ ಇದಕ್ಕೆ ತದ್ವಿರುದ್ಧವಾದ ಸ್ಥಿತಿ ಮೈಸೂರಿನ ಬಹುತೇಕ ಉದ್ಯಾನಗಳಲ್ಲಿದೆ.

ಪುಂಡರ ಹಾವಳಿ: ಮೈಸೂರಿನ ಹೃದಯಭಾಗ ಅಗ್ರಹಾರದಲ್ಲಿರುವ ಮೂರು ಉದ್ಯಾನಗಳ ರಿಯಾಲಿಟಿ ಚೆಕ್ ನಡೆಸಿದ 'ಮೈಸೂರು ಮಿತ್ರ'ನ ಮುಂದೆ ಸಾರ್ವಜನಿಕರು ಅಲವತ್ತುಕೊಂಡರು. ರಾಮಾನುಜ ರಸ್ತೆಯ 10, 11 ಹಾಗೂ 13ನೇ ಕ್ರಾಸ್‌ನಲ್ಲಿ ತಲಾ ಒಂದೊಂದು ಉದ್ಯಾನವನಗಳಿದ್ದು, ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ. 12ನೇ ಕ್ರಾಸ್‌ನಲ್ಲಿ ಮಾತ್ರ ಎರಡು ಪಾರ್ಕ್‌ಗಳಿದ್ದು, ಇಲ್ಲಿ ಪುಂಡರದ್ದೇ ಹಾವಳಿ. ಸದ್ಯ ಸುಸ್ಥಿತಿಯಲ್ಲಿರುವ ಈ ಉದ್ಯಾನವೂ ಸಾರ್ವಜನಿಕರು ಬಳಸಲಾಗುತ್ತಿಲ್ಲ. ಇಲ್ಲಿ ಪುಂಡರು, ಕಾಲೇಜು ಯುವಕ–ಯುವತಿಯರು ಕುಳಿತಿರುವುದನ್ನು ದೂರದಲ್ಲೇ ಗಮನಿಸಿ, ಜನ ವಾಪಸ್ಸಾಗುತ್ತಾರೆ. ಮಹಿಳೆಯರಂತೂ ಉದ್ಯಾನಕ್ಕೆ ಕಾಲಿಡಲು ಅಂಜುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗಾಂಜಾ ಘಾಟು: ಉದ್ಯಾನದ ಇಕ್ಕೆಲಗಳಲ್ಲಿ ಮನೆಗಳಿವೆ. ಆದರೂ ಇಲ್ಲಿ ಗಾಂಜಾ ಘಾಟು ಮೂಗಿಗೆ ಬಡಿಯುತ್ತದೆ ಎಂದರೆ ಪರಿಸ್ಥಿತಿ ಅರ್ಥವಾಗುತ್ತದೆ. ಪುಂಡರು ಯಾರಿಗೂ ತಲೆ ಕೆಡಿಸಿಕೊಳ್ಳದೆ ಉದ್ಯಾನಗಳನ್ನೇ ಆವಾಸ ಸ್ಥಾನ ಮಾಡಿಕೊಂಡಿದ್ದಾರೆ. ಯಾವಾಗ ನೋಡಿದರೂ ಉದ್ಯಾನದ ಬೆಂಚುಗಳ ಮೇಲೆ ಮಲಗಿ ಕಾಲಹರಣ ಮಾಡುತ್ತಿರುತ್ತಾರೆ. ಆಗಾಗ್ಗೆ ಸಿಗರೇಟ್, ಗಾಂಜಾವನ್ನು ಸೇವಿಸುವುದೂ ಉಂಟು. ಉದ್ಯಾನವನದ ಮುಂಭಾಗದ ದೊಡ್ಡ ಗೇಟ್‌ಗೆ ಬೀಗ ಹಾಕಿದ್ದರೂ ಉದ್ಯಾನಕ್ಕೆ ದಾಂಗುಡಿ ಇಡುತ್ತಾರೆ. ಉದ್ಯಾನದ ಹಿಂಭಾಗದಲ್ಲಿ ಯಾವುದೇ ಗೇಟ್ ಇಲ್ಲದ ಕಾರಣ ಅಲ್ಲಿಂದ ಒಳಗೆ ಬರುತ್ತಾರೆ. ಯುವಕ–ಯುವತಿಯರು ಕುಳಿತುಕೊಂಡು ಅಸಭ್ಯವಾಗಿ ವರ್ತಿಸುವ ಮೂಲಕ ನಿವಾಸಿಗಳಿಗೆ ಮುಜುಗರ ಉಂಟು ಮಾಡುತ್ತಾರೆ. ಏನಾದರೂ ಬೈದರೆ ಆಚೀಚೆ ಓಡಾಡಿಕೊಂಡು ಕೆಲ ಸಮಯದ ನಂತರ ಅಲ್ಲಿಗೇ ಬರುತ್ತಾರೆ. ಮತ್ತೊಂದು ಉದ್ಯಾನವನದಲ್ಲಿ ಸಂಪ್ ನಿರ್ಮಿಸಿ, ತೆರೆದ ಸ್ಥಿತಿಯಲ್ಲೇ ಬಿಟ್ಟಿದ್ದಾರೆ. ಅದರಲ್ಲಿ ಮಳೆ ನೀರು ತುಂಬಿದ್ದು, ಮದ್ಯದ ಟೆಟ್ರಾ ಪ್ಯಾಕ್ ಇನ್ನಿತರ ತ್ಯಾಜ್ಯಗಳೂ ಬಿದ್ದಿವೆ. ಸೊಳ್ಳೆಗಳ ಕಾಟವಂತೂ ವಿಪರೀತವಾಗಿದೆ ಎಂದು ಸ್ಥಳೀಯ ಮಹಿಳೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.



ಪಾರ್ಕ್‌ನಲ್ಲಿರುವ ಸಂಪ್‌ನಲ್ಲಿ ಮಳೆ ನೀರು ತುಂಬಿದ್ದು, ಮದ್ಯದ ಟೆಟ್ರಾ ಪ್ಯಾಕ್ ಇನ್ನಿತರ ತ್ಯಾಜ್ಯಗಳೂ ಬಿದ್ದಿರುವುದು.

ಇದೇನು ಉದ್ಯಾನವೇ?: ವಿದ್ಯುತ್ ಹೈಟೆನ್ಷನ್ ಹಾದು ಹೋಗಿರುವ ಕಡೆ ಬಹುತೇಕ ಕಡೆಗಳಲ್ಲಿ ಉದ್ಯಾನ ನಿರ್ಮಿಸಿದ್ದಾರೆ. ಹೀಗೆ ಬೋಗಾದಿ 2ನೇ ಹಂತ, ವಾರ್ಡ್ ನಂ.44ರ (ಜನತಾನಗರ) ವ್ಯಾಪ್ತಿಯ ಸಿಎಫ್‌ಟಿಆರ್‌ಐ ಲೇಔಟ್‌ನಲ್ಲಿ ನಿರ್ಮಿಸಿದ್ದ ಪಾರ್ಕ್ ಮಾಯವಾಗಿದೆ. ಇಲ್ಲಿ ಪಾರ್ಕ್ ಇತ್ತೋ? ಇಲ್ಲವೋ? ಎಂದು ಸ್ಥಳೀಯರನ್ನೇ ಗೊಂದಲಕ್ಕೀಡುಮಾಡುವ ದುಸ್ಥಿತಿ ಇದೆ. ಕಟ್ಟಡ ತ್ಯಾಜ್ಯ, ಪ್ಲಾಸ್ಟಿಕ್, ಹಳೆ ಬಟ್ಟೆ, ಬಾಟಲ್‌ಗಳು ಹೀಗೆ ಎಲ್ಲಾ ರೀತಿಯ ತ್ಯಾಜ್ಯವನ್ನೂ ತಂದು ಇಲ್ಲಿ ಸುರಿಯಲಾಗಿದೆ. ಗಿಡ ಗಂಟಿಗಳು ಆಳೆತ್ತರಕ್ಕೆ ಬೆಳೆದಿವೆ. ಒಣಗಿರುವ ಕುರುಚಲು ಗಿಡ ಹಾಗೂ ಹುಲ್ಲಿಗೆ ಬೆಂಕಿ ತಗುಲಿದರೆ ಅಪಾಯ ಕಟ್ಟಿಟ್ಟಬುತ್ತಿ. ಆದರೂ ಕೆಲವರು ಇಲ್ಲಿ ಒಂದಿಷ್ಟು ಉಳಿದಿರುವ ಜಾಗದಲ್ಲೇ ತಮ್ಮ ದ್ವಿಚಕ್ರ ವಾಹನ ಹಾಗೂ ಆಟೋ ನಿಲ್ಲಿಸುತ್ತಾರೆ. ಸುತ್ತಲೂ ಅಳವಡಿಸಿರುವ ಕಬ್ಬಿಣದ ಗ್ರಿಲ್‌ಗಳು ಮುರಿದಿವೆ. ಹಲವೆಡೆ ಕಿಡಿಗೇಡಿಗಳೇ ಮುರಿದುಕೊಂಡು ಹೋಗಿ ಮಾರಾಟ ಮಾಡಿರಬಹುದು ಎಂದು ಸ್ಥಳೀಯರು ನಗರ ಪಾಲಿಕೆ ನಿರ್ಲಕ್ಷ್ಯಕ್ಕೆ ಹಿಡಿಶಾಪ ಹಾಕಿದ್ದಾರೆ.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ಲಿಂಗಾಯತ ಸಮಾಜ, ಇನ್ನಿತರೆ ಸಮುದಾಯದ ಅಭಿವೃದ್ಧಿಗೆ ಚಿಂತಿಸಲಿ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಆಶಯ



ಯಳಂದೂರು, ಮಾ.30(ಎಸ್‌ಎಸ್)- ಲಿಂಗಾಯಿತ ಸಮಾಜ ತಮ್ಮ ಸಮಾಜ ವಲ್ಲದೇ, ಇತರೆ ಸಮಾಜಗಳಾದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಬಗ್ಗೆಯೂ ಸಹ ಉತ್ತಮ ಬಾಂಧವ್ಯ ಹೊಂದಬೇಕು. ಹಿಂದುಳಿದ ಸಮಾಜದ ಅಭಿವೃದ್ಧಿ ಬಗ್ಗೆಯೂ ಸಹ ಚಿಂತಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆಶಯ ವ್ಯಕ್ತಪಡಿಸಿದರು.

ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ಬುಧವಾರ ನಡೆದ ಬಳ್ಳಾರಿ ಶ್ರೀಮಾಂತ ಸ್ವಾಮಿಗಳ ಮತ್ತು ಸಿದ್ದಲಿಂಗ ಸ್ವಾಮೀಜಿ ಗದ್ದುಗೆಗಳಿಗೆ ಲಿಂಗ ಪ್ರತಿಷ್ಠಾಪನೆ, ಬಸವ ಭವನ, ಬಸವದ್ವಾರ, ಪ್ರಸಾದ ನಿಲಯದ ನೂತನ ಕಟ್ಟಡದ ಧಾರ್ಮಿಕ ಸಮಾರಂಭ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಯಾರಿಗೂ ಅಧಿಕಾರ ಶಾಶ್ವತ ಅಲ್ಲ. ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಬಸವರಾಜ ಬೊಮ್ಮಾಯಿ ಅವರು ಸಿಎಂ ಆಗಿ ಅಧಿಕಾರ ನಡೆಸುತ್ತಿದ್ದಾರೆ. ಆದರೂ ನಿಮ್ಮ ನನ್ನ ಬಗ್ಗೆ ನಿಮಗೆ ಪ್ರೀತಿ, ವಿಶ್ವಾಸ ಕಡಿಮೆ ಆಗಿಲ್ಲ. ಗ್ರಾಮಕ್ಕೆ ಬಂದಾಗ ನೀವು ತೋರಿದ ಸ್ವಾಗತ, ಪ್ರೀತಿ, ವಿಶ್ವಾಸಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ವೀರ ಶೈವ ಲಿಂಗಾಯಿತರು ಇತರೆ ಸಮಾಜದ ಅಭಿವೃದ್ಧಿಗೂ ಚಿಂತಿಸಬೇಕು ಎಂದರು.

ಗ್ರಾಮೀಣ ಪ್ರದೇಶಗಳು ಅಭಿವೃದ್ಧಿ ಹೊಂದಬೇಕು ಎಂಬುದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಪೇಕ್ಷೆ. ತಂದೆ-ತಾಯಿಗಳು ಹೆಣ್ಣುಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಮಕ್ಕಳಿಗೆ ಆಸಕ್ತಿ ಇರುವುದಕ್ಕೆ ಆದ್ಯತೆ ನೀಡಬೇಕು. ಈ ಮೂಲಕ ಅವರು (ಮಕ್ಕಳು) ಸ್ವಾತಂತ್ರ್ಯವಾಗಿ ಬದುಕಿ, ಸ್ವಾವಲಂಬಿಗಳನ್ನಾಗಿ ಮಾಡಿ ಎಂದು ಯಡಿಯೂರಪ್ಪ ಅವರು ಪೋಷಕರಿಗೆ ಕರೆ ನೀಡಿದರು.

ರೈತರ ಸ್ಥಿತಿ ಈಗ ಮೊದಲಿಗಿಂತ ಸ್ವಲ್ಪ ಸುಧಾರಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಜನರಿಗೆ ಎಲ್ಲಾ ರೀತಿಯ ಅನುಕೂಲ ಗಳನ್ನು ಕಲ್ಪಿಸಿದೆ. ಇದನ್ನು ಎಲ್ಲರೂ ಸದುಪ ಯೋಗ ಪಡಿಸಿಕೊಳ್ಳಬೇಕು. ಹೀಗಿದ್ದರೂ ಸಹ ಯಾರಾದರೂ ನಾವು ಬಡವರು ಎಂದು ಹೇಳಿಕೊಂಡರೆ, ಅದು ಅವರ ದೌರ್ಬಲ್ಯವನ್ನು ತೋರಿಸುತ್ತದೆ ಎಂದರು.

ಶಾಸಕ ಎನ್. ಮಹೇಶ್ ಮಾತನಾಡಿ, ಯಡಿಯೂರಪ್ಪ ಅವರು ತನ್ನನ್ನು ನಂಬಿದವರನ್ನು ಎಂದಿಗೂ ಕೈ ಬಿಡೊಲ್ಲ. ತನ್ನನ್ನು ನಂಬಿದವರನ್ನು ಯಾವ ಜಾಗಕ್ಕೆ ತಲುಪಬೇಕೋ ಆ ಜಾಗಕ್ಕೆ ತಲುಪಿಸಿದ್ದಾರೆ. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದಾಗ, ಇವರ ರಾಜಕೀಯ ಜೀವನ ಇಲ್ಲಿಗೆ ಮುಗಿಯಿತು ಎಂದು ಅನೇಕರು ಭಾವಿಸಿದ್ದಾರೆ. ಪ್ರತಿಪಕ್ಷಗಳು ಸಹ ತಿಳಿದು ಕೊಂಡಿವೆ. ಆದರೆ ಯಡಿಯೂರಪ್ಪ ಅವರು ಇಷ್ಟು ದಿನ ರಾಜಕೀಯದಲ್ಲಿ ಅರ್ಜುನನ ಪಾತ್ರ ಮಾಡಿದ್ದರು. ಮುಂದಿನ ದಿಗಳಲ್ಲಿ ಅವರು ಶ್ರೀಕೃಷ್ಣನ ಪಾತ್ರ ನಿರ್ವಹಿಸಲಿದ್ದಾರೆ ಎಂದರು. ಈ ವೇಳೆ ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನರು, ಶಿಳ್ಳೆ, ಚಪ್ಪಾಳೆ ತಟ್ಟಿದರು.

ಕುಂದೂರು ಮಠದ ಶ್ರೀ ಡಾ. ಶ್ರೀರತ್ನ ಚಂದ್ರ ಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ಈ ಹಿಂದೆ 5 ಸಾವಿರಕ್ಕೂ ಹೆಚ್ಚು ಮಠ-ಮಾನ್ಯಗಳಿದ್ದವು. ಆದರೆ ಇಂದು ಈ ಸಂಖ್ಯೆ ಕಡಿಮೆ ಆಗುತ್ತಿದೆ. ಸಮಾಜ ಸೇವೆ ಮಾಡುವುದು ಬಹಳ ಕಷ್ಟವಾಗುತ್ತಿದೆ. ಮಠ ಮತ್ತು ಸಮಾಜ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇದನ್ನು ಅರಿತಿರುವ ಯಡಿಯೂರಪ್ಪ ಅವರು ಮಠಗಳಿಗೆ ಜೀವ ಚೈತನ್ಯ ತುಂಬಿದರು ಎಂದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿ, ವಾಟಾಳು ಮಠದ ಡಾ. ಶ್ರೀ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿ, ಮುಡುಕನಪುರದ ಶ್ರೀ ಷಡಕ್ಷರ ದೇಶೀಕೇಂದ್ರ ಸ್ವಾಮೀಜಿ, ಕನಕಪುರದ ದೇಗುಲ ಮಠದ ಡಾ.ಶ್ರೀಮುಮ್ಮಡಿ ನಿರ್ವಾಣ ಮಹಾ ಸ್ವಾಮೀಜಿ, ಗೌಡಹಳ್ಳಿ ಶ್ರೀ ಮಠದ ತೋಂಟದಾರ್ಯ ಸ್ವಾಮೀಜಿ ಅವರು ಮಾತನಾಡಿದರು.

ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹರವೆ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಮೈಸೂರು ಹೊಸಮಠದ ಶ್ರೀಚಿದಾನಂದ ಸ್ವಾಮೀಜಿ, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿ ದೇವಿ ಸೇರಿದಂತೆ ವಿವಿಧ ಮಠಾಧಿಪತಿಗಳು ಹಾಗೂ ಮುಖಂಡರು ಉಪಸ್ಥಿತರಿದ್ದರು. ವಿದ್ಯಾರ್ಥಿನಿ ರಂಜಿತಾ ಕಾರ್ಯಕ್ರಮ ನಿರೂಪಿಸಿದರು.

6 ನಾಳೆ ರಾಜ್ಯಕ್ಕೆ ಅಮಿತ್ ಶಾ ಬರಲಿದ್ದು, ಅವರು ಏನು ಸಲಹೆ-ಸೂಚನೆ ಕೊಡುತ್ತಾರೋ ಗೊತ್ತಿಲ್ಲ. ಅವರು ಬಂದ ಬಳಿಕ ಎಲ್ಲವೂ ತಿಳಿಯಲಿದೆ. ಸಚಿವ ಸಂಪುಟ ವಿಸ್ತರಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಕೈಗೊಳ್ಳಲಿದ್ದು, ಶಾ ಭೇಟಿ ಬಳಿಕ ಅದು ಕೂಡ ಸ್ಪಷ್ಟವಾಗಿ ತಿಳಿಯುವರಲಿದೆ ಎಂದ ಅವರು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ಜನರಿಗೆ ತಲುಪಿಸಿ ಜನರ ವಿಶ್ವಾಸ ಗಳಿಸುವ ಉದ್ದೇಶದಿಂದ ನಾನು, ಸಿಎಂ ಹಾಗೂ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ರಾಜ್ಯಾದ್ಯಂತ ಪ್ರವಾಸ ಹಮ್ಮಿಕೊಳ್ಳಲಿದ್ದೇವೆ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷ ಅಧಿಕಾರ ಪಡೆಯಲಿದ್ದು, 130-140 ಸ್ಥಾನಗಳಲ್ಲಿ ಗೆದ್ದೇ ಗೆಲ್ಲುತ್ತೇವೆ.

-ಬಿ.ಎಸ್.ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ.

ಮಠಗಳು ಶಾಂತಿ, ನೆಮ್ಮದಿ ನೀಡುವ ಕೇಂದ್ರಗಳು: ಸುತ್ತೂರು ಶ್ರೀ

ಯಳಂದೂರು, ಮಾ.30(ಎಸ್‌ಎಸ್/ ನಾಗರಾಜು)- ಮಠಗಳು ಮನುಷ್ಯನ ದುಃಖವನ್ನು ದೂರ ಮಾಡಿ, ಶಾಂತಿ, ನೆಮ್ಮದಿಯನ್ನು ನೀಡುವ ಕೇಂದ್ರಗಳಾಗಿವೆ ಎಂದು ಸುತ್ತೂರು ಮಠಾಧ್ಯಕ್ಷ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ನಡೆದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯವಹಿಸಿ ಮಾತನಾಡಿದ ಅವರು, ಮಠಗಳಿಗೆ ಹೋದರೆ, ಭೌತಿಕ ಸಂಪತ್ತು ಸಿಗದೆ ಇರಬಹುದು. ಆದರೆ, ಯಾವುದೇ ಅಂಗಡಿಗಳಲ್ಲಿ ದೊರೆಯದ ಮಾನಸಿಕ ನೆಮ್ಮದಿ ದೊರೆಯುತ್ತದೆ. ಇದನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು. ಕರ್ನಾಟಕದಲ್ಲಿ ಮಠ-ಮಾನ್ಯಗಳು ವಿಶೇಷವಾದ ಸ್ಥಾನವನ್ನು ಪಡೆದಿವೆ. ಉತ್ತರ ಭಾರತದ ಹಳ್ಳಿ- ಹಳ್ಳಿಗಳಲ್ಲಿ ಮಠಗಳಿವೆ. ಸಂತರು ಜನರ ನಾಡಿಮಿಡಿತಗಳನ್ನು ಚೆನ್ನಾಗಿ ತಿಳಿದಿದ್ದರು. ರಾಜ್ಯಕ್ಕೆ ಗುರು ಪರಂಪರೆ ಇದೆ ಎಂದರು.

ಯಡಿಯೂರಪ್ಪ ಅವರು 4 ಬಾರಿ ಮುಖ್ಯಮಂತ್ರಿ ಆಗಿ ಅಧಿಕಾರ ಸ್ವೀಕರಿಸಿದ್ದರು. 4 ಬಾರಿಯೂ ಅವರೇ ಸ್ವ ಇಚ್ಛೆಯಿಂದ ರಾಜೀನಾಮೆ ನೀಡಿದ್ದಾರೆ. ಅವರಿಗೆ ಅಧಿಕಾರ ಇದ್ದಾಗಲೂ, ಇಲ್ಲದಿದ್ದಾಗಲೂ ಅವರಿಗೆ ಜನಪ್ರಿಯತೆ ಸ್ಥಿರವಾಗಿದೆ ಎಂದರು.

ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸುವಂತೆ ಮುಖಂಡರಿಂದ ಯಡಿಯೂರಪ್ಪ ಅವರಿಗೆ ಮನವಿ ಬಂತು. ಆಗ ನೀರಾವರಿ ಸಚಿವರಾಗಿದ್ದ ಈಗಿನ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಅವರು, ಈ ವಿಚಾರ ಕಾವೇರಿ ನ್ಯಾಯಾಧಿಕರಣದ ವ್ಯಾಪ್ತಿಗೆ ಬರುವುದರಿಂದ ಈ ಯೋಜನೆ ಅನುಷ್ಠಾನಕ್ಕೆ ತರಲು ಆಗುವುದಿಲ್ಲ ಎಂದರು. ಆದರೆ ಯಡಿಯೂರಪ್ಪ ಅವರು ಹೇಗಾದರೂ ಮಾಡಿ ಜಾರಿಗೆ ತರಲು ನಾನು ಹೋಗುತ್ತೇನೆ. ನೀವು ಈ ಯೋಜನೆಯನ್ನು ಜಾರಿಗೊಳಿಸುವಂತೆ ಬಸವರಾಜ ಬೊಮ್ಮಾಯಿ ಅವರಿಗೆ ಆದೇಶಿಸಿದರು ಎಂದು ಯಡಿಯೂರಪ್ಪ ಅವರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ಎನ್.ಮಹೇಶ್‌ರನ್ನು ಮತ್ತೊಮ್ಮೆ ಆಯ್ಕೆ ಮಾಡಿ

ಯಳಂದೂರು, ಮಾ.30(ಎಸ್‌ಎಸ್/ ನಾಗರಾಜು)- ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲ ಕ್ಷೇತ್ರದಿಂದ ಹಾಲಿ ಶಾಸಕ ಎನ್.ಮಹೇಶ್ ಅವರನ್ನು ಮತ್ತೊಮ್ಮೆ ಆಯ್ಕೆ ಮಾಡಿ ವಿಧಾನಸಭೆಗೆ ಕಳುಹಿಸ ಬೇಕು ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿ ಯೂರಪ್ಪ ಮನವಿ ಮಾಡುವ ಮೂಲಕ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಎನ್. ಮಹೇಶ್ ಅವರಿಗೆ ಎಂದು ಖಾತ್ರಿಪಡಿಸಿದರು.

ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಮಾತನಾಡಿದ ಅವರು, ನನಗೆ ನೀವು ತೋರುವ ಪ್ರೀತಿ, ವಿಶ್ವಾಸಕ್ಕೆ ನಾನೆಂದು ಋಣಿ ಆಗಿರುತ್ತೇನೆ. ಈ ಋಣವನ್ನು ನಾನು ಹೇಗೆ ತೀರಿಸಬೇಕು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಜಿಲ್ಲಾ ಕೇಂದ್ರಗಳಿಗೆ ತೆರಳದೆ, ಪಂಚಾಯಿತಿ ಕೇಂದ್ರಗಳಿಗೆ ಭೇಟಿ ನೀಡುತ್ತೇನೆ. ನಿಮ್ಮನ್ನು (ಕೊಳ್ಳೇಗಾಲ ಕ್ಷೇತ್ರದ ಜನರನ್ನು ಉದ್ದೇಶಿಸಿ) ಕಂಡರೆ ನನಗೆ ಹೆಮ್ಮೆ. ಏಕೆಂದರೆ ಎನ್.ಮಹೇಶ್ ಅವರನ್ನು ಶಾಸಕರನ್ನಾಗಿ ಆಯ್ಕೆ ಮಾಡಿ ಕಳುಹಿಸಿದ್ದೀರಿ. ಇದಕ್ಕಾಗಿ ನಿಮಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ವಿಧಾನಸಭೆಯಲ್ಲಿ ಶಾಸಕ ಎನ್.ಮಹೇಶ್ ಮಾತನಾಡಲು ಎದ್ದು ನಿಂತರೆ, ಎಲ್ಲರೂ ಪಕ್ಷ ಭೇದ ಮರೆತು ಅವರ ಮಾತನ್ನು ಕೇಳುತ್ತಾರೆ. ನೀವುಗಳು ಒಬ್ಬ ಜವಾಬ್ದಾರಿ ಶಾಸಕರನ್ನು ಆಯ್ಕೆ ಮಾಡಿದ್ದೀರಿ. ಮುಂದೆಯೂ ಸಹ ಎನ್.ಮಹೇಶ್ ಅವರಿಗೆ ನೀವು ಆಶೀರ್ವಾದ ಮಾಡಬೇಕು. ಅವರನ್ನು ಮತ್ತೊಮ್ಮೆ ಶಾಸಕರನ್ನಾಗಿ ಆಯ್ಕೆ ಮಾಡಿ ವಿಧಾನ ಸಭೆಗೆ ಮತ್ತೆ ಕಳುಹಿಸಬೇಕು ಎಂದು ಯಡಿಯೂರಪ್ಪ ತಮ್ಮ ಮಾತಿನ ಆರಂಭದಲ್ಲಿಯೇ ಹೇಳಿದರು. ಈ ವೇಳೆ ಶಾಸಕ ಎನ್.ಮಹೇಶ್ ಎದ್ದು ನಿಂತು ಜನರಿಗೆ ಕೈ ಮುಗಿದರು.

ವಿದ್ಯುತ್ ಶಾರ್ಟ್‌ಸರ್ಕ್ಯೂಟ್: ಕಬ್ಬು ಬೆಳೆ ಭಸ್ಮ

ಗುಂಡ್ಲುಪೇಟೆ, ಮಾ.30(ಸೋಮ್.ಜಿ)- ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಕಬ್ಬಿನ ಗದ್ದೆ ಸುಟ್ಟು ಭಸ್ಮವಾಗಿರುವ ಘಟನೆ ತಾಲೂಕಿನ ಕುಂದಕೆರೆ ಗ್ರಾಮದಲ್ಲಿ ಮಂಗಳವಾರ



ಸಂಜೆ ನಡೆದಿದೆ. ಗ್ರಾಮದ ರಾಜೇಂದ್ರ ಅವರಿಗೆ ಸೇರಿದ ಜಮೀನಿನಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿ ಶಾರ್ಟ್ ಸರ್ಕ್ಯೂಟ್‌ನಿಂದ ತುಂಡರಿಸಿ ಕಬ್ಬಿನ ಮೇಲೆ ಬಿದ್ದಾಗ ಬೆಂಕಿ ಕಾಣಿಸಿಕೊಂಡು ಅನಾಹುತ ಸಂಭವಿಸಿದೆ. ಘಟನೆಯಲ್ಲಿ ಸುಮಾರು ಅರ್ಧ ಎಕರೆ ಪ್ರದೇಶದಲ್ಲಿ ಬೆಳೆದಿದ್ದ ಕಟಾವಿಗೆ ಸಿದ್ಧವಾಗಿದ್ದ ಕಬ್ಬು, ಹನಿ ನೀರಾವರಿ ಹಾಗೂ ಕೃಷಿ ಉಪಕರಣಗಳು ಸಂಪೂರ್ಣ ಭಸ್ಮವಾಗಿದೆ.

ಬೆಂಕಿಯು ಪಕ್ಕದ ನಾಗಮಲ್ಲಪ್ಪ ಅವರ ಜಮೀನಿಗೂ ವ್ಯಾಪಿಸಿದ ಪರಿಣಾಮ 400ಕ್ಕೂ ಹೆಚ್ಚಿನ ಬಾಳೆ ಗಿಡಗಳು ಭಸ್ಮವಾಗಿವೆ. ಘಟನೆಯಲ್ಲಿ ಸುಮಾರು 5 ಲಕ್ಷಕ್ಕೂ ಹೆಚ್ಚಿನ ಮೌಲ್ಯದ ಬೆಳೆಗಳು ಬೆಂಕಿಗಾಹುತಿಯಾಗಿವೆ ಎಂದು ಅಂದಾಜಿಸಲಾಗಿದೆ. ಆದ್ದರಿಂದ ಸಂಬಂಧಪಟ್ಟವರು ರೈತರ ನಷ್ಟವನ್ನು ತುಂಬಿಕೊಡಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಶ್ರದ್ಧಾಭಕ್ತಿಯ ಶ್ರೀ ಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ

ಬದನಗುಪ್ಪೆ, ಮಾ.30(ಮಲ್ಲಣ್ಣ)- ಚಾಮರಾಜನಗರ ತಾಲೂಕಿನ ಬದನಗುಪ್ಪೆ ಗ್ರಾಮದ ಹೊರವಲಯದಲ್ಲಿರುವ ಶಂಭುಪುರ ಶ್ರೀಬಸವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ರಮವು ಶ್ರದ್ಧಾಭಕ್ತಿ ಹಾಗೂ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಬಸವೇಶ್ವರ ಸ್ವಾಮಿಗೆ ಭಾನುವಾರ ರಾತ್ರಿಯಿಂದಲೇ ಗೋ ಪೂಜೆ, ಹೋಮ-ಹವನ, ಗಣಪತಿ ಪೂಜೆ ನೆರವೇರಿತು. ನಂತರ ಬಸವ ಮೂರ್ತಿಗೆ ಬಿಲ್ವಾರ್ಚನೆ, ಪಂಚಾಮೃತ ಅಭಿಷೇಕ, ಮಹಾ ಮಂಗಳಾರತಿ ನಡೆಯಿತು. ತದನಂತರ ಸಹಸ್ರಾರು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ನಡೆಯಿತು.



ಸೋಮವಾರ ಬೆಳಗ್ಗೆ ನಡೆದ ವಿಶೇಷ ಪೂಜಾ ಕೈಂಕರ್ಯ ದೇವನೂರು ಶ್ರೀಗುರು ಮಲ್ಲೇಶ್ವರ ಮಠಾಧ್ಯಕ್ಷರಾದ ಶ್ರೀ ಮಹಂತ ಸ್ವಾಮೀಜಿ, ಮರಿಯಾಲದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ವಿರಕ್ತ ಮಠದ ಶ್ರೀ ಚನ್ನಬಸವ ಸ್ವಾಮೀಜಿ, ವೇಲಾಜಿಪುರ ಭಿಕ್ಷದ ಮಠಾಧ್ಯಕ್ಷರಾದ ಮಹಾದೇವ ಸ್ವಾಮೀಜಿ ಹಾಗೂ ನಾಗೇಂದ್ರ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿತು.

ಈ ಸಂದರ್ಭದಲ್ಲಿ ಬದನಗುಪ್ಪೆ, ವೀರನಪುರ, ನಂಜೇದೇವನಪುರ ಗ್ರಾಮಗಳ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಮಧ್ಯಾಹ್ನ ಸಹಸ್ರಾರು ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.



ಕೆಲದಿನಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದ ಬೇಗೂರು ಸಮೀಪದ ಬೆಳಚಲವಾಡಿ ಗ್ರಾಮದ ಹೂಣಕಾರಶೆಟ್ಟಿ ಅವರ ಮನೆಗೆ ಕಾಂಗ್ರೆಸ್ ಯುವ ಮುಖಂಡ ಹೆಚ್.ಎಂ.ಗಣೇಶ್ ಪ್ರಸಾದ್ ಭೇಟಿ ನೀಡಿ, ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿ ಧನ ಸಹಾಯ ಮಾಡಿದರು. ಗ್ರಾಪಂ ಸದಸ್ಯ ಮಹದೇವಸ್ವಾಮಿ, ರೇವಣ್ಣ, ಶಿವರುದ್ರಪ್ಪ, ರಾಜು, ರವಿನಟೇಶ್ ಹಾಜರಿದ್ದರು. ಚಿತ್ರ: ಕಿರಣ್‌ಬೇಗೂರು.

ಸಾರ್ವಜನಿಕರ ಆರೋಗ್ಯದ ಬಗ್ಗೆ ಸರ್ಕಾರ ಹೆಚ್ಚಿನ ನಿಗಾ



ಗುಂಡ್ಲುಪೇಟೆ, ಮಾ.30(ಸೋಮ್.ಜಿ)- ಸಾರ್ವಜನಿಕರ ಆರೋಗ್ಯದ ಬಗ್ಗೆ ಸರ್ಕಾರ ಹೆಚ್ಚಿನ ನಿಗಾ ವಹಿಸುತ್ತಿದೆ ಎಂದು ಶಾಸಕ ಸಿ.ಎಸ್.ನಿರಂಜನ ಕುಮಾರ್ ಹೇಳಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಉತ್ಪಾದನಾ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕೇರಳ ಹಾಗೂ ತಮಿಳುನಾಡು ರಾಜ್ಯಗಳ ಗಡಿಯಲ್ಲಿರುವ ನಮ್ಮ ತಾಲೂಕಿನಲ್ಲಿ ಯಾವಾಗಲೂ ಸೂಕ್ಷ್ಮ ಪರಿಸ್ಥಿತಿಯಿದೆ. ನೆರೆ ರಾಜ್ಯಗಳಲ್ಲಿ ಸೋಂಕು ಹೆಚ್ಚಿದರೆ ತಾಲೂಕಿನ ಜನರಲ್ಲಿ ಆತಂಕ ಹೆಚ್ಚುತ್ತಿದೆ. ಸೋಂಕಿನ ಲಕ್ಷಣಗಳು ಕಂಡು ಬಂದವರನ್ನು ದೂರವಿಡುವ ಪರಿಸ್ಥಿತಿ ಎದುರಾಗಿತ್ತು. ಆದ್ದರಿಂದ ತಾಲೂಕಿನ ರೋಗಿಗಳ ಅನುಕೂಲಕ್ಕಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಘಟಕ ಆರಂಭಿಸಲಾಗುತ್ತಿದ್ದು, ತುರ್ತು ಸಂದರ್ಭದಲ್ಲಿ ಉಪಯೋಗವಾಗಲಿದೆ ಎಂದರು.

ಈ ಹಿಂದೆ ಕೊರೊನಾ ಸೋಂಕು ಹೆಚ್ಚಿದ್ದ ಸಂದರ್ಭದಲ್ಲಿ ಆಮ್ಲಜನಕದ ಕೊರತೆಯಿಂದ ಹಲವಾರು ಮಂದಿ ಸಾವಿಗೀಡಾದ ಹಿನ್ನೆಲೆಯಲ್ಲಿ ಸಾರ್ವಜನಿಕರ ಆರೋಗ್ಯದ ಬಗ್ಗೆ ನಮ್ಮ ಸರ್ಕಾರ ಹೆಚ್ಚಿನ ನಿಗಾ ವಹಿಸಿದ್ದು, ಈ ಉದ್ದೇಶದಿಂದ ಎಲ್ಲಾ ಆಸ್ಪತ್ರೆಗಳಲ್ಲಿ ಆಮ್ಲಜನಕ ಉತ್ಪಾದನಾ ಘಟಕ ಆರಂಭಿಸುತ್ತಿದೆ ಎಂದರು. ಉತ್ತಮ ಆರೋಗ್ಯ, ಶಿಕ್ಷಣ ಹಾಗೂ ಮೂಲ ಸೌಕರ್ಯಗಳನ್ನು ನೀಡುವಲ್ಲಿ ನಮ್ಮ ತಾಲೂಕು ಮುಂಚೂಣಿಯಲ್ಲಿದೆ. ಜನತೆಯು ಉತ್ತಮ ಆರೋಗ್ಯವನ್ನು ಪಡೆದುಕೊಳ್ಳಲು ಸಮಯಕ್ಕೆ ಸರಿಯಾಗಿ ಸೂಕ್ತ ಚಿಕಿತ್ಸೆ ಹಾಗೂ ಪರೀಕ್ಷೆಗಳನ್ನು ಮಾಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಮಂಜುನಾಥ್ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಇದ್ದರು.



ಬೇಗೂರು ಸಮೀಪದ ಹೊಸಪುರ ಗ್ರಾಮದಲ್ಲಿ ಸುರಿದ ಮಳೆಗೆ ಗ್ರಾಮದ ನಿವಾಸಿ ರವಿಕುಮಾರ್ ಅವರಿಗೆ ಸೇರಿದ ಕೋಳಿ ಫಾರಂ ಕುಸಿದು ಬಿದ್ದಿದೆ. ಭಾನುವಾರ ಸಂಜೆ 6 ಗಂಟೆಯ ನಂತರ ಪ್ರಾರಂಭವಾದ ಗಾಳಿ ಮಳೆಗೆ ಕೋಳಿ ಫಾರಂನ ಮೇಲ್ಛಾವಣಿ ಹಾರಿ ಹೋಗಿದ್ದು, ಸುಮಾರು 6 ಅಂಕಣದ ಕೋಳಿ ಫಾರಂನ ಗೋಡೆಗಳು ಉರುಳಿ ಬಿದ್ದಿವೆ ಹಾಗೂ ಅಪಾರ ಪ್ರಮಾಣದ ಕೋಳಿಗಳು ಸಹ ಸತ್ತು ಹೋಗಿದ್ದು ಲಕ್ಷಾಂತರ ರೂ ನಷ್ಟ ಸಂಭವಿಸಿದೆ. ಚಿತ್ರ: ಕಿರಣ್ ಬೇಗೂರು.

ಎಪಿಎಂಸಿ ಚುನಾವಣೆ: ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ



ಚಾಮರಾಜನಗರ, ಮಾ.30- ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಏ. 17ರಂದು ನಡೆಯುವ ಚುನಾವಣೆಗೆ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ನಾನಾ ಕ್ಷೇತ್ರಗಳಿಂದ ಚುನಾವಣಾಧಿಕಾರಿ ತಹಸೀಲ್ದಾರ್ ಚಿದಾನಂದ ಗುರುಸ್ವಾಮಿ ಅವರಿಗೆ ನಾಮಪತ್ರ ಸಲ್ಲಿಸಿದರು.

ನಗರದ ತಾಲೂಕು ಕಚೇರಿ ಸಭಾಂಗಣದಲ್ಲಿ ಕಾಂಗ್ರೆಸ್, ಬಿಜೆಪಿ ಹಾಗೂ ಪಕ್ಷೇತರ ಅಭ್ಯರ್ಥಿಗಳು ತಮ್ಮ ತಮ್ಮ ಮುಖಂಡರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ಬಿಜೆಪಿಯಿಂದ ಚಾಮರಾಜನಗರ ಕ್ಷೇತ್ರ- ಮನೋಜ್‌ಪಟೇಲ್, ಬದನಗುಪ್ಪೆ ಕ್ಷೇತ್ರ- ಸೂರ್ಯಕುಮಾರ್, ನಾಗವಳ್ಳಿ ಕ್ಷೇತ್ರ- ಜೆ.ಎನ್.ಶಿವಕುಮಾರ್, ಹರದನಹಳ್ಳಿ ಕ್ಷೇತ್ರ- ಬಿ.ವಿ.ಶಿವಕುಮಾರ್, ಅಮಚವಾಡಿ ಕ್ಷೇತ್ರ- ರವಿಕುಮಾರ್, ಉಡಿಗಾಲ- ನಿಂಗಮಣಿ, ಹರವೆ ಕ್ಷೇತ್ರ - ಮಹದೇವಪ್ರಸಾದ್, ವರ್ತಕರ ಕ್ಷೇತ್ರ- ಹೆಚ್.ಪಿ.ರಾಜಶೇಖರ್, ಹೊಂಗನೂರು ಕ್ಷೇತ್ರ- ಜಿ.ಪಿ.ಮೋಹನ್ ಕುಮಾರ್, ಉಮ್ಮತ್ತೂರು ಕ್ಷೇತ್ರ- ಕಲಾವತಿ ಇವರು ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ಅರ್.ಸುಂದರ್, ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಜಿಪಂ ಮಾಜಿ ಸದಸ್ಯ ಸಿ.ಎನ್.ಬಾಲರಾಜ್, ನಗರ ಸಭಾ ಮಾಜಿ ಅಧ್ಯಕ್ಷ ಸುರೇಶ್‌ನಾಯಕ, ಗ್ರಾಮಾಂತರ ಮಂಡಲ ಅಧ್ಯಕ್ಷ ಬೇಡರಪುರ ಬಸವಣ್ಣ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ.ಬಸವಣ್ಣ, ಪ್ರಶಿಕ್ಷಣ ಪ್ರಕೋಷ್ಠ ರಾಜ್ಯ ಸಂಚಾಲಕ ಬಾಲ ಸುಬ್ರಹ್ಮಣ್ಯಂ, ತಾಪಂ ಮಾಜಿ ಉಪಾಧ್ಯಕ್ಷ ಪಿ.ಎನ್.ದಯಾನಿಧಿ, ಚಾಮುಲ್ ನಿರ್ದೇಶಕರಾದ ಕಿಲಗೆರೆ ಬಸವರಾಜು ರವಿಶಂಕರ್, ನಗರಸಭಾ ಸದಸ್ಯ ಶಿವರಾಜ್, ಮುಖಂಡ ನಟರಾಜ್, ಮೂಡ್ಲಪುರ ನಂದೀಶ್ ಇತರರು ಹಾಜರಿದ್ದರು.

ಮೈಸೂರು ನಗರ ಸುದ್ದಿಗಳು..

ಹಲಾಲ್ ಬಗ್ಗೆ ಆರೋಪ-ಪ್ರತ್ಯಾರೋಪ

ಎರಡೂ ಸಮುದಾಯದ ಮುಖಂಡರ ಮೇಲಾಟ: ಜನರಲ್ಲಿ ಗೊಂದಲ

ಬೆಂಗಳೂರು, ಮಾ.30-'ಹಲಾಲ್' ಮುಕ್ತ ಭಾರತ ಆಂದೋಲನಕ್ಕೆ ಚಾಲನೆ ನೀಡಿರುವ ಹಿಂದೂಪರ ಸಂಘಟನೆಗಳು ಮತ್ತು ಸಾಮಾಜಿಕ ಕಾರ್ಯಕರ್ತರು 'ಹಲಾಲ್' ಮಾಂಸ ಸೇರಿದಂತೆ ಯಾವುದೇ ವಸ್ತುಗಳನ್ನು ಖರೀದಿಸದಂತೆ ರಾಜ್ಯಾದ್ಯಂತ ಜಾಗೃತಿ ಅಭಿಯಾನ ಆರಂಭಿಸಿದ್ದಾರೆ.

ಈ ಜಾಗೃತಿ ಸಭಿಯಾನದ ವಿರುದ್ಧ ಕೆಲವು ಮುಸ್ಲಿಂ ಮುಖಂಡರುಗಳು ಆಕ್ರೋಶ ವ್ಯಕ್ತಪಡಿಸಿದ್ದು, ಕಟುವಾದ ಪದಗಳಿಂದ ಟೀಕೆ ಮಾಡಿದ್ದಾರೆ. 'ಹಲಾಲ್' ಮಾಡಿರುವ ಮಾಂಸ ಮತ್ತು 'ಹಲಾಲ್' ಪದಾರ್ಥಗಳು ಬೇಡವೆಂದರೆ ಅವರುಗಳು 'ಸಗಣಿ' ತಿನ್ನಲಿ ಎಂದು ವಾಗ್ದಾಳಿ ನಡೆಸಿದ್ದಾರೆ.

ದೇಶವನ್ನು 'ಹಲಾಲ್' ಮುಕ್ತ ಮಾಡಬೇಕು ಎಂದು ಪಣ ತೊಟ್ಟಿರುವ ಹಿಂದೂಪರ ಸಂಘಟನೆಗಳ ಕಾರ್ಯಕರ್ತರು ಮತ್ತು ಸಾಮಾಜಿಕ ಹೋರಾಟಗಾರರು, ಬೆಂಗಳೂರು ಮತ್ತು ನೆಲಮಂಗಲ ಸೇರಿದಂತೆ ಹಲವಾರು ಕಡೆಗಳಲ್ಲಿ ಮನೆ-ಮನೆಗೆ ತೆರಳಿ 'ಹಲಾಲ್' ಮಾಡಿರುವ ಮಾಂಸ ಖರೀದಿಸಬಾರದು, 'ಹಲಾಲ್' ಮಾರ್ಕ್ ಇರುವ ಪದಾರ್ಥಗಳನ್ನು ಖರೀದಿಸಬಾರದು ಎಂದು ಕರಪತ್ರಗಳನ್ನು ಹಂಚಿ ಜಾಗೃತಿ ಮೂಡಿಸುತ್ತಿದ್ದಾರೆ.

'ಹಲಾಲ್'ಗೆ ಯಾವುದೇ ಮಹತ್ವವಿಲ್ಲ. ಇದನ್ನು ಮುಸ್ಲಿಂ ಟ್ರಸ್ಟ್ ನೀಡುತ್ತಿದ್ದು, ಇದಕ್ಕಾಗಿ ಸಂಗ್ರಹವಾಗುವ ಹಣವನ್ನು ಭಯೋತ್ಪಾದನೆ ಸೇರಿದಂತೆ ಹಲವಾರು ವಿಚಾರಗಳಿಗೆ ಬಳಕೆಯಾಗುತ್ತಿದೆ ಎಂದು ಸಾಮಾಜಿಕ ಹೋರಾಟಗಾರ ಪ್ರಶಾಂತ್ ಸಂಬರ್ಗಿ ಆರೋಪ ಮಾಡಿದ್ದರೆ, ಶ್ರೀರಾಮ ಸೇನೆಯ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಕೂಡ ಇದೇ ವಿಷಯವನ್ನು ತಿಳಿಸಿದ್ದಾರೆ.

'ಹಲಾಲ್' ಮಾಂಸ ಸೇರಿದಂತೆ ಹಲಾಲ್ ಇರುವ ವಸ್ತುಗಳ ಮಾರಾಟವನ್ನು ಕೈಬಿಡುವವರಿಗೆ ತಾವೇ ಧನ ಸಹಾಯ ಮಾಡಿ ವ್ಯಾಪಾರ ಅವಕಾಶ ಮಾಡಿ ಕೊಡುವುದಾಗಿ ಶಾಸಕ ರೇಣುಕಾ ಚಾರ್ಯ ತಿಳಿಸಿದ್ದಾರೆ.

ಯಾರೋ 'ಹಲಾಲ್' ಮಾಂಸ ಬಳಸಬೇಡಿ, 'ಜಟ್ಕಾ' ಮಾಂಸವನ್ನು ಬಳಸಿ ಎಂದು ಕಾರ್ಯಕರ್ತರು ತಿಳಿಸುತ್ತಿದ್ದು, ಇದು ಇನ್ನು ಮುಂದೆ ರಾಜ್ಯದ ಪ್ರತೀ ಜಿಲ್ಲೆ, ತಾಲೂಕು ಮತ್ತು ಹೋಬಳಿ ಮಟ್ಟಕ್ಕೂ ಹಬ್ಬುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

'ಹಲಾಲ್' ಮಾಡಿರುವ ಮಾಂಸ ಮತ್ತು ವಸ್ತುಗಳನ್ನು 180ಕ್ಕೂ ಅಧಿಕ ದೇಶಗಳು ಉಪಯೋಗಿಸುತ್ತಿವೆ. ಸಗಣಿ ತಿನ್ನುವ ಜನರಿಗೆ ಇದು ಅರ್ಥವಾಗುತ್ತಿಲ್ಲ ಎಂದು ಮುಸ್ಲಿಂ ಮುಖಂಡರೊಬ್ಬರು ತಿಳಿಸುವ ಮೂಲಕ ಆಕ್ರೋಶ ಹೊರ ಹಾಕಿದ್ದಾರೆ.

ಇದರಿಂದ ಯುಗಾದಿ ಮರು ದಿನ ಆಚರಿಸಲ್ಪಡುವ 'ಹೊಸ ತೊಡಕು' ಮಾಂಸ ದೂಟದ ಮೇಲೆ ಪ್ರಭಾವ ಬೀರುವ ಸಾಧ್ಯತೆ ಗಳಿವೆ. ಚಿಕ್ಕಮಗಳೂರು ಜಿಲ್ಲೆಯಲ್ಲೂ ಕೂಡ 'ಹಲಾಲ್' ವಿರೋಧಿಸುವ ಕ್ಯಾಂಪೇನ್‌ಗಳು ನಡೆಯುತ್ತಿವೆ.

ತೈಲ, ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಇಂದು ಕಾಂಗ್ರೆಸ್ ಪ್ರತಿಭಟನೆ

ಮೈಸೂರು, ಮಾ.30- ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಮೈಸೂರು ನಗರ ಜಿಲ್ಲಾ ಯುವ ಕಾಂಗ್ರೆಸ್ ಹಾಗೂ ಅಸಂಘಟಿತ ಕಾರ್ಮಿಕರ ವಿಭಾಗದ ವತಿಯಿಂದ ನಾಳೆ(ಮಾ.31) ಬೆಳಗ್ಗೆ 12.30ಕ್ಕೆ ನಗರದ ಚಾಮರಾಜ ವೃತ್ತದ ಬಳಿಯ ಡಾ.ರಾಜ್‌ಕುಮಾರ್ ಉದ್ಯಾನದ ಎದುರು ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಬೀದಿಬದಿ ವ್ಯಾಪಾರಿಗಳಿಗೆ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಕಾರ್ಯಕ್ರಮ ನಡೆಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪಂಚರಾಜ್ಯಗಳ ಚುನಾವಣೆ ನಂತರ ಕೇಂದ್ರ ಸರ್ಕಾರ ತೈಲಬೆಲೆ ಏರಿಕೆ ಮಾಡುತ್ತಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರುತ್ತಿದೆ. ಪರಿಣಾಮ ಸಾಮಾನ್ಯರ ಜೀವನ ದುಸ್ತರವಾಗಿದ್ದು, ಈ ಸಂದರ್ಭದಲ್ಲಿ 'ಬೆಲೆ ಏರಿಕೆ ಮುಕ್ತಭಾರತ ಅಭಿಯಾನ' ನಡೆಸುವ ಮೂಲಕ ಜನಪರವಾಗಿ ಧ್ವನಿ ಎತ್ತುವಂತೆ ಎಐಸಿಸಿ ನಿರ್ದೇಶನದ ಮೇರೆಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲಾಗುತ್ತಿದೆ.



ಮೈಸೂರಿನ ಶ್ರೀ ಚಾಮುಂಡೇಶ್ವರಿ ಯುವಕರ ಸಂಘದ ವತಿಯಿಂದ ಏರ್ಪಡಿಸಿದ್ದ ಶ್ರೀ ಬಂದಮ್ಮ ಹಾಗೂ ಚಾಮುಂಡೇಶ್ವರಿ ಅಮ್ಮನವರ ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ವಾಸು ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್, ನಗರಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, 41ನೇ ವಾರ್ಡಿನ ಕಾಂಗ್ರೆಸ್ ಅಧ್ಯಕ್ಷ ಹರೀಶ್‌ಗೌಡ, ಮುಖಂಡರಾದ ಟಿವಿ9 ರಾಮ್, ನಂಜುಂಡಿ, ಕೃಷ್ಣ ಇನ್ನಿತರರು ಉಪಸ್ಥಿತರಿದ್ದರು.

ಹೃದ್ರೋಗ ತಜ್ಞವೈದ್ಯರು ಕ್ಷೇತ್ರದ ತಂತ್ರಜ್ಞಾನದ ಅರಿವು ಹೊಂದಬೇಕು

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ



ಮೈಸೂರು, ಮಾ.30(ಪಿಎಂ)- ಹೃದ್ರೋಗ ಕ್ಷೇತ್ರದಲ್ಲಿ ತಂತ್ರಜ್ಞಾನವು ಅತ್ಯಂತ ವೇಗವಾಗಿ ಬೆಳವಣಿಗೆ ಕಾಣುತ್ತಿದ್ದು, ಹೃದ್ರೋಗ ತಜ್ಞ ವೈದ್ಯರು ಈ ಬಗ್ಗೆ ಅರಿವು ಹೊಂದುವುದು ಬಹಳ ಮುಖ್ಯ ಎಂದು ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯ (ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ) ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ತಿಳಿಸಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಅಪೋಲೊ ಬಿಜಿಎಸ್ ಆಸ್ಪತ್ರೆ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ 'ಕಾರ್ಡಿಯೋವಾಸ್ಕ್ಯುಲರ್' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. ಅಪೋಲೊ ಆಸ್ಪತ್ರೆಯು ಪ್ರತಿವರ್ಷವೂ ವಿಚಾರ ಸಂಕಿರಣ ಆಯೋಜಿಸುವ ಮೂಲಕ ಹೃದ್ರೋಗಕ್ಕೆ ಸಂಬಂಧಿಸಿದಂತೆ ನಡೆಯುತ್ತಿ ರುವ ಹೊಸ ಬೆಳವಣಿಗೆಗಳ ಕುರಿತು ವೈದ್ಯರಿಗೆ ಜಾಗೃತಿ ಮೂಡಿಸುತ್ತಿದ್ದು, ಇದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಆಸ್ಪತ್ರೆಯ ಮುಖ್ಯ ಕಾರ್ಡಿಯಾಲಜಿಸ್ಟ್ ಡಾ.ಅರುಣ್ ಶ್ರೀವಾಸ್ ಮಾತನಾಡಿ, ಹೃದ್ರೋಗ ಆರೈಕೆಯಲ್ಲಿ ನಮ್ಮ ಆಸ್ಪತ್ರೆ ಮುಂಚೂಣಿಯಲ್ಲಿದೆ. ಒಸಿಟಿ, ಟಿಎವಿಆರ್, ಎಫ್‌ಎಫ್‌ಆರ್, ಬಯೋ ಅಬ್ಸರ್ಬಲ್ ಸ್ಟೆಂಟ್ಸ್ ರೊಟೇಶನಲ್ ಅಥೆಕ್ಟಮಿ, ಸಿಆರ್‌ಡಿಟಿ, ಎಲ್‌ಬಿಬಿಪಿ ಮೊದಲಾದ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಗುಣಮಟ್ಟದ ಸೇವೆ ನೀಡುತ್ತಿದೆ. ಆ ಮೂಲಕ ಮೈಸೂರಿನ ಜನರಿಗೆ ಅತ್ಯುತ್ತಮ ಹೃದ್ರೋಗ ಆರೈಕೆ ಸೇವೆ ನೀಡುತ್ತಿದೆ ಎಂದರು.

ಹೃದ್ರೋಗ ತಜ್ಞರು, ಜನರಲ್ ಫಿಜಿಷಿಯನ್ಸ್, ಫ್ಯಾಮಿಲಿ ಫಿಜಿಷಿಯನ್ಸ್ ಸೇರಿದಂತೆ 230 ವೈದ್ಯರು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರು. ಡಾ.ಜಯಾ ರಂಗನಾಥ್, ಡಾ.ಅಮೃತ್ ನಾಣಯ್ಯ, ಡಾ.ಅಯ್ಯಪ್ಪ ಡಾ.ಜೆ.ಮೀನು, ಡಾ.ಅರುಣ್ ಡಿ.ಫುರ್ಟಾಡೊ, ಡಾ.ಲಕ್ಷ್ಮೀ ನಾರಾಯಣಾಚಾರ್, ಡಾ.ಮಧುಪ್ರಕಾಶ್, ಡಾ.ಕೆ.ಎನ್.ಭಾಸ್ಕರ್, ಡಾ.ಗುರು ಪ್ರಸಾದ್, ಡಾ.ಜಾವೀದ್ ನಯೀಮ್, ಡಾ.ಪ್ರಶಾಂತ್, ಡಾ.ನಾಗೇಶ್ ವಿವಿಧ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಮಿತ್ರ ಗುರುವಾರ 31 ಮಾರ್ಚ್ 2022

ವಿರೋಧ ಪಕ್ಷದೊಂದಿಗೆ ಕೈಜೋಡಿಸಿದ ಮೈತ್ರಿಪಕ್ಷ

ಬಹುಮತ ಕಳೆದುಕೊಂಡ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್



ಇಸ್ಲಾಮಾಬಾದ್, ಮಾ.30–ಪಾಕಿಸ್ತಾನದ ಪ್ರಧಾನ ಮಂತ್ರಿ ಇಮ್ರಾನ್‌ಖಾನ್ ನೇತೃತ್ವದ ಸರ್ಕಾರ ಬಹುಮತ ಕಳೆದುಕೊಂಡಿದೆ. ಇಮ್ರಾನ್‌ಖಾನ್ ನೇತೃತ್ವದ ಪಾಕಿಸ್ತಾನ್ ತೆಹ್ರೀಕ್–ಎ–ಇನ್ಸಾಫ್ (ಪಿಟಿಐ)ನ ಪ್ರಮುಖ ಮೈತ್ರಿ ಪಕ್ಷ ಮುತ್ತಾಹಿದಾ ಕ್ವಾಮಿ ಮೂವ್‌ಮೆಂಟ್ (ಎಂಕ್ಯೂಎಂ) ಹೊರಬಂದು ಪ್ರಮುಖ ವಿರೋಧ ಪಕ್ಷ ಪಾಕಿಸ್ತಾನ ಪೀಪಲ್ಸ್ ಪಾರ್ಟಿ(ಪಿಪಿಪಿ) ಯೊಂದಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಇಮ್ರಾನ್ ಖಾನ್ ಅವರಿಗೆ ತೀವ್ರ ಮುಖಭಂಗವಾಗಿದೆ.

ಸಂಯುಕ್ತ ವಿಪಕ್ಷ ಮತ್ತು ಎಂಕ್ಯೂಎಂ ಒಪ್ಪಂದ ಮಾಡಿಕೊಂಡಿವೆ. ರಬ್ತಾ ಸಮಿತಿ MQM ಮತ್ತು PPP CEC ಈ ಒಪ್ಪಂದವನ್ನು ಅನುಮೋದಿಸುತ್ತದೆ. ನಾಳೆ ಸುದ್ದಿಗೋಷ್ಠಿಯಲ್ಲಿ ಸಂಪೂರ್ಣ ವಿವರ ನೀಡಲಿದ್ದೇವೆ. ಪಾಕಿಸ್ತಾನಕ್ಕೆ ಅಭಿನಂದನೆಗಳು ಎಂದು ಪಿಪಿಪಿ ಅಧ್ಯಕ್ಷ ಬಿಲವಲ್ ಭಟ್ಟೋ ಜರ್ದಾರಿ ಟ್ವೀಟ್ ಮಾಡಿದ್ದಾರೆ.

ನಾಳೆ ಅಂದರೆ ಮಾರ್ಚ್ 31 ರಂದು ಇಮ್ರಾನ್ ಖಾನ್ ವಿರುದ್ಧದ ಅವಿಶ್ವಾಸ ನಿರ್ಣಯ ಮಂಡನೆ ಮೊದಲು ಕಳೆದ ತಡರಾತ್ರಿ ನಡೆದ ಬೆಳವಣಿಗೆಯ ನಂತರ ಪಿಟಿಐ ಸರ್ಕಾರವು ಸಂಸತ್ತಿನ ಕೆಳಮನೆಯಲ್ಲಿ ಬಹುಮತವನ್ನು ಕಳೆದುಕೊಂಡಿತು.

ಆಡಳಿತಾರೂಢ ಸಂಯುಕ್ತ ಪಾಲುದಾರ ಪಕ್ಷ MQM-P ಇಮ್ರಾನ್ ಖಾನ್ ನೇತೃತ್ವದ ಸರ್ಕಾರದಿಂದ ಹೊರಬಂದ ಕಾರಣ 177 ಸದಸ್ಯ ಬಲದ ಸಂಸತ್ತಿನಲ್ಲಿ 164 ಸದಸ್ಯರು ಹೊರಬಂದಿದ್ದಾರೆ.ಇಲ್ಲಿ ನಾಳೆ ನಡೆಯಲಿರುವ ವಿಶ್ವಾಸ ಮತದಲ್ಲಿ ಪ್ರಧಾನಿ ಇಮ್ರಾನ್ ಖಾನ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲು 172 ಸದಸ್ಯರ ಬೆಂಬಲ ಅಗತ್ಯವಿದೆ. ಈ ಮಧ್ಯೆ ವಿದೇಶಿ ಅನುದಾನ ಪಡೆಯುವ ಮೂಲಕ ತಮ್ಮ ಸರ್ಕಾರವನ್ನು ಉರುಳಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಇಮ್ರಾನ್ ಖಾನ್ ಆರೋಪ ಮಾಡಿದ ನಂತರ ಪ್ರತಿಕ್ರಿಯೆ ನೀಡಿರುವ ಫೆಡರಲ್ ಸಚಿವ ಅಸದ್ ಉಮರ್, ತಮ್ಮ ಸರ್ಕಾರಕ್ಕೆ ಬಹುಮತ ಇರುವುದನ್ನು ಸಾಬೀತುಪಡಿಸಲು ಪ್ರಧಾನಿ ಇಮ್ರಾನ್ ಖಾನ್ ಪಾಕಿಸ್ತಾನ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಸಿದ್ಧವಿದ್ದಾರೆ ಎಂದರು.

ಪಾಕಿಸ್ತಾನದಲ್ಲಿ ಸರ್ಕಾರ ಬದಲಿಸಲು ವಿದೇಶಿ ಹಣದ ಮೂಲಕ ಪ್ರಯತ್ನಗಳು ನಡೆಯುತ್ತಿವೆ. ನಮ್ಮ ಜನರನ್ನು ಬಳಸಿಕೊಳ್ಳಲಾಗುತ್ತಿದೆ. ಆದರೆ ಕೆಲವರು ನಮ್ಮ ವಿರುದ್ಧ ಹಣವನ್ನು ಬಳಸುತ್ತಿದ್ದಾರೆ. ಯಾವ ಸ್ಥಳಗಳಿಂದ ನಮ್ಮ ಮೇಲೆ ಒತ್ತಡ ಹೇರುವ ಪ್ರಯತ್ನಗಳು ನಡೆಯುತ್ತಿವೆ ಎಂಬುದು ನಮಗೆ ತಿಳಿದಿದೆ. ನಮಗೆ ಲಿಖಿತವಾಗಿ ಬೆದರಿಕೆ ಹಾಕಲಾಗಿದೆ. ಆದರೆ ನಾವು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ ಎಂದು ಪ್ರಧಾನಿ ಇಮ್ರಾನ್ ಖಾನ್ ಹೇಳಿಕೆ ನೀಡಿದ್ದರು.

ಕರ್ನಾಟಕದಲ್ಲಿ ಕಬ್ಬಿಣದ ಅದಿರು ರಫ್ತಿನ ಬಗ್ಗೆ ನಿಲುವು ಸ್ಪಷ್ಟಪಡಿಸಿ

ಕೇಂದ್ರಕ್ಕೆ ಸುಪ್ರೀಂ ಸೂಚನೆ



ನವದೆಹಲಿ, ಮಾ. 30– ಕರ್ನಾಟಕದಲ್ಲಿ ಹೊರತೆಗೆಯಲಾದ ಕಬ್ಬಿಣದ ಅದಿರನ್ನು ರಫ್ತು ಮಾಡುವ ಬಗ್ಗೆ ನಿಮ್ಮ ನಿಲುವು ಸ್ಪಷ್ಟಪಡಿಸುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಬುಧವಾರ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್ ವಿ ರಮಣ ನೇತೃತ್ವದ ಸುಪ್ರೀಂ ಪೀಠ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಈ ವಿಷಯದ ಬಗ್ಗೆ ಮಾಹಿತಿ ಪಡೆದು ಏಪ್ರಿಲ್ 8 ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಆದೇಶಿಸಿದೆ. ಸುಪ್ರೀಂಕೋರ್ಟ್ ನೇಮಿಸಿದ ಕೇಂದ್ರೀಯ ಸಶಕ್ತ ಸಮಿತಿ ಮತ್ತು ಮೇಲ್ವಿಚಾರಣಾ ಸಮಿತಿಗೆ ಪ್ರಸ್ತುತ ಲಭ್ಯವಿರುವ ಕಬ್ಬಿಣದ ಅದಿರಿನ ಅಂದಾಜು ಪ್ರಮಾಣವನ್ನು ಸೂಚಿಸುವ ಸ್ಥಿತಿಗತಿ ವರದಿ ಸಲ್ಲಿಸುವಂತೆ ಸೂಚಿಸಿದೆ. ಹೊರತೆಗೆದ ಕಬ್ಬಿಣವನ್ನು ಹಾಗೆ ಇಡುವುದರಲ್ಲಿ ಯಾವುದೇ ಅರ್ಥವಿಲ್ಲ, ಅದನ್ನು ಬಳಸಬೇಕು, ಮಾರಾಟ ಮಾಡಬೇಕು ಅಥವಾ ಅಲ್ಲಿಂದ ಸಾಗಿಸಬೇಕು. ಮೊದಲು ಸಂಗ್ರಹವಾಗಿರುವ ಅದಿರನ್ನು ತೆರವುಗೊಳಿಸೋಣ ನಂತರ ಏನು ಮಾಡಬೇಕೆಂದು ನೋಡೋಣ. ಅದರಿಂದ ರಾಜ್ಯ ಸರ್ಕಾರ ಮತ್ತು ಅಭಿವೃದ್ಧಿ ನಿಧಿಗೆ ಸ್ವಲ್ಪ ಹಣ ಸಿಗಬಹುದು" ಎಂದು ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ ಮತ್ತು ಹಿಮಾ ಕೊಹ್ಲಿ ಅವರನ್ನೊಳಗೊಂಡ ಪೀಠ ಹೇಳಿದೆ. ಈ ಹಿಂದೆ ಕರ್ನಾಟಕದಲ್ಲಿ ಕಬ್ಬಿಣದ ಅದಿರು ರಫ್ತು ಮೇಲಿನ ನಿಷೇಧವನ್ನು ತೆಗೆದುಹಾಕಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು.

ಒಂದನೇ ಪುಟದಿಂದ

ಮಾಧ್ಯಮದವರೇ ಕಾರಣ

ಏನು ಬೇಕೋ, ಎಲ್ಲಿ ಬೇಕೋ, ಅಲ್ಲಿ ಖರೀದಿ ಮಾಡುತ್ತಾರೆ. ಇಂತಹ ಕಡೆಯೇ ಖರೀದಿಸಿ ಎಂದು ಹೇಳುವುದಾಗಲೀ, ಅಲ್ಲಿಗೆ ಹೋಗಿ, ಇಲ್ಲಿಗೆ ಹೋಗಿ ಎಂದು ಹೇಳಲು ಇವರಿಗೆ ಅಧಿಕಾರ ಕೊಟ್ಟವರು ಯಾರು? ಎಂದು ಪ್ರಶ್ನಿಸಿದರು.

ಒಂದು ಡಿ–ನೋಟಿಫಿಕೇಷನ್ ಹಲಗೆವಡೇರಹಳ್ಳಿಯಲ್ಲಿ ಆಗಿತ್ತು. ಹಿಂದಿನ ಮುಖ್ಯಮಂತ್ರಿಗಳ ಜೊತೆ ಕೆಲಸ ಮಾಡುತ್ತಿದ್ದ ಅಧಿಕಾರಿ ಕಡತ ಕ್ಲಿಯರ್ ಮಾಡುವಂತೆ ತಿಳಿಸಿದ್ದರು. ಸರಿ ಇದ್ದರೆ ಮಾಡೋಣ ಫೈಲ್ ತನ್ನಿ ಎಂದು ಹೇಳಿದ್ದೆ. ಸಹಿ ಹಾಕಿದೆ. ಅದು ಇನ್ನೂ ಕೂಡ ಬಗೆಹರಿದೇ ಇಲ್ಲ. ಕುಮಾರಸ್ವಾಮಿ ಜೈಲಿಗೆ ಎಂದು ಮಾಧ್ಯಮದವರೇ ತೀರ್ಪು ನೀಡಿದರು ಎಂದು ವ್ಯಂಗ್ಯವಾಡಿದರು.

ಈ ದೇಶದ ನ್ಯಾಯಾಲಯಗಳಲ್ಲಿರುವ ಕೇಸ್‌ಗಳು ಬಗೆಹರಿಸಲು 300 ವರ್ಷಗಳು ಬೇಕು. ಅದಕ್ಕೆ ನಮ್ಮ ಮೊಮ್ಮಕ್ಕಳ ಕಾಲ ಬರಬೇಕು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಭ್ರಷ್ಟಾಚಾರ ಎಂಬುದು ಮಿತಿಮೀರಿದೆ, ಬಡವರು ಕೆಲಸ ಮಾಡಿಸಿಕೊಳ್ಳಬೇಕಾದರೆ ಲಂಚ ಕೊಡಬೇಕು, ಒಂದು ವರದಿ ಪ್ರಕಾರ ಇದುವರೆಗೆ ದೇಶದಲ್ಲಿ ಬಡವರು ಎಂಟು ಸಾವಿರ ಮಿಲಿಯನ್‌ನಷ್ಟು ಲಂಚ ಕೊಟ್ಟಿರುವರೆಂದು ಹೇಳಲಾಗಿದೆ. ಪ್ರತೀ ಇಲಾಖೆಯಲ್ಲೂ ಮಿಲಿಯನ್ ಗಟ್ಟಲೆ ಲಂಚ ನೀಡಲಾಗಿದೆ. ಪೊಲೀಸ್ ಇಲಾಖೆಗೆ ಹೆಚ್ಚು ಲಂಚ ನೀಡಲಾಗಿದೆ. ಇಂಡಿಯಾ ಕರಪ್ಷನ್ ಸರ್ವೆ ವರದಿಯಲ್ಲಿ ಇದು ಉಲ್ಲೇಖವಾಗಿದೆ ಎಂದು ಕುಮಾರಸ್ವಾಮಿ ಇದೇ ಸಂದರ್ಭದಲ್ಲಿ ಹೇಳಿದರು.

ಮೀಸಲಾತಿ ಹೆಚ್ಚಳ

ಮೀಸಲಾತಿ ಹೆಚ್ಚಿಸಬೇಕೆಂಬ ಒತ್ತಾಯವಿದೆ. ಶೇ.50 ಮೀಸಲಾತಿ ಪ್ರಮಾಣ ಹೆಚ್ಚಳ ಮಾಡುವಂತೆ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದೇವೆ. ಯಾವುದೇ ಸಮುದಾಯಕ್ಕೆ ಮೀಸಲಾತಿ ಹೆಚ್ಚಿಸಬೇಕಾದರೆ ಕಾನೂನು ಚೌಕಟ್ಟಿನಲ್ಲೇ ಕ್ರಮ ಕೈಗೊಳ್ಳಬೇಕಿದೆ, ಸರ್ಕಾರ ನಾಗಮೋಹನ್ ದಾಸ್ ಶಿಫಾರಸು ಅಧ್ಯಯನ ಮಾಡಿ ವರದಿ ನೀಡುವಂತೆ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಆಡಿ ಅವರಿಗೆ ಸೂಚಿಸಲಾಗಿದೆ. ಸದನದಲ್ಲಿ ಎಲ್ಲರಿಗೂ ಸ್ಪಷ್ಟ ಭರವಸೆ ಕೊಡುವುದೇನೆಂದರೆ, ಎಲ್ಲಾ ಸಮುದಾಯಗಳ ಮೀಸಲಾತಿ ಹೆಚ್ಚಳ ಸಂಬಂಧ ಸದ್ಯದಲ್ಲೇ ಸರ್ವಪಕ್ಷಗಳ ಸಭೆ ಕರೆಯಲಾಗುವುದು. ಪ್ರತಿಭಟನೆ ನಡೆಸುತ್ತಿರುವ ಶ್ರೀಗಳು ಧರಣಿ ಕೈಬಿಡಬೇಕು ಎಂದು ಮನವಿ ಮಾಡಿದರು. ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿ, ಸರ್ಕಾರ ಮೀಸಲಾತಿ ಹೆಚ್ಚಳಕ್ಕೆ ಪೂರಕವಾಗಿ ಸ್ಪಂದಿಸಿದ್ದು ಶ್ರೀಗಳು ಧರಣಿ ಕೈಬಿಡುವಂತೆ ಎಲ್ಲರೂ ವಿನಂತಿಸೋಣ ಎಂದರು.

ಕಾಂಗ್ರೆಸ್ ಕಸರತ್ತು

ಸಮಾರಂಭವನ್ನು ಅದ್ಧೂರಿಯಾಗಿ ನಡೆಸುವ ಮೂಲಕ ರಾಜ್ಯದ ಜನರಿಗೆ, ಅದರಲ್ಲೂ ಮುಖ್ಯವಾಗಿ ಲಿಂಗಾಯತ ಸಮುದಾಯದ ಜನರಿಗೆ ಪೂರಕ ಸಂದೇಶ ರವಾನಿಸಲು ಕಾಂಗ್ರೆಸ್ ಹೈಕಮಾಂಡ್ ಸೂಚನೆ ನೀಡಿತ್ತು. ಅದಕ್ಕನುಗುಣವಾಗಿ ಮಾರ್ಚ್ 28ರ ಸೋಮವಾರ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ಎಂ.ಬಿ.ಪಾಟೀಲ್ ಪ್ರಚಾರ ಸಮಿತಿ ಅಧ್ಯಕ್ಷರಾಗಿ ಪದಗ್ರಹಣ ಮಾಡಿದರು. ಇದೀಗ ಪಕ್ಷದ ರಾಷ್ಟ್ರೀಯ ನಾಯಕ ರಾಹುಲ್ ಗಾಂಧಿ ಅವರೇ ಮಾರ್ಚ್ 31ರ ಗುರುವಾರ ರಾಜ್ಯಕ್ಕೆ ಆಗಮಿಸಲಿದ್ದು, ತುಮಕೂರಿನ ಶ್ರೀಸಿದ್ಧಗಂಗಾ ಮಠಕ್ಕೆ ಭೇಟಿ ನೀಡಲಿದ್ದಾರೆ.

ಬಿಜೆಪಿಯ ಭಾವನಾತ್ಮಕ ಅಸ್ತ್ರಗಳಿಂದ ಕಂಗಾಲಾಗಿರುವ ಪಕ್ಷಕ್ಕೆ ಪ್ರಬಲ ಲಿಂಗಾಯತ ಸಮುದಾಯದ ಬೆಂಬಲ ದಕ್ಕಿದರೆ ಮುಂದಿನ ಚುನಾವಣೆಯಲ್ಲಿ ಗೆಲುವು ನಿಶ್ಚಿತ ಎಂಬುದು ಕೈ ಪಾಳೆಯದ ಲೆಕ್ಕಾಚಾರ ಎಂದು ಮೂಲಗಳು ಹೇಳಿವೆ.

ಮತ್ತೆ ಅಧಿಕಾರಕ್ಕೆ

ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕರ್ನಾಟಕ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ಮಹದೇವಯ್ಯ, ಮಾಜಿ ಎಂಎಲ್‌ಸಿಗಳಾದ ತೋಂಟದಾರ್ಯ, ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಮೇಯರ್ ಸುನಂದಾ ಪಾಲನೇತ್ರ, ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮಾ.ವಿ.ರಾಮಪ್ರಸಾದ್, ಲಕ್ಷ್ಮೀ ಕಿರಣ್ ಮಾದೇಗೌಡ, ದೇವರಾಜ ಅರಸು ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರಘು ಕೌಟಿಲ್ಯ, ಮುಖಂಡ ಕಾ.ಪು.ಸಿದ್ದಲಿಂಗಸ್ವಾಮಿ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಪ್ರಧಾನ ಕಾರ್ಯದರ್ಶಿಗಳಾದ ಎಚ್.ಜಿ.ಗಿರಿಧರ್, ಸೋಮಸುಂದರ್, ವಾಣೀಶ್‌ಕುಮಾರ್, ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂ.ವಿ.ರವಿಶಂಕರ್ ಇತರರು ಈ ವೇಳೆ ಉಪಸ್ಥಿತರಿದ್ದರು.

ಸೂಕ್ತ ಚಿಕಿತ್ಸೆ ಪಡೆಯದೇ ಮೈಸೂರು ಜಿಲ್ಲೆಯಲ್ಲಿ ವರ್ಷಕ್ಕೆ 360ಕ್ಕೂ ಹೆಚ್ಚು ಕ್ಷಯ ರೋಗಿಗಳ ಸಾವು: ಡಿಹೆಚ್‌ಓ

●'ಸೈಕಲ್ ಜಾಥಾ' ಮೂಲಕ ಕ್ಷಯ ರೋಗದ ಬಗ್ಗೆ ಜಾಗೃತಿ ●ಪ್ರತಿ ವರ್ಷ 4 ಸಾವಿರ ಹೊಸ ಕ್ಷಯ ರೋಗಿಗಳ ಪತ್ತೆ ●ನಿರಂತರ ಕೆಮ್ಮು ಇದ್ದರೆ, ಕಫ ಪರೀಕ್ಷಿಸಿ ●2025ರ ಒಳಗೆ ಕ್ಷಯ ಮುಕ್ತ ಭಾರತ ನಿರ್ಮಾಣಕ್ಕೆ ತಯಾರಿ



ಮೈಸೂರು,ಮಾ.30(ಎಂಟಿವೈ)– ಮೈಸೂರು ಜಿಲ್ಲೆಯಲ್ಲಿ ಪ್ರತಿವರ್ಷ ಹೊಸದಾಗಿ 4 ಸಾವಿರ ಕ್ಷಯರೋಗಿಗಳು ಪತ್ತೆಯಾಗುತ್ತಿದ್ದು, ಸೂಕ್ತ ಚಿಕಿತ್ಸೆ ಪಡೆಯದೇ 360ಕ್ಕೂ ಹೆಚ್ಚು ಮಂದಿ ಸಾವನ್ನಪ್ಪುತ್ತಿದ್ದಾರೆ ಎಂದು ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ತಿಳಿಸಿದ್ದಾರೆ.

ಮೈಸೂರು ಅರಮನೆಯ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಎದುರು 'ವಿಶ್ವ ಕ್ಷಯ ರೋಗ ದಿನ'ದ ಹಿನ್ನೆಲೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕ್ಷಯರೋಗ ನಿರ್ಮೂಲನಾ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸೈಕಲ್ ಜಾಥಾ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಹಾಗೂ ಆರೋಗ್ಯ ಇಲಾಖೆ 2025ರ ವೇಳೆಗೆ 'ಕ್ಷಯ ಮುಕ್ತ ಭಾರತ' ಮಾಡಬೇಕೆಂದು ಪಣ ತೊಟ್ಟಿದೆ. ಅದಕ್ಕಾಗಿ ಕ್ಷಯ ರೋಗಿಗಳನ್ನು ಆರಂಭದಲ್ಲಿಯೇ ಪತ್ತೆ ಹಚ್ಚಿ, ಸೂಕ್ತ ಚಿಕಿತ್ಸೆ ಕೊಡಿಸಲು ವಿವಿಧ ಕಾರ್ಯಕ್ರಮ ರೂಪಿಸಿದೆ. ಮೈಸೂರು ಜಿಲ್ಲೆಯನ್ನೂ ಕ್ಷಯ ಮುಕ್ತ ಜಿಲ್ಲೆಯಾಗಿ ಮಾರ್ಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕ್ಷಯ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಂದಾಗಿದೆ. ಆದರೂ ಕಳೆದ ಐದಾರು ವರ್ಷಗಳಿಂದ ಜಿಲ್ಲೆಯಲ್ಲಿ ಪ್ರತಿವರ್ಷ ಸರಾಸರಿ 4 ಸಾವಿರ ಹೊಸದಾಗಿ ಕ್ಷಯರೋಗಿಗಳು ಪತ್ತೆಯಾಗುತ್ತಿದ್ದಾರೆ. ಹಳೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದರೂ ಹೊಸ ಹೊಸ ರೋಗಿಗಳು ಪತ್ತೆಯಾಗುತ್ತಿರುವುದು ಸವಾಲಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲಿ ಔಷಧಿ ತೆಗೆದುಕೊಂಡರೂ 15 ದಿನ ಕೆಮ್ಮು ಕಡಿಮೆಯಾಗದಿದ್ದರೆ ಕೂಡಲೇ ಕೆ.ಆರ್.ಆಸ್ಪತ್ರೆ, ಟಿಬಿ ಆಸ್ಪತ್ರೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತೆರಳಿ ಕಫ ಪರೀಕ್ಷೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಕ್ಷಯ ರೋಗದ ತೀವ್ರತೆಗೆ ಅನುಗುಣವಾಗಿ ಮೂರು ಕ್ಯಾಟಗರಿಯಲ್ಲಿ ವಿಂಗಡಿಸಿ ಕ್ಷಯ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಮೊದಲ ಕ್ಯಾಟಗರಿಯಲ್ಲಿ ಗುರುತಿಸಿದ ರೋಗಿಗಳಿಗೆ 6 ತಿಂಗಳು ಚಿಕಿತ್ಸೆ ನೀಡಿದರೆ ಪೂರ್ಣ ಪ್ರಮಾಣದಲ್ಲಿ ಗುಣಮುಖರಾಗುತ್ತಾರೆ. ಎರಡು ಹಾಗೂ ಮೂರನೇ ಕ್ಯಾಟಗರಿಯಲ್ಲಿ ಗುರುತಿಸಿದ ರೋಗಿಗಳಿಗೆ 6 ರಿಂದ 9 ತಿಂಗಳವರೆಗೆ ಚಿಕಿತ್ಸೆ ನೀಡಬೇಕಾಗುತ್ತದೆ. ಕೆಲವು ರೋಗಿಗಳು ಒಂದೆರಡು ತಿಂಗಳು ಚಿಕಿತ್ಸೆ ಪಡೆದು ಕೆಮ್ಮು ಕಡಿಮೆಯಾಗಿದೆ ಎಂದು ಭಾವಿಸಿ ಚಿಕಿತ್ಸೆ ಪಡೆದುಕೊಳ್ಳುವುದನ್ನು ನಿಲ್ಲಿಸುತ್ತಾರೆ. ಇದರಿಂದ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಶೇ.5ರಷ್ಟು ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುವುದೇ ಇಲ್ಲ. ಈ ಎಲ್ಲಾ ಕಾರಣಗಳಿಂದ ಜಿಲ್ಲೆಯಲ್ಲಿ ವರ್ಷಕ್ಕೆ ಪತ್ತೆಯಾಗುತ್ತಿರುವ 4 ಸಾವಿರ ಕ್ಷಯರೋಗಿಗಳಲ್ಲಿ ಪೂರ್ಣ ಪ್ರಮಾಣದಲ್ಲಿ 360 ಮಂದಿ ಸಾವನ್ನಪ್ಪುತ್ತಿದ್ದಾರೆ. ಸಾವಿನ ಪ್ರಕರಣ ಹಾಗೂ ಸೋಂಕು ಹರಡುವಿಕೆ ತಡೆಗಟ್ಟುವ ನಿಟ್ಟಿನಲ್ಲಿ ಕ್ಷಯರೋಗದ ಲಕ್ಷಣವುಳ್ಳವರು ನಿರ್ಲಕ್ಷಿಸದೆ ಚಿಕಿತ್ಸೆ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಕಫ ಪರೀಕ್ಷೆಗಾಗಿ ಸ್ಯಾಂಪಲ್ ನೀಡಿದ 2–3 ದಿನದ ನಂತರ ಪರೀಕ್ಷಾ ವರದಿ ಬರುತ್ತದೆ. ಓರ್ವ ಕ್ಷಯರೋಗಿಯಿಂದ 40 ಮಂದಿಗೆ ಕ್ಷಯ ಹರಡುತ್ತದೆ. ಈ ಹಿನ್ನೆಲೆಯಲ್ಲಿ ಕ್ಷಯ ರೋಗದ ಲಕ್ಷಣ ಪತ್ತೆಯಾದವರನ್ನು ಗುರುತಿಸಿ ಅವರಿಗೆ ಚಿಕಿತ್ಸೆ ನೀಡಲಾಗುತ್ತದೆ. ಕೊರೊನಾ ಮಾದರಿಯಂತೆಯೇ ಕ್ಷಯ ರೋಗಿಗಳ ಸಂಪರ್ಕದಲ್ಲಿರುವವ ತಪಾಸಣೆ ಮಾಡಲಾಗುತ್ತದೆ. ಆ ನಂತರ ಅವರಿಗೂ ಕ್ಷಯದ ಲಕ್ಷಣ ಕಂಡು ಬಂದರೆ ಚಿಕಿತ್ಸೆ ಮುಂದುವರೆಸಲಾಗುತ್ತದೆ. ಸರ್ಕಾರದ ವತಿಯಿಂದ ಉಚಿತ ಚಿಕಿತ್ಸಾ ಸೌಲಭ್ಯ ನೀಡಲಾಗುತ್ತಿದೆ. ಗಂಭೀರ ಸ್ಥಿತಿಗೆ ತೆರಳಿದ ರೋಗಿಗಳಿಗೆ ಲಕ್ಷರೂ. ವೆಚ್ಚದ ಹೈಯರ್ ಆಂಟಿ ಬಾಡಿಯುಕ್ತ ಚಿಕಿತ್ಸೆ ನೀಡಲಾಗುತ್ತದೆ ಎಂದರು.

ಮುಂದಿನ ಪೀಳಿಗೆಗಾಗಿ: ಕೆಮ್ಮು ಇದ್ದವರು ಯಾವುದೇ ಕಾರಣಕ್ಕೂ ಚಿಕಿತ್ಸೆ ಪಡೆದುಕೊಳ್ಳುವ ಹಾಗೂ ತಪಾಸಣೆ ಮಾಡಿಸಿಕೊಳ್ಳುವುದಕ್ಕೆ ಹಿಂದೇಟು ಹಾಕಬಾರದು. ಕ್ಷಯ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುವುದರಿಂದ ತ್ವರಿತಗತಿಯಲ್ಲಿ ವ್ಯಾಪಿಸುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಪೀಳಿಗೆಯ ಭವಿಷ್ಯದ ಹಿತದೃಷ್ಟಿಯಿಂದ ಯಾವುದೇ ಔಷಧ ತೆಗೆದುಕೊಂಡರೂ ಕೆಮ್ಮು ಕಡಿಮೆಯಾಗದೇ ಇದ್ದವರು ತಪಾಸಣೆ ಮಾಡಿಸಿಕೊಳ್ಳುವಂತೆ ಮನವಿ ಮಾಡಿದರು.

ಸೈಕಲ್ ಜಾಥಾ: ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭವಾದ ಸೈಕಲ್ ಜಾಥಾ ದೊಡ್ಡಗಡಿಯಾರ ವೃತ್ತ, ಪ್ರಭಾ ಟಾಕೀಸ್, ಸಯ್ಯಾಜಿ ರಾವ್ ರಸ್ತೆ ಜೆ.ಕೆ.ಮೈದಾನದ ರಸ್ತೆ ಸೇರಿದಂತೆ ವಿವಿಧ ರಸ್ತೆಗಳ ಮೂಲಕ ಸಂಚರಿಸಿತು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 80 ಮಂದಿ ಸಿಬ್ಬಂದಿಗಳು ಸೈಕಲ್ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಜಂಟಿ ನಿರ್ದೇಶಕ ಡಾ.ಎಂ.ಆರ್. ಉದಯ್ ಕುಮಾರ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮದ್, ಆರ್‌ಸಿಹೆಚ್‌ಓ ಡಾ.ಜಯಂತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಿಂದ ನೇರ ಸಂದರ್ಶನ

ಮೂರು ಖಾಸಗಿ ಕಂಪನಿಗಳ ವಿವಿಧ ಹುದ್ದೆಗಳಿಗೆ 62 ಮಂದಿ ಆಯ್ಕೆ



ಮೈಸೂರು,ಮಾ.30(ಪಿಎಂ)– ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಬುಧವಾರ ನಡೆದ ನೇರ ಸಂದರ್ಶನದಲ್ಲಿ ಮೂರು ಖಾಸಗಿ ಕಂಪನಿಗಳ ವಿವಿಧ ಹುದ್ದೆಗಳಿಗೆ 62 ಮಂದಿ ಆಯ್ಕೆಯಾದರು.

ಮೈಸೂರಿನ ಎನ್‌ಆರ್ ಮೊಹಲ್ಲಾದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಖಾಸಗಿ ಕಂಪನಿಗಳ ಪ್ರತಿನಿಧಿಗಳು ಅಭ್ಯರ್ಥಿಗಳ ಸಂದರ್ಶನ ಪ್ರಕ್ರಿಯೆ ನಡೆಸಿದರು.

ಮೈಸೂರಿನ ವಿವಿಧ ಸ್ಥಳಗಳಲ್ಲಿರುವ ಈ ಮೂರು ಕಂಪನಿಗಳಲ್ಲಿ ಖಾಲಿಯಿರುವ ಒಟ್ಟು 90 ಹುದ್ದೆಗಳ ನೇಮಕಾತಿಗಾಗಿ ಸಂದರ್ಶನ ನಡೆಸಲಾಯಿತು. ಮೈಸೂರು ನಗರ ಮತ್ತು ಜಿಲ್ಲೆಯ ವಿವಿಧ ಭಾಗಗಳಿಂದ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ, ಡಿಪ್ಲೋಮಾ ಮತ್ತು ಇಂಜಿನಿಯರಿಂಗ್ ಪದವಿ ವಿದ್ಯಾರ್ಹತೆ ಹೊಂದಿರುವ 184 ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಿದ್ದರು.

ಮೈಸೂರಿನ ಗ್ರಾಸ್‌ರೂಟ್ಸ್ ಕಂಪನಿಯ 30 ಹುದ್ದೆಗಳು, ಭೋರುಕ ಕಂಪನಿಯ 25 ಮತ್ತು ಟ್ರೈಟಾನ್ ವಾಲ್ವ್ಸ್ ಕಂಪನಿಯ 35 ಹುದ್ದೆಗಳ ಭರ್ತಿಗೆ ಸಂದರ್ಶನ ನಡೆಸಲಾಯಿತು. ಒಟ್ಟು 90 ಹುದ್ದೆಗಳ ಪೈಕಿ 62 ಹುದ್ದೆಗಳಿಗೆ ಆಯ್ಕೆಯಾಗಿದ್ದು, ಉಳಿದ ಹುದ್ದೆಗಳ ಭರ್ತಿಗೆ ಅಭ್ಯರ್ಥಿಗಳನ್ನು 2ನೇ ಸುತ್ತಿನ ಸಂದರ್ಶನಕ್ಕೆ ಆಯಾಯ ಕಂಪನಿಗಳ ಕಚೇರಿಗೆ ಆಹ್ವಾನಿಸಲಾಯಿತು.

ಉಚಿತ ತರಬೇತಿ: ನೇರ ಸಂದರ್ಶನದ ಜೊತೆಗೆ ಬೆಂಗಳೂರಿನ ಕೇಂದ್ರೀಯ ಪ್ಲಾಸ್ಟಿಕ್ ತಂತ್ರಜ್ಞಾನ ಸಂಸ್ಥೆಯಲ್ಲಿ (ಸಿಪೆಟ್) ಪ್ಲಾಸ್ಟಿಕ್ ತಂತ್ರಜ್ಞಾನ ಸಂಬಂಧ ಉಚಿತ ತರಬೇತಿ ಕಾರ್ಯಕ್ರಮದ ಬಗ್ಗೆ ಸಂದರ್ಶನಕ್ಕೆ ಆಗಮಿಸಿದ್ದ ಅಭ್ಯರ್ಥಿಗಳಿಗೆ ಮಾಹಿತಿ ನೀಡಲಾಯಿತು. ಆಸಕ್ತರು ಹೆಸರು ನೋಂದಾಯಿಸಿ ತರಬೇತಿ ಪಡೆಯಬಹುದು ಎಂಬ ತಿಳಿಸಲಾಯಿತು.

'ಇಂಜೆಕ್ಷನ್ ಮೌಲ್ಡಿಂಗ್ ಮೆಷಿನ್ ಆಪರೇಟರ್' ಕುರಿತಂತೆ 6 ತಿಂಗಳ ತರಬೇತಿ ನೀಡಲಾಗುವುದು. ಬೆಂಗಳೂರಿನಲ್ಲಿ ತರಬೇತಿ ನಡೆಯಲಿದ್ದು, ತರಬೇತಿಯೊಂದಿಗೆ ಊಟ ಮತ್ತು ವಸತಿಯೂ ಉಚಿತವಾಗಿದೆ. ಕನಿಷ್ಠ 8ನೇ ತರಗತಿ ವಿದ್ಯಾರ್ಹತೆ ಹೊಂದಿರುವ ಯುವಕ ಮತ್ತು ಯುವತಿಯರು ಇದರ ಸದುಪಯೋಗ ಪಡೆಯಬಹುದು. ವಿವರಗಳಿಗೆ 88676 86766 ಅನ್ನು ಸಂಪರ್ಕಿಸಬಹುದು ಎಂದು ಸಿಪೆಟ್ ಪ್ರತಿನಿಧಿಗಳು ಇದೇ ವೇಳೆ ಸಂದರ್ಶನಕ್ಕೆ ಆಗಮಿಸಿದ್ದ ಅಭ್ಯರ್ಥಿಗಳಿಗೆ ಮಾಹಿತಿ ನೀಡಿದರು.

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕಿ ಡಿ.ಎಂ.ರಾಣಿ, ಸಂದರ್ಶನದ ವ್ಯವಸ್ಥಾಪಕ ಸೈಯದ್ ಜುಲ್ಫಿಕರ್, ಕಚೇರಿ ಸಿಬ್ಬಂದಿಗಳಾದ ಬಾಲಸುಬ್ರಹ್ಮಣ್ಯ, ಆದರ್ಶ್, ಉಮಾಶಂಕರ್ ಮತ್ತಿತರರು ಹಾಜರಿದ್ದರು.

ಅಖಿಲ ಭಾರತ ಪೊಲೀಸ್ ಕುದುರೆ ಸವಾರಿ ಚಾಂಪಿಯನ್‌ಶಿಪ್‌ನಲ್ಲಿ

ಮೈಸೂರಿನ 12 ಕುದುರೆಗಳು ಭಾಗಿ

ಇಂದಿನಿಂದ ಚಂಡೀಗಢ ಪಂಚಕುಲದಲ್ಲಿ ನಡೆಯುವ ಪೊಲೀಸ್ ಮೌಂಟೆಡ್ ಡ್ಯೂಟಿ ಮೀಟ್‌ನಲ್ಲೂ ಸ್ಪರ್ಧೆಗಿಳಿದ 25 ಮಂದಿ ಪೊಲೀಸರು



ಮೈಸೂರು, ಮಾ.30(ಆರ್‌ಕೆ)–ಚಂಡೀಗಢ ಬಳಿಯ ಭಾನುವಿನ ಇಂಡೋ–ಟಿಬೆಟಿಯನ್ ಬಾರ್ಡರ್ ಪೊಲೀಸ್ ಫೋರ್ಸ್(IIBPF) ಬೇಸಿಕ್ ಟ್ರೈನಿಂಗ್ ಸೆಂಟರ್‌ನಲ್ಲಿ ನಾಳೆ (ಮಾ.31)ಯಿಂದ 12 ದಿನಗಳ 40ನೇ ಅಖಿಲ ಭಾರತ ಪೊಲೀಸ್ ಕುದುರೆ ಸವಾರಿ ಚಾಂಪಿಯನ್‌ಶಿಪ್ ಮತ್ತು ಪೊಲೀಸ್ ಮೌಂಟೆಡ್ ಡ್ಯೂಟಿ ಮೀಟ್ 2021–22 ಆರಂಭವಾಗಲಿದೆ.



ಡಾ. ಚಂದ್ರಗುಪ್ತ

ಮೈಸೂರಿನ ಕೆಎಸ್‌ಆರ್‌ಪಿ ಮೌಂಟೆಡ್ ಪೊಲೀಸ್ ಘಟಕದ 12 ಕುದುರೆಗಳು, 25 ಮಂದಿ ರೈಡರ್‌ಗಳು ಪೊಲೀಸ್ ಇಕ್ವೆಸ್ಟ್ರಿಯನ್ ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಂಡಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ ಅವರು ತಿಳಿಸಿದ್ದಾರೆ.

ಮಾ.22ರಂದು ಕುದುರೆಗಳು ಮತ್ತು ರೈಡರ್‌ಗಳು ಮೈಸೂರಿನ ಮೌಂಟೆಡ್ ಪೊಲೀಸ್ ಘಟಕದಿಂದ ಎರಡು ವಾಹನದಲ್ಲಿ ಪ್ರಯಾಣ ಬೆಳೆಸಿ ಚಂಡೀಗಢ ತಲುಪಿದ್ದು, ಜೊತೆಯಲ್ಲಿ ಕುದುರೆಗಳಿಗೆ ಆಹಾರ, ಔಷಧಿ ಹಾಗೂ ಇತರ ಸುರಕ್ಷತಾ ಸಲಕರಣೆಗಳನ್ನು ಕಳುಹಿಸಲಾಗಿದೆ ಎಂದು ಅವರು ತಿಳಿಸಿದರು.

ಡ್ರೆಸೇಜ್, ಟೆಂಟ್ ಪೆಗ್ಗಿಂಗ್, ಸ್ಲೋ ಜಂಪಿಂಗ್, ಹ್ಯಾಕ್ಸ್, ಮೆಂಟಲ್ ಹಜಾರ್ಡ್, ಪೊಲೀಸ್ ಹಾರ್ಸ್ ಟೆಸ್ಟ್, ಕ್ವಾಡ್ರಿಲ್ ಹಾಗೂ ಫೆರ್ರಿಯರ್ ಟೆಸ್ಟ್‌ಗಳು ಚಾಂಪಿಯನ್‌ಶಿಪ್‌ನಲ್ಲಿ ನಡೆಯಲಿದ್ದು, ಮಹಿಳೆಯರು ಸೇರಿ ಹಲವು ರೈಡರ್‌ಗಳು 16 ಬಗೆಯ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಾರೆ.

ಕರ್ನಾಟಕ ಪೊಲೀಸ್, ಅಸ್ಸಾಂ, ಅಸ್ಸಾಂ ರೈಫಲ್ಸ್, ಬಿಹಾರ, ಬಿಎಸ್‌ಎಫ್, ಸಿಆರ್‌ಪಿಎಫ್, ಚಂಡಿಘಡ, ಗುಜರಾತ್, ಹರಿಯಾಣ, ಮಹಾರಾಷ್ಟ್ರ ಪಂಜಾಬ್, ರಾಜಸ್ತಾನ್, ತಮಿಳುನಾಡು, ಉತ್ತರಪ್ರದೇಶ, ಪಶ್ಚಿಮಬಂಗಾಳ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಪೊಲೀಸ್ ಪಡೆಗಳು ಚಾಂಪಿಯನ್‌ಶಿಪ್‌ನಲ್ಲಿ ಪಾಲ್ಗೊಳ್ಳಲಿವೆ. ಸರ್ಕಾರದಿಂದ ಅನುಮತಿ ಪಡೆದು ಎಲ್ಲಾ ಮುಂಜಾಗ್ರತಾ ಕ್ರಮಗಳೊಂದಿಗೆ ವೆಟರ್ನರಿ ಡಾಕ್ಟರ್‌ಗಳು, ಮೌಂಟೆಡ್ ಪೊಲೀಸ್ ಅಧಿಕಾರಿಗಳು ಕುದುರೆಗಳ ಜೊತೆ ಚಂಡೀಗಢ ತಲುಪಿದ್ದು, ಬೇಸಿಗೆಯ ಬಿಸಿಲಿರುವುದರಿಂದ ಆರೋಗ್ಯದ ಕಡೆ ಗಮನ ಹರಿಸಬೇಕೆಂದು ಸಲಹೆ ನೀಡಿದ್ದೇನೆ. ತಾವು ಅವರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಯೋಗಕ್ಷೇಮ ವಿಚಾರಿಸುತ್ತಿರುವುದಾಗಿ ಅವರು ತಿಳಿಸಿದರು.

ಮೃಗಾಲಯದ ಪ್ರಾಣಿಗಳಿಗೆ ತಂಪು... ತಂಪು


ಮೈಸೂರು, ಮಾ.30(ಎಂಟಿವೈ)– ಮೈಸೂರು ಮೃಗಾಲಯದಲ್ಲಿರುವ ಪ್ರಾಣಿಗಳಿಗೆ ಬೇಸಿಗೆ ಬೇಗೆ ನಿವಾರಿಸುವ ಸಲುವಾಗಿ ಸ್ಪ್ರಿಂಕ್ಲರಿಂಗ್ ವ್ಯವಸ್ಥೆ ಮಾಡಿದ್ದು, ಪ್ರಾಣಿಗಳ ಮೇಲೆ ನೀರು ಚಿಮುಕಿಸುವ ಮೂಲಕ ಅವುಗಳ ಹಿತ ಕಾಯಲಾಗುತ್ತಿದೆ.



ಕಳೆದ ಕೆಲವು ದಿನಗಳಿಂದ ಮೈಸೂರಲ್ಲಿ ಬಿಸಿಲಿನ ತಾಪ ಹೆಚ್ಚಾಗಿದ್ದು, ಮೃಗಾಲಯದಲ್ಲಿರುವ ಪ್ರಾಣಿಗಳು ಬಿಸಿಲಿನ ಬೇಗೆಯಿಂದ ತತ್ತರಿಸದಂತೆ ನೋಡಿಕೊಳ್ಳಲಾಗುತ್ತಿದೆ. ಅದರಲ್ಲೂ ವಿದೇಶದಿಂದ ತಂದಿರುವ ಪ್ರಾಣಿಗಳು ನಮ್ಮ ವಾತಾವರಣದಲ್ಲಿನ ಉಷ್ಣತೆಗೆ ಒಗ್ಗಿಕೊಳ್ಳಲು ಕಷ್ಟವಾಗುವುದನ್ನು ಮನಗಂಡು ಒರಂಗೂಟಾನ್, ಚಿಂಪಾಂಜಿ, ಗೊರಿಲ್ಲಾ ಸೇರಿದಂತೆ ಕೆಲವು ಪ್ರಾಣಿಗಳ ಮನೆಗಳನ್ನು ತಂಪಾಗಿಸಲು ಕ್ರಮ ಕೈಗೊಳ್ಳಲಾಗಿದೆ.

ಆನೆಗಳ ಮೇಲೂ ನೀರು ಚಿಮುಕಿಸಲು ಸ್ಪ್ರಿಂಕ್ಲರ್ ಅಳವಡಿಸಲಾಗಿದ್ದು, ವಿವಿಧ ಪಕ್ಷಿ ಹಾಗೂ ಪ್ರಾಣಿಗಳ ಮನೆಯಲ್ಲಿ ಏರ್ ಕೂಲರ್ ಇಟ್ಟು ಪ್ರಾಣಿ–ಪಕ್ಷಿಗಳಿಗೆ ತಂಪಾದ ವಾತಾವರಣ ಸೃಷ್ಟಿಸಲಾಗಿದೆ. ಇದರೊಂದಿಗೆ ಪ್ರಾಣಿಗಳ ದೇಹದಲ್ಲಿ ನೀರಿನಾಂಶ ಕಾಪಾಡಲು ಕಲ್ಲಂಗಡಿ, ಕರ್ಬೂಜಾ, ದ್ರಾಕ್ಷಿ, ಪರಂಗಿಹಣ್ಣು, ಎಳನೀರು ಸೇರಿದಂತೆ ಬೇಸಿಗೆಯಲ್ಲಿ ಬಳಸಬಹುದಾದ ಹಣ್ಣು ಹಾಗೂ ತರಕಾರಿಯನ್ನೇ ಹೆಚ್ಚಿನ ಪ್ರಮಾಣದಲ್ಲಿ ನೀಡಲಾಗುತ್ತಿದೆ. ಇದರಿಂದ ಮೃಗಾಲಯದಲ್ಲಿನ ಪ್ರಾಣಿ–ಪಕ್ಷಿಗಳು ಲವಲವಿಕೆಯಿಂದ ಕೂಡಿದ್ದು, ಬೇಸಿಗೆ ಬೇಗೆಯಿಂದ ರಕ್ಷಣೆ ಮಾಡಿದಂತಾಗಿದೆ.

3 ಮರಿಗಳಿಗೆ ಜನ್ಮ ನೀಡಿದ ಮೀರ್‌ಕ್ಯಾಟ್



ಮೈಸೂರು ಮೃಗಾಲಯದಲ್ಲಿದ್ದ ಮೀರ್‌ಕ್ಯಾಟ್‌ವೊಂದು ಮೂರು ಮರಿಗಳಿಗೆ ಜನ್ಮ ನೀಡಿದೆ. ಕೊರೊನಾ ಹಾವಳಿ ಲಾಕ್‌ಡೌನ್‌ನಿಂದಾಗಿ ಮೈಸೂರು ಮೃಗಾಲಯಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿರುವುದರಿಂದ ಆದಾಯವಿಲ್ಲದೆ ಸಮಸ್ಯೆ ಎದುರಿಸಿದ್ದ ಮೃಗಾಲಯಕ್ಕೆ ಬೇಸಿಗೆ ರಜೆ ಆರಂಭವಾಗಿರುವುದರಿಂದ ಪ್ರವಾಸಿಗರ ಸಂಖ್ಯೆಯಲ್ಲಿ ಸುಧಾರಣೆ ಕಂಡಿದೆ. ಈ ಸಂದರ್ಭದಲ್ಲಿಯೇ ಮೀರ್‌ಕ್ಯಾಟ್ ಮೂರು ಮರಿಗಳಿಗೆ ಜನ್ಮ ನೀಡಿರುವುದು ಪ್ರಾಣಿ ಪ್ರಿಯರಿಗೆ ಸಂತೋಷವನ್ನುಂಟು ಮಾಡಿದೆ. ಮೀರ್‌ಕ್ಯಾಟ್ ತನ್ನ ಮರಿಗಳೊಂದಿಗೆ ಲವಲವಿಕೆಯಿಂದ ಓಡಾಡುತ್ತಿದ್ದು, ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಸಂಚಾರಿ ವಿಜಯ್ ನಟನೆಯ 'ತಲೆದಂಡ' ನಾಳೆ ಬಿಡುಗಡೆ

14ಕ್ಕೂ ಹೆಚ್ಚು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಗಮನ ಸೆಳೆದಿರುವ ಪರಿಸರ ಸಂರಕ್ಷಣೆ ಸಂದೇಶ ಸಾರುವ ಚಿತ್ರ



ಮೈಸೂರು, ಮಾ.30(ಆರ್‌ಕೆಬಿ)– ಸಂಚಾರಿ ವಿಜಯ್ ನಟನೆಯ ಕಡೆಯ ಚಿತ್ರ 'ತಲೆದಂಡ' ಏ.1ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದ್ದು, ನಾಶವಾಗುತ್ತಿರುವ ಪರಿಸರವನ್ನು ರಕ್ಷಿಸಬೇಕೆಂಬ ಸಂದೇಶವನ್ನು ಈ ಚಿತ್ರ ಸಾರಲಿದೆ ಎಂದು ಚಿತ್ರದ ನಿರ್ದೇಶಕ ಪ್ರವೀಣ್ ಕೃಪಾಕರ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಚಿತ್ರದ ಕುರಿತು ಮಾಹಿತಿ ನೀಡಿದ ಅವರು, ಸಂಚಾರಿ ವಿಜಯ್ ಅವರನ್ನು ಒಳಗೊಂಡಂತೆ ತಾವು ನಿರ್ಮಿಸಿರುವ 'ತಲೆದಂಡ' ಚಿತ್ರ 14ಕ್ಕೂ ಹೆಚ್ಚು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಗಮನ ಸೆಳೆದಿದೆ ಎಂದು ತಿಳಿಸಿದರು.

'ತಲೆದಂಡ'ವು ನಮ್ಮ ಸಮಾಜಕ್ಕೆ ಸಂದೇಶವನ್ನು ಸಾರುವ ವಿಶಿಷ್ಟ ಕಥೆಯಾಗಿದ್ದು, ಅಭಿವೃದ್ಧಿಯ ಹೆಸರಿನಲ್ಲಿ ಮಾನವನ ಸ್ವಾರ್ಥ ಅಗತ್ಯಗಳಿಗಾಗಿ ಆದ ದುರುಪಯೋಗದಿಂದಾಗಿ ಪರಿಸರ ಹಾಳಾಗುತ್ತಿದೆ. ಮಾನವನ ನಿರಂತರ ದಾಳಿಯಿಂದ ಪ್ರಕೃತಿ ನಾಶವಾಗುತ್ತಿದೆ. ಇದರಿಂದ ಹವಾಮಾನ ವೈಪರೀತ್ಯಗಳಿಗೆ ಕಾರಣವಾಗುತ್ತಿದೆ. ಅದರ ಪ್ರತಿಫಲವನ್ನು ನಾವಿಂದು ಅನುಭವಿಸುವಂತಾಗಿದೆ. ಪ್ರಕೃತಿಯನ್ನು ಉಳಿಸಿಕೊಳ್ಳಲು ಹಾಗೂ ಹವಾಮಾನ ವೈಪರೀತ್ಯಗಳಿಂದ ಹೊರಬರಲು ಸಮಾಜಕ್ಕೆ ಈ ಚಿತ್ರ ಸಂದೇಶ ನೀಡಲಿದೆ. ಮುಂದಿನ ಪೀಳಿಗೆಗೆ ಪ್ರಕೃತಿಯನ್ನು ಸಂರಕ್ಷಿಸಲು ಪ್ರೇರೇಪಣೆ ನೀಡಲಿದೆ ಎಂದರು.

ಹೀಗಾಗಿ ಅರಣ್ಯ ರಕ್ಷಿಸಬೇಕೆಂಬ ಸಂದೇಶ ನೀಡುವ ಈ ಚಿತ್ರ ಸೋಲಿಗ ಜನಾಂಗದ ಓರ್ವ ವಿಶೇಷಚೇತನ ತನ್ನ ಪ್ರದೇಶದಲ್ಲಿ ಮರ ಕಡಿಯುವುದರ ವಿರುದ್ಧ ನಡೆಸಿದ ಹೋರಾಟದ ಕಥೆಯನ್ನು ಒಳಗೊಂಡಿದೆ. ಸೋಲಿಗರ ಆಡುಭಾಷೆ ಮತ್ತು ಹಾಡುಗಳನ್ನು ಒಳಗೊಂಡಿರುವ ಈ ಚಿತ್ರದಲ್ಲಿ ಸ್ವತಃ ಸೋಲಿಗರೇ ಹಾಡಿರುವುದು ವಿಶೇಷ. ಅವರ ಆಚರಣೆಗಳನ್ನೂ ಚಿತ್ರ ಒಳಗೊಂಡಿದೆ ಎಂದು ತಿಳಿಸಿದರು. ಕಾಡಿನಿಂದ ಹೊರಬಂದರೆ ಮೂರು ಎಕರೆ ಜಮೀನು ನೀಡುತ್ತೇವೆ, ಸಾಲ ಕೊಡಿಸುತ್ತೇವೆ ಎಂದು ಸರ್ಕಾರ ತಿಳಿಸಿದರೂ ಪರಿಸರವನ್ನು ಅತಿಯಾಗಿ ಪ್ರೀತಿಸುವ ಸೋಲಿಗರು ಅದಕ್ಕೆ ಒಪ್ಪುವುದಿಲ್ಲ. ಕಾಡೇ ತಮ್ಮ ಜಗತ್ತು ಎಂದು ನಂಬಿ ಉಳಿಸಲು ಯತ್ನಿಸುವುದನ್ನು ಚಿತ್ರ ವಿವರಿಸುತ್ತದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕರಾದ ಡಾ.ಹೇಮಮಾಲಿನಿ ಕೃಪಾಕರ, ಸಂಗೀತ ನಿರ್ದೇಶಕ ಹರಿ ಕಾವ್ಯ, ನಿರ್ಮಾಣ ನಿರ್ವಾಹಕ ಚಂದಕವಾಡಿ ಶಿವು (ಚಾವಡಿ) ಉಪಸ್ಥಿತರಿದ್ದರು.

ಚುನಾವಣಾ ವ್ಯವಸ್ಥೆ ಬದಲಾಗದಿದ್ರೆ ಪ್ರಜಾಪ್ರಭುತ್ವ ದುರ್ಬಲವಾಗುತ್ತೆ: ಸಿದ್ದರಾಮಯ್ಯ

ರಾಜಕೀಯ ಪಕ್ಷಗಳು ಕಾರ್ಪೊರೇಟ್ ಸಂಸ್ಥೆಗಳ ಸಖ್ಯ ಬೆಳೆಸಿದ್ದು ಅಪಾಯಕಾರಿ ಪರಿಸ್ಥಿತಿಗೆ ನಾಂದಿಯಾಯ್ತು



ಬೆಂಗಳೂರು, ಮಾ.30– ಚುನಾವಣಾ ವ್ಯವಸ್ಥೆ ಬದಲಾಗಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಸುಧಾರಣೆಯಾಗದೆ ಹೋದರೆ ಪ್ರಜಾಪ್ರಭುತ್ವ ದುರ್ಬಲವಾಗುತ್ತದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಚುನಾವಣಾ ಸುಧಾರಣೆಗಳ ಬಗ್ಗೆ ಇಂದಿನ ಅಧಿವೇಶನದಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವ ದುರ್ಬಲವಾದರೆ ಸಮಾಜ, ದೇಶ ದುರ್ಬಲವಾಗುತ್ತದೆ ಎಪ್ಪತ್ತರ ದಶಕದಿಂದ ಈಚೆಗೆ ಚುನಾವಣಾ ವ್ಯವಸ್ಥೆ ಕೆಡಲು ಆರಂಭವಾಯಿತು ಎಂದು ಸಭಾಧ್ಯಕ್ಷರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದ್ದಾರೆ.

ಚುನಾವಣಾ ವ್ಯವಸ್ಥೆ ಒಂದು ಚುನಾವಣೆಯಿಂದ ಮತ್ತೊಂದು ಚುನಾವಣೆಗೆ ಬಲಿಷ್ಠವಾಗುತ್ತಾ ಹೋಗಬೇಕಿತ್ತು ಆದರೆ ನಮ್ಮಲ್ಲಿ ದುರ್ಬಲವಾಗುತ್ತಾ ಹೋಗುತ್ತಿದೆ ಎಂಬ ಒಟ್ಟು ಅಭಿಪ್ರಾಯ ಸದನದಲ್ಲಿ ವ್ಯಕ್ತವಾಗಿದೆ. ಇದು ಅತ್ಯಂತ ಕಳವಳದ ಸಂಗತಿಯಾಗಿದೆ ಎಂದರು.

ಸಂಸ್ಥಾ ಕಾಂಗ್ರೆಸ್‌ಗೆ ಬೆಂಬಲ: 1971ರಿಂದ ನಾನು ರಾಜಕೀಯದಲ್ಲಿ ಭಾಗ ವಹಿಸಲು ಆರಂಭಿಸಿದೆ. ಆ ಸಂದರ್ಭದಲ್ಲಿ ನಾನು ಕಾನೂನು ಕಾಲೇಜಿನಲ್ಲಿ ಓದುತ್ತಿದ್ದೆ ಮತ್ತು ವಿದ್ಯಾರ್ಥಿ ಸಂಘಟನೆಯ ಮುಖಂಡನಾಗಿದ್ದೆ. ಆಗಿನ ಸಂಸತ್ ಚುನಾವಣೆಯಲ್ಲಿ ಹುಣಸೂರಿನ ಡಾ. ಹೆಚ್.ಎಲ್. ತಿಮ್ಮೇಗೌಡರು ಸಂಸ್ಥಾ ಕಾಂಗ್ರೆಸ್‌ನಿಂದ ಲೋಕಸಭೆಗೆ ಸ್ಪರ್ಧಿಸಿದ್ದರು. ನಾನು ಆ ವೇಳೆಗೆ ಸಮಾಜವಾದಿ ಪಕ್ಷದ ಸದಸ್ಯನೂ ಆಗಿದ್ದೆ ಸಮಾಜವಾದಿ ಪಕ್ಷದ ಅಭ್ಯರ್ಥಿ ಇಲ್ಲದಿರುವುದರಿಂದ ಸಂಸ್ಥಾ ಕಾಂಗ್ರೆಸ್ ಅನ್ನು ಬೆಂಬಲಿಸಿ ಎಂದು ಪ್ರೊ ನಂಜುಂಡ ಸ್ವಾಮಿ ಅವರು ನಮಗೆ ಹೇಳಿದ್ದರು. ಹಾಗಾಗಿ ನಾನು ನಮ್ಮೂರು ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ಪ್ರಚಾರಕ್ಕೆ ಹೋಗಿದ್ದೆ ಎಂದು ನೆನಪಿಸಿಕೊಂಡರು.

ವೀಳ್ಯದೆಲೆ ಭರವಸೆ: ಎಪ್ಪತ್ತರ ದಶಕದಲ್ಲಿ ಹಳ್ಳಿಗಳಲ್ಲಿ ಒಬ್ಬರು, ಇಬ್ಬರು ಮುಖಂಡರು ಇರುತ್ತಿದ್ದರು. ನಾವು ಅವರ ಬಳಿ ಹೋಗಿ ಹಳ್ಳಿಯ ಜನರ ಮತ ನಮಗೆ ಹಾಕಿಸಿ ಎಂದು ಕೇಳುತ್ತಿದ್ದೆವು. ಆ ಮುಖಂಡ ನಮಗೆ ಒಂದು ಸಲ ಮಾತು ಕೊಟ್ಟರೆ ಅಥವಾ ವೀಳ್ಯದೆಲೆ ನೀಡಿದರೆ ಆಮೇಲೆ ಯಾರೇ ಬಂದು ಆಸೆ, ಆಮಿಷ ಒಡ್ಡಿದರೂ ಅವರು ಬದಲಾಗುತ್ತಿರಲಿಲ್ಲ. 1972 ರ ಚುನಾವಣೆಯಲ್ಲಿ ರಾಜಶೇಖರ ಮೂರ್ತಿಯವರು ಸ್ಪರ್ಧೆ ಮಾಡಿದ್ದರು. ಆಗಲೂ ಪ್ರಚಾರ ಮಾಡಿದ್ದೆ. ಅಂದಿನ ಚುನಾವಣಾ ವ್ಯವಸ್ಥೆಗೂ ಇಂದಿನ ಚುನಾವಣಾ ವ್ಯವಸ್ಥೆಗೂ ಬಹಳಷ್ಟು ಬದಲಾವಣೆ ಆಗಿದೆ ಎಂದು ತಿಳಿಸಿದರು.

ಸ್ಕೂಟರ್‌ನಲ್ಲಿ ಊರೂರು ಸುತ್ತಿ ಪ್ರಚಾರ: 1978 ರಲ್ಲಿ ತಾಲೂಕು ಅಭಿವೃದ್ಧಿ ಮಂಡಳಿ ಚುನಾ ವಣೆಯಲ್ಲಿ ನಾನು ಸ್ಪರ್ಧೆ ಮಾಡಿದ್ದೆ. ನಾನು ಮತ್ತು ನನ್ನ ಸ್ನೇಹಿತ ವೈಮಹೇಶ್ ಇಬ್ಬರು ಕರಪತ್ರವನ್ನು ಸಿದ್ಧಪಡಿಸಿಕೊಂಡು, ಒಂದೇ ಒಂದು ಸ್ಕೂಟರ್‌ನಲ್ಲಿ ಊರೂರಿಗೆ ಹಂಚಿ ಬಂದಿದ್ದೆವು. ಆಗಿನ ಒಟ್ಟು ಖರ್ಚು 3,500 ರೂಪಾಯಿ. 1983 ರಲ್ಲಿ ನಾನು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದಾಗ ಜಾರ್ಜ್ ಫರ್ನಾಂಡಿಸ್ ಅವರು 10,000 ರೂಪಾಯಿ ನನಗೆ ಕೊಟ್ಟಿದ್ದರು. ನಮ್ಮೂರ ಜನ 10,000 ರೂಪಾಯಿ ಸಂಗ್ರಹಿಸಿ ಕೊಟ್ಟಿದ್ದರು. ಹಳ್ಳಿಗಳಿಗೆ ಪ್ರಚಾರಕ್ಕೆ ಹೋದಾಗ ಜನ ದುಡ್ಡು ಕೊಡೋರು. ಆ ಚುನಾವಣೆಯಲ್ಲಿ ಒಟ್ಟು ಖರ್ಚಾದ ಹಣ 63,000 ರೂಪಾಯಿ ಎಂದು ಹೇಳಿದರು.

ಚುನಾವಣಾ ಖರ್ಚು ದುಬಾರಿ: ಚುನಾವಣಾ ಆಯೋಗ 40 ಲಕ್ಷ ರೂಪಾಯಿ ವಿಧಾನಸಭೆ ಚುನಾವಣೆಗೆ, 95 ಲಕ್ಷ ರೂಪಾಯಿ ಲೋಕಸಭಾ ಚುನಾವಣೆಗೆ ಖರ್ಚು ಮಾಡಬೇಕು ಎಂದು ನಿಗದಿ ಮಾಡಿದೆ ಆದರೆ ಚುನಾವಣಾ ಆಯೋಗಕ್ಕೆ ನೀಡುವುದು ರಾಮನ ಲೆಕ್ಕ, ಇದನ್ನು ಬಿಟ್ಟು ಇನ್ನೊಂದು ಕೃಷ್ಣನ ಲೆಕ್ಕವೂ ಇರುತ್ತೆ. ಇಂದಿನ ಚುನಾವಣಾ ವ್ಯವಸ್ಥೆ ಹಾಳಾಗಲು ನಮ್ಮ ಪಾಲು ಎಷ್ಟಿದೆಯೋ ಅಷ್ಟೇ ಪ್ರಜಾಪ್ರಭುತ್ವದ ಉಳಿದ ಅಂಗಗಳ ಪಾಲೂ ಇದೆ ಸಮಾಜದ ಎಲ್ಲಾ ಶಿಕ್ಷಿತ, ವಿಚಾರವಂತ, ಪ್ರಗತಿಪರ, ಸಾಮಾಜಿಕ ಕಾಳಜಿ ಇರುವ ಜನರ ಜೊತೆಗೆ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಪತ್ರಿಕಾರಂಗ ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಸುಧಾರಣೆ ಸಾಧ್ಯ ಎಂದು ಆಶಯ ವ್ಯಕ್ತಪಡಿಸಿದರು.

ಕಾರ್ಪೊರೇಟ್ ಸಂಸ್ಥೆಗಳೇ ಸರ್ಕಾರ ನಿಯಂತ್ರಿಸುತ್ತಿವೆ: ಇಂದು ರಾಜಕೀಯ ಪಕ್ಷಗಳು ಮತ್ತು ಕಾರ್ಪೊರೇಟ್ ಬಾಡಿಗಳ ಮೈತ್ರಿ ಆರಂಭವಾಗಿದೆ. ಇದರಿಂದ ಕಾರ್ಪೊರೇಟ್ ಬಾಡಿಗಳು ಸರ್ಕಾರವನ್ನು ನಿಯಂತ್ರಿಸುವಷ್ಟು ಪ್ರಬಲವಾಗಿವೆ. 2013ರಲ್ಲಿ ದೇಶದ ಕೆಲವೇ ಕೆಲವು 142 ಕಾರ್ಪೊರೇಟ್ ಸಂಸ್ಥೆಗಳ ಆಸ್ತಿ 23 ಲಕ್ಷ ಕೋಟಿ ರೂಪಾಯಿ ಇತ್ತು, ಈಗ ಅದು 54 ಲಕ್ಷ ಕೋಟಿಗೆ ಹೆಚ್ಚಾಗಿದೆ. ಇದೇ ಕಾರಣಕ್ಕೆ ಕಾರ್ಪೊರೇಟ್ ಕಂಪನಿಗಳೊಂದಿಗೆ ರಾಜಕೀಯ ಪಕ್ಷಗಳು ಮೈತ್ರಿ ಮಾಡಿಕೊಳ್ಳಬಾರದು ಎಂದು ಹೇಳಿದ್ದ ಎಂದು ಮಾತನಾಡಿದರು.

ದೇಶದಲ್ಲಿ 19 ಲಕ್ಷ ಇವಿಎಂ ನಾಪತ್ತೆ : ದೇಶದಲ್ಲಿ ಸುಮಾರು 19 ಲಕ್ಷ ಇವಿಎಂಗಳು ನಾಪತ್ತೆಯಾಗಿವೆ ಎಂಬ ವರದಿಯನ್ನು ಹೆಚ್.ಕೆ. ಪಾಟೀಲರು ಓದಿ ಹೇಳಿದರು. ಇದಕ್ಕೆ ಹೊಣೆ ಯಾರು? ಇದೇ ಕಾರಣಕ್ಕೆ ಜನರಿಗೆ ಇವಿಎಂಗಳ ಮೇಲೆ ಭರವಸೆ ಕಡಿಮೆಯಾಗುತ್ತಿದೆ. ನನ್ನ ಬಳಿ ಒಬ್ಬ ತಂತ್ರಜ್ಞ ಬಂದು ಇವಿಎಂಗಳನ್ನು ಹೇಗೆ ದುರ್ಬಳಕೆ ಮಾಡಲು ಸಾಧ್ಯ ಎಂದು ಕಣ್ಣೆದುರೇ ಡೆಮೋ ತೋರಿಸಿದ ತಂತ್ರಜ್ಞಾನದಲ್ಲಿ ನನಗೆ ಹೆಚ್ಚು ಮಾಹಿತಿ ಇಲ್ಲದಿರುವುದರಿಂದ ಸರಿ ಬಿಡಪ್ಪಾ ಅಂತ ಹೇಳಿ ಕಳುಹಿಸಿದೆ. ಆದರೆ ಯಂತ್ರಗಳನ್ನು ದುರ್ಬಳಕೆ ಮಾಡಿಕೊಳ್ಳಲು ಒಂದು ಅವಕಾಶ ಇದ್ದೇ ಇರುತ್ತದೆ ಎಂಬುದು ಸತ್ಯ.

ಇವಿಎಂ ಬದಲು ಬ್ಯಾಲೆಟ್: ಜರ್ಮನಿಯಂತಹ ಮುಂದು ವರಿದ ರಾಷ್ಟ್ರ ಕೂಡ ಇವಿಎಂ ಬಿಟ್ಟು ಬ್ಯಾಲೆಟ್ ಪೇಪರ್‌ಗೆ ಮರಳಿದೆ ಗ್ರಾಮ ಪಂಚಾಯತಿ ಚುನಾವಣೆಗಳು ಪಕ್ಷದ ಚಿಹ್ನೆಯ ಮೇಲೆ ನಡೆಯಲ್ಲ ಅಂದಮೇಲೆ ಚುನಾವಣಾ ನೀತಿ ಸಂಹಿತೆ ಜಾರಿ ಮಾಡುವ ಅಗತ್ಯ ಏನಿದೆ? ಚುನಾವಣೆಯಲ್ಲಿ ವಿಳಂಬವಾದಷ್ಟೂ ಭ್ರಷ್ಟಾಚಾರ ಹೆಚ್ಚಾಗುತ್ತದೆ ಎಂಬುದು ನನ್ನ ಅನಿಸಿಕೆ ಎಂದರು.

ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯೋಗದ ಅಧ್ಯಕ್ಷರ ನೇಮಕವನ್ನು ಸರ್ಕಾರದ ಶಿಫಾರಸಿನ ಮೇಲೆ ರಾಜ್ಯಪಾಲರು, ರಾಷ್ಟ್ರಪತಿಗಳು ಮಾಡುವ ಬದಲು ಪ್ರಧಾನಿಗಳು, ವಿರೋಧ ಪಕ್ಷದ ನಾಯಕರು, ಮೇಲ್ಮನೆಯ ವಿರೋಧ ಪಕ್ಷದ ನಾಯಕ, ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಮೂರ್ತಿಗಳನ್ನು ಒಳಗೊಂಡ ಒಂದು ಮಂಡಳಿ ರಚನೆಯಾಗಬೇಕು. ಅವರ ಮೂಲಕ ಅಧ್ಯಕ್ಷರು ಮತ್ತು ಆಯುಕ್ತರ ನೇಮಕವಾಗಬೇಕು. ಸುಧಾರಣೆಗಳು ಹೀಗೆ ಆರಂಭವಾದಾಗ ಮಾತ್ರ ಬದಲಾವಣೆ ಸಾಧ್ಯ ಎಂದು ಅನಿಸಿಕೆ ವ್ಯಕ್ತಪಡಿಸಿದರು.

ಶಿಕ್ಷಿತರ ಸಂಖ್ಯೆ ಜಾಸ್ತಿ ಇದ್ದೂ ಚುನಾವಣೆ ಅಕ್ರಮ: ಒಂದು ದೇಶ, ಒಂದು ಚುನಾವಣೆ ಎಂಬುದು ಭಾರತದಂತ ಒಕ್ಕೂಟ ವ್ಯವಸ್ಥೆಯ ದೇಶದಲ್ಲಿ ಪ್ರಾಯೋಗಿಕವಾಗಿ ಅಸಾಧ್ಯವಾದ ಮಾತು. ಇದಕ್ಕೆ ನೂರಾರು ಕಾರಣಗಳನ್ನು ಕೊಡಬಹುದು. ಸ್ವಾತಂತ್ರ್ಯ ಬಂದಾಗ ದೇಶದ ಸಾಕ್ಷರತೆ ಪ್ರಮಾಣ ಶೇ.16 ಇದ್ದದ್ದು, ಈಗ ಶೇ.82 ಆಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಇಷ್ಟು ಬದಲಾವಣೆ ಆದರೂ ಇಂದಿನ ಚುನಾವಣೆಯನ್ನು ಜಾತಿ, ಹಣಬಲ, ತೋಳ್ಬಲ ಮತ್ತು ಮಾಫಿಯಾಗಳು ನಿಯಂತ್ರಿಸುತ್ತಿವೆ. ಎಲ್ಲಾ ರಾಜಕೀಯ ಪಕ್ಷಗಳು ಮತ್ತು ನಾಯಕರು ಆತ್ಮಾವಲೋಕನ ಮಾಡಿಕೊಂಡು, ಸ್ವಯಂ ಶುದ್ಧೀಕರಣ ಮಾಡದೆ ಹೋದರೆ ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿವು ಕಷ್ಟವಾಗುತ್ತದೆ. ಪ್ರಾಮಾಣಿಕ ಜನಪರ ಕಾಳಜಿ ಇರುವ, ಆರ್ಥಿಕವಾಗಿ ದುರ್ಬಲರಾದ ನಿಷ್ಠಾವಂತ ಜನರು ರಾಜಕೀಯದಿಂದ ದೂರ ಹೋಗದಂತೆ ತಡೆಯಬೇಕು ಎಂಬ ಕಾರಣಕ್ಕೆ ರಾಜಕೀಯ ವ್ಯವಸ್ಥೆಯ ಬದಲಾವಣೆಯನ್ನು ಮಾಡಲೇಬೇಕಾಗಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಶ್ರೀಕೃಷ್ಣ ಎಂದ ರಮೇಶ್‌ಕುಮಾರ್: ಪಟೇಲರ ಕಚ್ಚೆ ನೆನಪಿಸಿಕೊಂಡ ಸಿದ್ದು

ಬೆಂಗಳೂರು, ಮಾ.30– ಸಿದ್ದರಾಮಯ್ಯ ಅವರನ್ನು ಶ್ರೀಕೃಷ್ಣ ಎಂದ ಶಾಸಕ ರಮೇಶ್ ಕುಮಾರ್ ಪ್ರಸ್ತಾಪ ಪಟೇಲರು, ರಾಮಕೃಷ್ಣ ಹೆಗಡೆ ಅವರನ್ನು ಇಂದು ವಿಧಾನಸಭೆಯಲ್ಲಿ ನೆನಪಿಸಿಕೊಳ್ಳುವಂತೆ ಮಾಡಿತು. ವಿಧಾನಸಭೆಯಲ್ಲಿ ಚುನಾವಣೆ ಸುಧಾರಣೆ ಅಗತ್ಯತೆ ಕುರಿತ ಚರ್ಚೆ ವೇಳೆ ಸಿದ್ದರಾಮಯ್ಯ ಮಾತನಾಡುವಾಗ ರಾಮನ ಲೆಕ್ಕ–ಕೃಷ್ಣನ ಲೆಕ್ಕದ ಬಗ್ಗೆ ಪ್ರಸ್ತಾಪಿಸಿದರು. ಚುನಾವಣೆ ಮುಗಿದ ಬಳಿಕ ಒಂದು ತಿಂಗಳಲ್ಲಿ ಖರ್ಚು ವೆಚ್ಚ ಕೊಡಬೇಕು ಅಂತ ಚುನಾವಣಾ ಆಯೋಗ ಹೇಳುತ್ತದೆ. ಆದರೆ ನಾವು ಆತ್ಮವಂಚನೆ ಮಾಡಿಕೊಂಡು ಲೆಕ್ಕ ಹೇಳುತ್ತೇವೆ. ಆಯೋಗಕ್ಕೆ ಕೊಡುವಾಗ ರಾಮನ ಲೆಕ್ಕ ಭೀಮನ ಲೆಕ್ಕ ಅಂತ ಕೊಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದರು. ಆಗ ಸಿದ್ದರಾಮಯ್ಯ ಮಾತಿಗೆ ಸಿದ್ದು ಸವದಿ ಆಕ್ಷೇಪ ಎತ್ತಿ, ಅದು ರಾಮನ ಲೆಕ್ಕ–ಕೃಷ್ಣನ ಲೆಕ್ಕ ಎಂದರು. ಸಿದ್ದರಾಮಯ್ಯ ಮುಂದುವರೆದು ಯಾಕೇ ಭೀಮನ ಲೆಕ್ಕ ಅಲ್ವಾ? ಯಾಕೆ ಭೀಮ ಬೇಡ್ವಾ? ಕೃಷ್ಣನ ಲೆಕ್ವಾ? ಓಕೆ ರಾಮನ ಲೆಕ್ಕ–ಕೃಷ್ಣನ ಲೆಕ್ಕ ಬಿಡಿ ಎಂದರು.

ಈ ವೇಳೆ ಮಧ್ಯೆ ಪ್ರವೇಶ ಮಾಡಿದ ಶಾಸಕ ರಮೇಶ್ ಕುಮಾರ್, ಅದು ರಾಮನ ಲೆಕ್ಕ, ಕೃಷ್ಣನ ಲೆಕ್ಕ ಅಂತ ಮಾಮೂಲು ಹೇಳೋದು. ರಾಮನಿಗೆ ಒಬ್ಬ ಪತ್ನಿ, ಕೃಷ್ಣನಿಗೆ ಲೆಕ್ಕ ಇಲ್ಲ. ನೀವು ಹೇಗಿದ್ದರೂ ಕೃಷ್ಣ ಅಲ್ವಾ ಅಂತಾ ರಮೇಶ್ ಕುಮಾರ್ ಸಿದ್ದರಾಮಯ್ಯ ಕಾಲೆಳೆದರು. ಅದಕ್ಕೆ ಜೆ.ಹೆಚ್.ಪಟೇಲ್ ಹೇಳಿಕೆ ಪ್ರಸ್ತಾಪಿಸಿದ ಸಿದ್ದರಾಮಯ್ಯ, ಹಿಂದೆ, ನಾನು ಮೊದಲು ಕಚ್ಚೆ ಹಾಕ್ತಿದ್ದೆ. ಅಮೇಲೆ ಪಂಚೆ ಹಾಕಲು ಶುರು ಮಾಡಿದೆ. ಏಕೆಂದರೆ ನನ್ನ ಕಚ್ಚೆ ಹರಕ ಅಂತಿದ್ರು ಅಂತಾ ಪಟೇಲರು ಹೇಳ್ತಿದ್ರು. ಈ ಸಮಾಜದಲ್ಲಿ ಎರಡು ವರ್ಗ ಇರುತ್ತದೆ; ಒಂದು ರಾಮನ ವರ್ಗ, ಇನ್ನೊಂದು ಕೃಷ್ಣನ ವರ್ಗ. ನಾನು ಕೃಷ್ಣನ ವರ್ಗದವನು ಅಂತ ಪಟೇಲ್ ಹೇಳ್ತಾ ಇದ್ರು ಎಂದು ಸಿದ್ದರಾಮಯ್ಯ ನೆನಪಿಸಿಕೊಂಡರು. ಈ ನಡುವೆ ಸಿಎಂ ಬಸವರಾಜ ಬೊಮ್ಮಾಯಿ ಮಧ್ಯಪ್ರವೇಶ ಮಾಡಿ, ರಾಮಕೃಷ್ಣ ಹೆಗಡೆ ಅವರ ಬರ್ತ್ ಡೇ ದಿನ ಕಾರ್ಯಕ್ರಮದಲ್ಲೇ ಪಟೇಲರು ಬಹಿರಂಗವಾಗಿ, ಹೆಗಡೆ ಅವರೇ ಇಷ್ಟು ದಿನ ಕೃಷ್ಣನ ಥರಾ ಇದ್ರಿ, ಇನ್ನು ಮುಂದೆಯಾದ್ರೂ ರಾಮನ ಥರಾ ಇರಿ ಎಂದು ಪಟೇಲರು ಅಂದಿದ್ದರು ಎಂದು ಸಿಎಂ ನೆನಪಿಸಿಕೊಂಡರು. ಇಬ್ಬರು ಮಾಜಿ ಸಿಎಂಗಳ ಅಂದಿನ ಮಾತುಕತೆ ಪ್ರಸಂಗ ಹೇಳಿದಾಗ ಇಡೀ ಸದನ ನಗೆಗಡಲಲ್ಲಿ ತೇಲಿತು.

ತಿಪ್ಪಯ್ಯನ ಕೆರೆಗೆ ಕಲುಷಿತ ನೀರು ಸೇರಿ ಪಕ್ಷಿ, ಮೀನುಗಳ ಸಾವು

● ನಗರಪಾಲಿಕೆ, ಮುಡಾ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ದುರಂತ ● ಸುತ್ತ–ಮುತ್ತ ಬಡಾವಣೆಗಳ ಕಲುಷಿತ ನೀರು ಕೆರೆಗೆ ಸೇರ್ಪಡೆ





ಮೈಸೂರು,ಮಾ.30(ಎಂಟಿವೈ)– ಜಿಲ್ಲಾಡಳಿತ ಅಭಿವೃದ್ಧಿ ಪಡಿಸಿದ್ದ ತಿಪ್ಪಯ್ಯನ ಕೆರೆಗೆ ಒಳಚರಂಡಿ ನೀರು ಸೇರುತ್ತಿದ್ದು, ಕೆರೆಯಲ್ಲಿ ಆಶ್ರಯ ಪಡೆದಿದ್ದ ಸ್ಪಾಟೆಡ್ ಬಿಲ್ಡ್ ಡಕ್ ಪಕ್ಷಿ ಹಾಗೂ ಕೆಲವು ಮೀನುಗಳು ಸಾವನ್ನಪ್ಪಿದ್ದು, ಆತಂಕವನ್ನು ಹೆಚ್ಚಿಸಿದೆ.

ಮೈಸೂರು–ತಿ.ನರಸೀಪುರ ರಸ್ತೆಯಲ್ಲಿರುವ ಪೊಲೀಸ್ ಲೇಔಟ್‌ಗೆ ಹೊಂದಿಕೊಂಡಂತಿರುವ ತಿಪ್ಪಯ್ಯನ ಕೆರೆಯನ್ನು 2015–16ನೇ ಸಾಲಿನಲ್ಲಿ ಜಿಲ್ಲಾಡಳಿತ ಹೂಳೆತ್ತಿಸಿ ಅಭಿವೃದ್ಧಿಪಡಿಸಿತ್ತು. ಅಂದು ಮೈಸೂರು ವಿಭಾಗದ ಉಪವಿಭಾಗಾಧಿಕಾರಿಯಾಗಿದ್ದ ಸಿ.ಎಲ್.ಆನಂದ್ ಅವರು ತೀವ್ರ ವಿರೋಧದ ನಡುವೆಯೂ ಪೊಲೀಸ್ ಲೇಔಟ್ ಹಾಗೂ ಜೆಎಸ್‌ಎಸ್ ಲೇಔಟ್ ಕಡೆ ಮುಚ್ಚಿದ್ದ ರಾಜಕಾಲುವೆಯನ್ನು ತೆರವುಗೊಳಿಸಿದ್ದರು.

ಇದರಿಂದ ಕಳೆದ ಎರಡು ವರ್ಷದಿಂದ ಸುರಿದ ಮಳೆಯಿಂದಾಗಿ ರಾಜಕಾಲುವೆ ಮೂಲಕ ತಿಪ್ಪಯ್ಯನ ಕೆರೆಗೆ ನೀರು ಹರಿದು ಬಂದಿತ್ತು. ಹಲವು ವರ್ಷಗಳ ಬಳಿಕ ಕೆರೆ ತುಂಬಿತ್ತು. ಮರು ಜೀವ ಪಡೆದ ಕೆರೆಯಲ್ಲಿ ಪಕ್ಷಿಗಳ ಸಂಕುಲ ಮೈದಳೆದಿತ್ತು ವಲಸೆ ಪಕ್ಷಿಗಳು ತಿಪ್ಪಯ್ಯನ ಕೆರೆಗೆ ಬಂದು ಬೀಡುಬಿಟ್ಟಿದ್ದವು. ಆದರೆ ಈಗ ಕಲುಷಿತ ನೀರು ಕೆರೆಯನ್ನು ಸೇರುತ್ತಿರುವುದು ಆತಂಕ ಸೃಷ್ಟಿಸುತ್ತಿದೆ.

ನಿರ್ಲಕ್ಷ್ಯದಿಂದ ಮಲಿನ: ವಲಸೆ ಪಕ್ಷಿ ಸೇರಿದಂತೆ ಪಕ್ಷಿ ಸಂಕುಲಕ್ಕೆ ಮಾತ್ರವಲ್ಲದೆ ಸ್ಥಳೀಯರಿಗೂ ಅತ್ಯುತ್ತಮ ವಾತಾವರಣ ಸೃಷ್ಟಿಸಿದ್ದ ತಿಪ್ಪಯ್ಯನ ಕೆರೆ ಬಗ್ಗೆ ಸ್ಥಳೀಯ ಪಾಲಿಕೆ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು ನಿರ್ಲಕ್ಷ್ಯ ತಾಳಿರುವುದರಿಂದ ಸುಂದರ ಕೆರೆ ಮಲಿನಗೊಳ್ಳಲಾರಂಭಿಸಿದೆ. ಸರ್ದಾರ್ ವಲ್ಲಭಭಾಯಿ ಪಟೇಲ್ ನಗರ, ಪೊಲೀಸ್ ಲೇಔಟ್, ಜೆಎಸ್‌ಎಸ್ ಲೇಔಟ್, ಆಲನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಬಡಾವಣೆಗಳ ಒಳಚರಂಡಿ ನೀರು ತಿಪ್ಪಯ್ಯನ ಕೆರೆಗೆ ಸೇರುತ್ತಿದೆ. ಕೆಲವೆಡೆ ಮ್ಯಾನ್ ಹೋಲ್ ಉಕ್ಕಿ ಹರಿಯುತ್ತಿದ್ದು, ಈ ನೀರು ಕೂಡ ನೇರವಾಗಿ ಕೆರೆಗೆ ಸೇರುತ್ತಿದೆ.

ಒಳಚರಂಡಿ ನೀರು ಸೇರಿರುವುದರಿಂದ ಕೆರೆಯ ಒಂದು ಭಾಗ ದುರ್ನಾತ ಬೀರಲಾರಂಭಿಸಿದೆ. ಕೆರೆ ನೀರು ಪೂರ್ಣ ಪ್ರಮಾಣದಲ್ಲಿ ಕಲುಷಿತಗೊಂಡಿಲ್ಲದೇ ಇದ್ದರೂ, ನಿಧಾನವಾಗಿ ಕೆರೆ ಹಾಳಾಗುತ್ತಿದೆ. ಇದರಿಂದ ಸ್ಪಾಟೆಡ್ ಬಿಲ್ಡ್ ಡಕ್ ಹಾಗೂ ಮೀನುಗಳು ಸಾವನ್ನಪ್ಪಿವೆ. ಈಗಲಾದರೂ ಜಿಲ್ಲಾಡಳಿತ ಎಚ್ಚೆತ್ತುಕೊಂಡು ಕೆರೆಗೆ ಸೇರುತ್ತಿರುವ ಒಳಚರಂಡಿ ನೀರನ್ನು ತಡೆಗಟ್ಟದಿದ್ದರೆ ಮುಂದಿನ ದಿನಗಳಲ್ಲಿ ಸಮಸ್ಯೆ ಉಲ್ಬಣಿಸಲಿದೆ.

ಚರಂಡಿ ನೀರನ್ನು ಶುದ್ಧೀಕರಿಸಿ ಅದನ್ನು ಕೆರೆಗೆ ಬಿಡುವಂತಾಗಲು ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಿಸುವಂತೆ ಪರಿಸರ ಪ್ರೇಮಿಗಳು ಆಗ್ರಹಿಸುತ್ತಿದ್ದು, ಇದರ ಬಗ್ಗೆ ಸ್ಥಳೀಯ ಜಿಲ್ಲಾಡಳಿತ ಗಮನ ಹರಿಸುತ್ತಿಲ್ಲ.

ತುರ್ತಾಗಿ ಕ್ರಮ ಕೈಗೊಳ್ಳಬೇಕು: ತಿಪ್ಪಯ್ಯನ ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದಕ್ಕೆ ಸಂಬಂಧಿಸಿದಂತೆ ಪರಿಸರವಾದಿ ಶೈಲಜೇಶ್ ಪತ್ರಕರ್ತರೊಂದಿಗೆ ಮಾತನಾಡಿ, ಈ ಹಿಂದೆ ತಿಪ್ಪಯ್ಯನ ಕೆರೆ ಹೂಳೆತ್ತಿ, ಬೇಲಿ ಹಾಕಿ ಕೆರೆ ಪರಿಸರವನ್ನು ಕಾಪಾಡಲು ಜಿಲ್ಲಾಡಳಿತ ಕ್ರಮ ಕೈಗೊಂಡಿತ್ತು. ಇದರಿಂದ 60ಕ್ಕೂ ಹೆಚ್ಚು ವಿದಧ ಪಕ್ಷಿಗಳು ಕೆರೆ ವಾತಾವರಣದಲ್ಲಿ ನೆಲೆಸಿದ್ದವು. ಅದರ ಜೊತೆಗೆ ವಲಸೆ ಪಕ್ಷಿಗಳು ಕೂಡ ಬಂದಿದ್ದವು. ಮೈಸೂರು ಮೃಗಾಲಯದ ವ್ಯಾಪ್ತಿಗೆ ಒಳಪಡುವ ಈ ಕೆರೆಗೆ ಒಳಚರಂಡಿ ನೀರು ಸೇರದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಮುಡಾ ಹಾಗೂ ಪಾಲಿಕೆಯ ಕರ್ತವ್ಯವಾಗಿದೆ ಎಂದರು.

ಈ ಹಿಂದೆ ಈ ಭಾಗದಲ್ಲಿ ಮನೆಗಳ ಸಂಖ್ಯೆ ಕಡಿಮೆ ಇತ್ತು. ಆದರೆ ಇದೀಗ ಹೊಸ ಹೊಸ ಬಡಾವಣೆಗಳು ನಿರ್ಮಾಣವಾಗಿ ನೂರಾರು ಮನೆಗಳು ತಲೆ ಎತ್ತಿವೆ. ಇದರಿಂದ ಒಳಚರಂಡಿ ನೀರಿನ ಪ್ರಮಾಣ ಹೆಚ್ಚಾಗಿ ಕೆರೆ ಸೇರುತ್ತಿದೆ. ಈ ಹಿನ್ನೆಲೆಯಲ್ಲಿ ದೊಡ್ಡ ಮಟ್ಟದ ಅಪಾಯ ಎದುರಾಗುವ ಮೊದಲು ಎಚ್ಚೆತ್ತುಕೊಳ್ಳದಿದ್ದರೆ ಅನಾಹುತವಾಗುವ ಸಾಧ್ಯತೆ ಹೆಚ್ಚು. ಮೃಗಾಲಯದ ವ್ಯಾಪ್ತಿಗೆ ಕೆರೆ ಸೇರಿದ್ದರೂ ಅದಕ್ಕೆ ಬರುವ ಒಳಚರಂಡಿ ನೀರು ತಡೆಗಟ್ಟುವ ಹೊಣೆ ಮಾತ್ರ ಪಾಲಿಕೆ ಅಥವಾ ಮುಡಾದ್ದಾಗಿದೆ. ಈ ಹಿನ್ನೆಲೆಯಲ್ಲಿ ಕೂಡಲೇ ತುರ್ತಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಮೃಗಾಲಯದ ವತಿಯಿಂದ ಈಗಾಗಲೇ ಒಳಚರಂಡಿ ನೀರು ಕೆರೆಗೆ ಬರುವುದನ್ನು ತಡೆಗಟ್ಟಲು ಹಾಗೂ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಉದ್ಯಮಿ ಹತ್ಯೆ ಪ್ರಕರಣ: ಭೂಗತ ಪಾತಕಿ ಬನ್ನಂಜೆ ರಾಜ, ಮತ್ತಿತರ 9 ಮಂದಿ ತಪಿತಸ್ಥರು

ಕೋಕಾ ನ್ಯಾಯಾಲಯ ತೀರ್ಪು

ಬೆಳಗಾವಿ, ಮಾ.30– ಒಂಬತ್ತು ವರ್ಷಗಳ ಹಿಂದೆ ನಡೆದಿದ್ದ ಅಂಕೋಲಾ ಮೂಲದ ಉದ್ಯಮಿ ಆರ್ ಎನ್ ನಾಯಕ್ ಹತ್ಯೆ ಪ್ರಕರಣದಲ್ಲಿ 2015ರಲ್ಲಿ ಮೊರೊಕ್ಕೊದಿಂದ ಹಸ್ತಾಂತರಗೊಂಡಿದ್ದ ಭೂಗತ ಪಾತಕಿ ಬನ್ನಂಜೆ ರಾಜ ಸೇರಿದಂತೆ ಮತ್ತಿತರ 9 ಮಂದಿ ತಪಿತಸ್ಥರು ಎಂದು ಕೋಕಾ ನ್ಯಾಯಾಲಯ ಬುಧವಾರ ತೀರ್ಪು ನೀಡಿದೆ.

ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಮತ್ತು ಕೋಕಾ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಿಎಂ ಜೋಷಿ, ಈ ತೀರ್ಪನ್ನು ಪ್ರಕಟಿಸಿದರು. ಆರೋಪಿಗಳಿಗೆ ಏಪ್ರಿಲ್ 4 ರಂದು ಶಿಕ್ಷೆಯ ಪ್ರಮಾಣವನ್ನು ಪ್ರಕಟಿಸಲಾಗುವುದು ಎಂದು ಹೇಳಿದರು.

ಆದಾಗ್ಯೂ, ಈ ಪ್ರಕರಣದಲ್ಲಿ ಸಾಕ್ಷ್ಯ ಕೊರತೆ ಹಿನ್ನೆಲೆಯಲ್ಲಿ ಮೂವರನ್ನು ಖುಲಾಸೆಗೊಳಿಸಲಾಗಿದೆ. ರೂ. 3 ಕೋಟಿ ಹಣವನ್ನು ನೀಡಲು ನಿರಾಕರಿಸಿದಾಗ ಡಿಸೆಂಬರ್ 21, 2013ರಲ್ಲಿ ಅಂಕೋಲಾ ಮೂಲದ ಉದ್ಯಮಿ ಆರ್ ಎನ್ ನಾಯಕ್ ಅವರ ಹತ್ಯೆಯಾಗಿತ್ತು. ಭೂಗತ ಪಾತಕಿ ಬನ್ನಂಜೆ ರಾಜ, ಬೆಂಗಳೂರು, ಮೈಸೂರು, ಮಂಗಳೂರು, ಉತ್ತರ ಕನ್ನಡ. ಶಿವಮೊಗ್ಗ ಮತ್ತು ಕೇರಳ ರಾಜ್ಯದಲ್ಲಿ 48 ಕೇಸ್‌ಗಳನ್ನು ಎದುರಿಸುತ್ತಿದ್ದಾನೆ. ನಕಲಿ ಪಾಸ್ ಪೋರ್ಟ್ ಕೇಸ್ ನಲ್ಲಿ ಫೆಬ್ರವರಿ 12, 2015ರಲ್ಲಿ ಮೊರೊಕ್ಕೊದಲ್ಲಿ ಆತನನ್ನು ಭದ್ರತಾ ಏಜೆನ್ಸಿಗಳು ಬಂಧಿಸಿದ್ದವು. ನಂತರ ಆಗಸ್ಟ್ 14,2015ರಲ್ಲಿ ಆತನನ್ನು ಭಾರತಕ್ಕೆ ಹಸ್ತಾಂತರಿಸಲಾಗಿತ್ತು. ತದನಂತರ ಬೆಳಗಾವಿಯ ಹಿಂಡಲಗಾ ಸೆಂಟ್ರಲ್ ಜೈಲಿನಲ್ಲಿ ಇರಿಸಲಾಗಿತ್ತು.

ರಾಜಸ್ಥಾನದ ಸರಿಸ್ಕ ರಾಷ್ಟ್ರೀಯ ಉದ್ಯಾನದಲ್ಲಿ ಬೆಂಕಿ

ಜೈಪುರ, ಮಾ. 30– ರಾಜಸ್ಥಾನದ ಸರಿಸ್ಕಾ ರಾಷ್ಟ್ರೀಯ ಉದ್ಯಾನವನದಲ್ಲಿ ಹಬ್ಬಿರುವ ಬೆಂಕಿಯನ್ನು ನಂದಿಸಲು ವಿಪತ್ತು ನಿರ್ವಹಣಾಪಡೆ ಹರಸಾಹಸ ಪಡುತ್ತಿದೆ. ಬೆಂಕಿ ನಂದಿಸುವ ಕಾರ್ಯದಲ್ಲಿ ವಾಯುಪಡೆ ಕೂಡಾ ಕೈಜೋಡಿಸಿದ್ದು, ಹೆಲಿಕಾಪ್ಟರ್‌ಗಳನ್ನು ಕಳುಹಿಸಿದೆ ಬೆಂಕಿಯಿಂದಾಗಿ ಕಾಡು ಪ್ರಾಣಿಗಳಿಗೆ ಅಪಾಯ ತಲೆದೋರುವ ಆತಂಕ ಎದುರಾಗಿತ್ತು ಆದರೆ ಅರಣ್ಯಾಧಿಕಾರಿಗಳು ಬೆಂಕಿ ಕಾಣಿಸಿಕೊಂಡಿರುವ ಸ್ಥಳ ಕಾಡುಪ್ರಾಣಿಗಳ ವಾಸಸ್ಥಾನದಿಂದ ದೂರ ಇರುವುದಾಗಿ ಅಭಯ ನೀಡಿದ್ದಾರೆ. ಬೆಂಕಿ ನಂದಿಸುವ ಕಾರ್ಯದಲ್ಲಿ 200 ಮಂದಿ ಸಿಬ್ಬಂದಿ ನಿರತರಾಗಿದ್ದಾರೆ. ಗ್ರಾಮಸ್ಥರು ಕೂಡಾ ಅರಣ್ಯ ಸಿಬ್ಬಂದಿಗಳಿಗೆ ತಮ್ಮ ಕೈಲಾದ ಸಹಾಯ ಮಾಡುತ್ತಿರುವುದು ಕಂಡುಬಂದಿದೆ. ಸರಿಸ್ಕಾ ರಾಷ್ಟ್ರೀಯ ಉದ್ಯಾನದಲ್ಲಿ 27 ಹುಲಿಗಳಿದ್ದು ಅವುಗಳ ಸುರಕ್ಷತೆಗೆ ಒತ್ತು ನೀಡಲಾಗುತ್ತಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ದಮ್ಮನಹಳ್ಳಿಯಲ್ಲಿ ಸೋಮೇಶ್ವರ ದೇಗುಲ ಲೋಕಾರ್ಪಣೆ

ಚುಂಚನಕಟ್ಟೆ, ಮಾ.30(ಮಧು)–ದ್ವೇಷ, ಅಸೂಯೆಗಳನ್ನು ಮರೆತು ಮಾನವತ್ವದಿಂದ ದೈವತ್ವದ ಕಡೆ ನಾವುಗಳು ಹೋಗಬೇಕೇ ಹೊರತು ನಮ್ಮಿಂದಲೇ ಎಲ್ಲಾ ಎನ್ನುವ ಭಾವನೆ ಅಹಂಗೆ ಕಾರಣವಾಗಲಿದೆ ಎಂದು ಶಾಸಕ ಸಾ.ರಾ.ಮಹೇಶ್ ಹೇಳಿದರು.

ಚುಂಚನಕಟ್ಟೆ ಹೋಬಳಿಯ ದಮ್ಮನಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಪುರಾತನ ಸೋಮೇಶ್ವರ ದೇವಾಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನವರು ಸೂಕ್ತ ಸ್ಥಳ ಮಹಿಮೆ ಅರಿತು ದೇವಸ್ಥಾನ ನಿರ್ಮಾಣ ಮಾಡಿದ್ದು, ನಾವು ಹೊಸದಾಗಿ ನಿರ್ಮಿಸುವ ದೇವಾಲಯಗಳಿಗಿಂತ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದು ಶ್ರೇಷ್ಠ ಕೆಲಸ ಎಂದರು.

ಭಾರತ ದೇಶ ಇಂದು ವಿಶ್ವ ಭೂಪಟದಲ್ಲಿ ಶಾಶ್ವತವಾಗಿ ತಲೆ ಎತ್ತಿ ನಿಂತಿರುವುದು ನಮ್ಮ ಧಾರ್ಮಿಕ ನಂಬಿಕೆಗಳು ಶಕ್ತಿಯುತವಾಗಿ ನಮ್ಮತನದೊಂದಿಗೆ ಬೆರೆತಿರುವುದೇ ಕಾರಣವಾಗಿದ್ದು, ನಮ್ಮ ಸಂಸ್ಕೃತಿ, ಶಾಸ್ತ್ರ, ಜ್ಯೋತಿಷ್ಯ ಕೇವಲ ಕಂದಾಚಾರವಲ್ಲ. ಅವುಗಳು ತನ್ನದೇ ಆದ ಲೆಕ್ಕಾಚಾರಗಳಿಂದ ಕೂಡಿದ್ದು, ಕೆಲವು ಜನರು ಮಾಡುವ ಅಸಹ್ಯ ಕೆಲಸಗಳಿಂದ ಶಾಸ್ತ್ರ ಜ್ಯೋತಿಷ್ಯಗಳ ಬಗ್ಗೆ ಅಪನಂಬಿಕೆ ತಲೆ ಮೂಡಿದೆ ಎಂದ ಅವರು, ಇಂದಿನ ಯುವ ಸಮಾಜ ತಮ್ಮ ಇತಿಹಾಸ ಪುರಾಣವನ್ನು ಮರೆತು ಹೋಗುತ್ತಿರುವುದು ಅಪಾಯದ ಸಂಗತಿ ಎಂದು ವಿಷಾದಿಸಿದರು.



ದಮ್ಮನಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಪುರಾತನ ಸೋಮೇಶ್ವರ ದೇವಾಲಯ ಲೋಕಾರ್ಪಣೆ ಸಭಾ ಕಾರ್ಯಕ್ರಮವನ್ನು ಶಾಸಕ ಸಾ.ರಾ.ಮಹೇಶ್ ಉದ್ಘಾಟಿಸಿದರು.

ಸದ್ಯ ತಾಲೂಕಿನಲ್ಲಿ 300ಕ್ಕೂ ಹೆಚ್ಚು ದೇಗುಲಗಳ ಅಭಿವೃದ್ಧಿ ಕಾರ್ಯ ಮಾಡಿಸಿದ್ದು, ಕೇವಲ ಸುಣ್ಣ–ಬಣ್ಣ ಬಳಿಸುತ್ತಿದ್ದ ಕೆ.ಆರ್.ನಗರದ ಅರ್ಕೇಶ್ವರ ಮತ್ತು ಚುಂಚನಕಟ್ಟೆ ಶ್ರೀರಾಮ ದೇಗುಲಗಳು ಇಂದು ಕೋಟ್ಯಾಂತರ ರೂ. ಅನುದಾನದಲ್ಲಿ ಅಭಿವೃದ್ಧಿಯಾಗಿದ್ದು ಜನಗಳ ಮನದಲ್ಲಿದೆ ಎಂದರು.

ಏ.8ರಂದು ಚುಂಚನಕಟ್ಟೆ ಶ್ರೀರಾಮ ದೇವಾಲಯದ ಆವರಣಕ್ಕೆ 1.5 ಕೋಟಿ ವೆಚ್ಚದ 30 ಅಡಿ ಎತ್ತರದ ಆಂಜನೇಯ ಮೂರ್ತಿ ಆಗಮನವಾಗಲಿದ್ದು, ನಂತರ ವಿವಿಧ ಪೂಜಾ ಕಾರ್ಯ ನಡೆಸಿ ಪ್ರತಿಷ್ಠಾಪನೆ ಮಾಡಲಾಗುವುದು. ತಾಲೂಕಿನಲ್ಲಿ ಇದುವರೆವಿಗೂ 124 ಕೋಟಿ ವೆಚ್ಚದಲ್ಲಿ 6 ಕಡೆ ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನ್, ಇಓ ಸತೀಶ್, ನಾಗೇಗೌಡ, ಮಹೇಶ್, ಗ್ರಾಪಂ ಮಾಜಿ ಉಪಾಧ್ಯಕ್ಷ ಜಗದೀಶ್, ಮಾಜಿ ಅಧ್ಯಕ್ಷ ರಾಜೇಶ್, ಸಕ್ಕರೆ ಕಾರ್ಖಾನೆ ಮಾಜಿ ಉಪಾಧ್ಯಕ್ಷ ಹಾಡ್ಯ ಕುಮಾರಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಧರ್ಮಕುಮಾರ್, ಗ್ರಾಪಂ ಸದಸ್ಯ ರಾಣಿಗಣೇಶ್, ಮಹದೇವ್, ಸಾವಿತ್ರಮ್ಮ, ಯಜಮಾನರಾದ ಮಂಜೇಗೌಡ, ನಾಗೇಗೌಡ, ನಿಂಗೇಗೌಡ, ಜವರೇಗೌಡ, ದಾಸೇಗೌಡ, ಸುರೇಶ, ಜಯರಾಮೇಗೌಡ, ಶಂಕರೇಗೌಡ, ಜೆಡಿಎಸ್ ಮುಖಂಡ ಪ್ರಸನ್ನ, ವಿಎ ಗೀತಮ್ಮ ಸೇರಿದಂತೆ ಮತ್ತಿತರರಿದ್ದರು.

ಕಾಡಾನೆಗಳ ದಾಳಿಗೆ ಬಾಳೆ ಬೆಳೆ ನಾಶ

ಸರಗೂರು, ಮಾ.30(ನಾಗೇಶ್)–ತಾಲೂಕಿನ ದಡದಹಳ್ಳಿ ಗ್ರಾಮದಲ್ಲಿ ಕಾಡಾನೆಗಳ ಉಪಟಳ ಹೆಚ್ಚಾಗಿದ್ದು, ವಾರದಿಂದ ಎರಡು–ಮೂರು ಬಾರಿ ಲಗ್ಗೆ ಇಟ್ಟು ಕಾಡಾನೆಗಳು ಬಾಳೆ ಬೆಳೆ ತಿಂದು, ತುಳಿದು ನಾಶಪಡಿಸಿವೆ.



ಗ್ರಾಮದ ಪುಟ್ಟಸ್ವಾಮಪ್ಪ ಅವರು ತಮಗೆ ಸೇರಿದ 4.5 ಎಕರೆ ಜಮೀನಿನಲ್ಲಿ 2 ಎಕರೆಗೆ 2,500ಕ್ಕೂ ಹೆಚ್ಚು ಬಾಳೆ ಗಿಡಗಳನ್ನು 50 ಸಾವಿರ ರೂ. ಖರ್ಚು ಮಾಡಿ ನಾಟಿ ಮಾಡಿಸಿದ್ದರು. ಅದು ಈಗ ಕಟಾವಿಗೆ ಹಂತಕ್ಕೆ ಬಂದಿತ್ತು. ಆದರೆ ಏಕಾಏಕಿ ದಾಳಿ ನಡೆಸಿದ ಕಾಡಾನೆಗಳು ಬಾಳೆಗಿಡಗಳನ್ನು ತಿಂದು, ತುಳಿದು ನಾಶಗೊಳಿಸಿವೆ. ಇದರಿಂದಾಗಿ ಬಾಳೆ ಬೆಳೆದ ರೈತ ಕಂಗಾಲಾಗಿದ್ದಾರೆ. ಮೊಳೆಯೂರು ಅರಣ್ಯ ವಲಯದ ನುಗು ಹಿನ್ನೀರಿನ ಕಾಡಿನಿಂದ ಆನೆಗಳು ಮೇವು ಅರಸಿ ಜಮೀನಿತ್ತ ಬರುತ್ತಿದ್ದು, ಬೆಳೆ ನಾಶ ಮಾಡುತ್ತಿವೆ. ಈ ಬಗ್ಗೆ ಮೊಳೆಯೂರು ಅರಣ್ಯ ವಲಯದ ಅಧಿಕಾರಿಗಳಿಗೆ ಪ್ರಶ್ನಿಸಿದರೆ ಸರಗೂರು ವಲಯಕ್ಕೆ ಹೋಗಲು ಸೂಚಿಸುತ್ತಾರೆ. ಕಳೆದ ಮೂರು ತಿಂಗಳಿಂದ ಕಾಡಾನೆಗಳು ರೈತರ ಜಮೀನಿನತ್ತ ಬರುತ್ತಿದ್ದು, ರೈತರ ಬೆಳೆ ಸಂಪೂರ್ಣವಾಗಿ ಹಾಳಾಗುತ್ತಿದೆ. ಫಸಲು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ನೀಡಿ ಜಮೀನಿನತ್ತ ಬರುವ ಕಾಡಾನೆಗಳನ್ನು ತಡೆಯಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಸರಗೂರು ವಲಯ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಿ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ.

ಇಂದು ಹುಣಸೂರು ನಗರಸಭೆ ಅಧ್ಯಕ್ಷರ ಚುನಾವಣೆ









ಸಮೀನಾ ಪರ್ವಿನ್ ಗೀತಾ ನಿಂಗರಾಜು ಪ್ರಿಯಾಂಕ ಥಾಮಸ್

ಹುಣಸೂರು,ಮಾ.30(ಕೆಕೆ)–ಹುಣಸೂರು ನಗರಸಭಾ ಅಧ್ಯಕ್ಷೆ ಶ್ರೀಮತಿ ಸೌರಭ ಸಿದ್ದರಾಜು ರಾಜೀನಾಮೆಯಿಂದ ತೆರವಾಗಿರುವ ಸ್ಥಾನಕ್ಕೆ ನಾಳೆ(ಮಾ.31) ಚುನಾವಣೆ ನಡೆಯಲಿದೆ. ಈಗಾಗಲೇ ಮೂವರು ಆಕಾಂಕ್ಷಿಗಳು ಮುಂಚೂಣಿಯಲಿದ್ದು, ಶಾಸಕ ಹೆಚ್.ಪಿ.ಮಂಜುನಾಥ್ ಅವರ ಒಲವು ಯಾರ ಕಡೆಗಿದೆಯೋ ಅವರೇ ಅಧ್ಯಕ್ಷರಾಗಿ ಆಯ್ಕೆಯಾಗಲಿದ್ದಾರೆ.

ನಗರಸಭೆಯ ಅಧ್ಯಕ್ಷಗಾದಿ ಎರಡನೇ ಅವಧಿಯ 30 ತಿಂಗಳಿಗೆ ಸಾಮಾನ್ಯ ಮಹಿಳೆ ಸ್ಥಾನಕ್ಕೆ ಮೀಸಲಾಗಿದ್ದು, ಕಾಂಗ್ರೆಸ್ ವರಿಷ್ಠರ ಅಣತಿಯಂತೆ 6 ತಿಂಗಳಿಗೆ ಒಬ್ಬರಂತೆ ಪಕ್ಷದ ಐವರಿಗೆ ಅಧಿಕಾರದ ಅವಧಿ ನಿಗದಿಮಾಡಲಾಗಿತ್ತು. ಆದರೆ ಮೊದಲ ಅವಧಿಯಲ್ಲಿ ಅನುಷ ರಾಘು ಅವರು 10 ತಿಂಗಳು ಪೂರೈಸಿದ ನಂತರ ಶ್ರೀಮತಿ ಸೌರಭ ಸಿದ್ದರಾಜು 5 ತಿಂಗಳು ತಮ್ಮ ಅವಧಿ ಪೂರೈಸಿದರು. ಈಗ ಮೂರನೇ ಅವಧಿಗೆ ಗುರುವಾರ ಆಯ್ಕೆ ನಡೆಯಲಿದೆ.

9ನೇ ವಾರ್ಡ್‌ನ ಸಮೀನಾ ಪರ್ವಿನ್, 24ನೇ ವಾರ್ಡ್‌ನ ಗೀತಾ ನಿಂಗರಾಜು, 29ನೇ ವಾರ್ಡ್‌ನ ಪ್ರಿಯಾಂಕ ಥಾಮಸ್ ಅಕಾಂಕ್ಷಿಗಳಾಗಿದ್ದಾರೆ. ನಗರಸಭೆಯಲ್ಲಿ ಕಾಂಗೆಸ್‌ನ 14, ಜೆಡಿಎಸ್‌ನ 7, ಬಿಜೆಪಿಯ 3, ಎಸ್‌ಡಿಪಿಐನ 2 ಹಾಗೂ ಪಕ್ಷೇತರರಾಗಿ ಗೆದ್ದಿರುವ ಐವರು ಸೇರಿ 31 ಸದಸ್ಯರಿದ್ದಾರೆ. ಅಲ್ಲದೆ ಓರ್ವ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರೊಬ್ಬರು ಸೇರಿ 34 ಸದಸ್ಯ ಬಲವಿರುವ ನಗರಸಭೆಯ ಅಧ್ಯಕ್ಷಗಾದಿ ಹಿಡಿಯಲು 18 ಸದಸ್ಯರು ಬೆಂಬಲ ಅವಶ್ಯವಿದೆ.

ಈಗಾಗಲೇ ಕಾಂಗ್ರೆಸ್‌ನ 14 ಸದಸ್ಯರು ಎಸ್‌ಡಿಪಿಐನ ಇಬ್ಬರೂ, ಪಕ್ಷೇತರಾಗಿ ಆಯ್ಕೆಯಾಗಿರುವ ಪರ್ವೀನ್‌ತಾಜ್, ಹೆಚ್.ಪಿ.ಸತೀಶ್ ಕುಮಾರ್, ಮಾಲಿಕ್ ಪಾಷ ಹಾಗೂ ಆಶಾ ಕೃಷ್ಣ ಸೇರಿ 21 ಸದಸ್ಯರು ಈಗಾಗಲೇ ಪ್ರವಾಸದಲ್ಲಿದ್ದು, ನಾಳೆ ಚುನಾವಣೆ ನಡೆಯುವ ಸಮಯಕ್ಕೆ ಸರಿಯಾಗಿ ಹಾಜರಾಗಲಿದ್ದಾರೆ. ಮತ್ತೊಂದೆಡೆ ಜೆಡಿಎಸ್‌ನ 7, ಬಿಜೆಪಿಯ ಮೂವರು ಹಾಗೂ, ಓರ್ವ ಪಕ್ಷೇತರ ಸದಸ್ಯ ಸೇರಿ ಹತ್ತು ಮಂದಿ ಕೇರಳಕ್ಕೆ ಪ್ರಯಾಣ ಬೆಳಸಿದ್ದಾರೆ. ನಾಳೆ ಬೆಳಗ್ಗೆ 10.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12ಕ್ಕೆ ಚುನಾವಣೆ ಪ್ರಕ್ರಿಯೆ ಮುಕ್ತಾಯವಾಗಲಿದೆ. ಚುನಾವಣಾಧಿಕಾರಿಯಾಗಿ ತಹಸೀಲ್ದಾರ್ ಕಾರ್ಯ ನಿರ್ವಹಿಸಲಿದ್ದಾರೆ.

ಮಹಿಳಾ ಜನಪ್ರತಿನಿಧಿಗಳು ತಮ್ಮ ಸ್ಥಾನಕ್ಕೆ ನ್ಯಾಯ ಒದಗಿಸಬೇಕು

ಪುರಸಭೆಯ ಅಧ್ಯಕ್ಷೆ ಶಿವಮ್ಮ ಚಾಕಹಳ್ಳಿಕೃಷ್ಣ ಸಲಹೆ



ಹೆಚ್.ಡಿ.ಕೋಟೆ, ಮಾ.30(ಮಂಜು)–ಚುನಾಯಿತ ಮಹಿಳೆಯರು ಹಿಂಜರಿಕೆ ಬಿಟ್ಟು ತಮ್ಮ ಅಧಿಕಾರ ಚಲಾಯಿಸುವ ಮೂಲಕ ಸ್ಥಳೀಯ ಸಂಸ್ಥೆಗಳು ನೀಡಿರುವ ಮೀಸಲಾತಿಗೆ ನ್ಯಾಯ ನೀಡಬೇಕು ಎಂದು ಪುರಸಭಾಧ್ಯಕ್ಷೆ ಶಿವಮ್ಮ ಚಾಕಹಳ್ಳಿಕೃಷ್ಣ ಸಲಹೆ ನೀಡಿದರು.

ತಾಲೂಕು ಪತ್ರಕರ್ತರ ಸಂಘದ ಕಚೇರಿಯಲ್ಲಿ 'ವಿಶ್ವ ಮಹಿಳಾ ದಿನಾಚರಣೆ' ಅಂಗವಾಗಿ ತಾಲೂಕು ಮಟ್ಟದ ಮಹಿಳಾ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳಿಂದ ನಡೆದ ಸಂವಾದದಲ್ಲಿ ಅವರು ಮಾತನಾಡಿದರು. ಮಹಿಳೆಯರಿಗೆ ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಚುನಾವಣೆಗಳಲ್ಲಿ ಶೇ.50 ಮೀಸಲಾತಿ ಇದೆ. ಅದೇ ಮೀಸಲಾತಿಯು ವಿಧಾನಸಭೆ ಮತ್ತು ಲೋಕಸಭೆಗೂ ಜಾರಿಯಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಎಲ್ಲದಕ್ಕೂ ಪುರುಷರ ಕಾಯುವ ಅಗತ್ಯವಿಲ್ಲ. ಪ್ರಧಾನಿಯಾಗಿ ಇಂದಿರಾ ಗಾಂಧಿ ಹಾಗೂ ರಾಷ್ಟ್ರಪತಿಯಾಗಿ ಪ್ರತಿಭಾ ಪಟೇಲ್ ಉದಾಹರಣೆಯಾಗಿ ನಮ್ಮ ಕಣ್ಣ ಮುಂದೆ ಇದ್ದು, ಎಲ್ಲಾ ಕ್ಷೇತ್ರದಲ್ಲೂ ಮಹಿಳೆಯರು ತಮ್ಮದೇ ಚಾಪು ಮೂಡಿಸಲು ಅವಕಾಶವಿದೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆಶಾ, ಅಬಕಾರಿ ಇಲಾಖೆ ಅಬಕಾರಿ ಉಪನಿರೀಕ್ಷಕಿ ಗೀತಾ ಮಾತನಾಡಿದರು. ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಸತೀಶ್ ಬಿ.ಆರಾಧ್ಯ ಉಪಾಧ್ಯಕ್ಷ ಮಂಜುಕೋಟೆ, ಕಾರ್ಯದರ್ಶಿ ಬೀಚನಹಳ್ಳಿ ಮಂಜು, ಜಿಲ್ಲಾ ನಿರ್ದೇಶಕರಾದ ಎಂ.ಎಲ್.ರವಿಕುಮಾರ್, ಜಿ.ರವಿ, ದೊಡ್ಡಸಿದ್ದು, ಪ್ರಮೋದ, ಜಶೀಲಾ, ಪುರುಷೋತ್ತಮ, ರವಿ ಕುಮಾರ್ ಆರಾಧ್ಯ, ಮಹೇಶ್ ಇದ್ದರು.

ವಿಷಯುಕ್ತ ಮೇವು ಸೇವಿಸಿ 60 ಕುರಿಗಳು ಸಾವು

ಭೇರ್ಯ,ಮಾ.30–ವಿಷಯುಕ್ತ ಮೇವು ಸೇವಿಸಿ 60 ಕುರಿಗಳು ಸಾವನ್ನಪ್ಪಿರುವ ಘಟನೆ ಕೆ.ಆರ್.ನಗರ ತಾಲೂಕಿನ ಕಸಬಾ ಹೋಬಳಿಯ ಬಸವಾಪಟ್ಟಣ ಬಳಿ ನಡೆದಿದೆ.

ಮಂಡ್ಯ ಜಿಲ್ಲೆಯ ಬೊಮ್ಮನಹಳ್ಳಿ ಗ್ರಾಮದ ಸಿದ್ದೇಗೌಡ ಹಾಗೂ ಹೊನ್ನೇನಹಳ್ಳಿಯ ಹೆಳವೇಗೌಡ ಅವರಿಗೆ ಸೇರಿದ ಕುರಿಗಳು 60 ಕುರಿಗಳು ಸಾವನ್ನಪ್ಪಿವೆ. ಇವರಿಬ್ಬರೂ ತಮ್ಮ 200 ಕುರಿಗಳೊಂದಿಗೆ ಮಂಗಳವಾರ ಬಸವಾಪಟ್ಟಣ ಗ್ರಾಮದ ಜಮೀನಿನಲ್ಲಿ ಗೊಬ್ಬರಕ್ಕಾಗಿ ಮಂದೆ ತಡೆಯಲು ಬಂದಿದ್ದರು. ಆ ಸಂದರ್ಭದಲ್ಲಿ ಕುರಿಗಳು ವಿಷಯುಕ್ತ ಮೇವು ಸೇವಿಸಿದ್ದರಿಂದ ಒದ್ದಾಡಿ ಪ್ರಾಣ ಬಿಟ್ಟಿವೆ. ಘಟನೆಯಿಂದ 15 ಲಕ್ಷಕ್ಕೂ ಅಧಿಕ ನಷ್ಟ ಉಂಟಾಗಿದೆ.

ಸ್ಥಳಕ್ಕೆ ಕೆ.ಆರ್.ನಗರ ಪಶು ಸಂಗೋಪನಾ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿ 6 ಕುರಿಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕೊಂಡೊಯ್ದಿದ್ದಾರೆ.

ಹೊಟ್ಟೆಪಾಡಿಗಾಗಿ ಊರೂರು ಅಲೆದು ರೈತರ ಜಮೀನಿನಲ್ಲಿ ಮಂದೆ ತಡೆಯುತ್ತಿದ್ದ ನಮ್ಮ ಕುರಿಗಳು ವಿಷಯುಕ್ತ ಮೇವು



ಸೇವಿಸಿ ಸಾವನ್ನಪ್ಪಿರುವುದರಿಂದ ನಮಗೆ ದಿಕ್ಕು ತೋಚದಂತಾಗಿದೆ. ಸರ್ಕಾರ ಕೂಡಲೇ ಸೂಕ್ತ ಪರಿಹಾರ ನೀಡಬೇಕು ಎಂದು ಕುರಿಗಾಹಿಗಳಾದ ಬೊಮ್ಮನಹಳ್ಳಿ ಸಿದ್ದೇಗೌಡ ಮನವಿ ಮಾಡಿದ್ದಾರೆ.

ಬಂಯಲಲ್ಲಿ ವಿಷಯುಕ್ತ ಮೇವು ಸೇವಿಸಿರುವುದರಿಂದ ನಮ್ಮ 60 ಕುರಿಗಳು ಸಾವನ್ನಪ್ಪಿದ್ದು, ಮತ್ತಷ್ಟು ಕುರಿಗಳು ಅನಾರೋಗ್ಯದಿಂದ ಬಳಲುತ್ತಿವೆ. ಅವುಗಳು ಸಾಯುವ ಭೀತಿಯಲ್ಲಿದ್ದು ಸರ್ಕಾರ ನಮ್ಮ ನೆರವಿಗೆ ಧಾವಿಸಬೇಕೆಂದು ಹೊನ್ನೇನಹಳ್ಳಿ ಗ್ರಾಮದ ಹೆಳವೇಗೌಡ ತಮ್ಮ ನೋವು ತೋಡಿಕೊಂಡರು. ವಿಚಾರ ತಿಳಿಯುತ್ತಿದ್ದಂತೆ ಸ್ಥಳಕ್ಕಾಗಮಿಸಿದ ಮನ್ ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರ, ಎಂಸಿಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ಕುರಿಗಳ ಗಾಯಿಗಳಿಗೆ ಸಮಾಧಾನ ಹೇಳಿ ಆರ್ಥಿಕ ನೆರವು ನೀಡಿದರು. ಅಲ್ಲದೆ ಸಂಬಂಧಿತ ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿ ಪರಿಹಾರ ಕೊಡಿಸುವುದಾಗಿ ಭರವಸೆ ನೀಡಿದರು.

ಬೈಕಿಗೆ ಕಾಡುಹಂದಿ ಡಿಕ್ಕಿ; ಮಹಿಳೆ ಸೇರಿ ಇಬ್ಬರಿಗೆ ಗಾಯ

ಮಲ್ಕುಂಡಿ, ಮಾ.30(ಚನ್ನಪ್ಪ)–ಬೈಕ್‌ಗೆ ಕಾಡುಹಂದಿ ಡಿಕ್ಕಿ ಹೊಡೆದ ಪರಿಣಾಮ ಬೈಕ್‌ನಲ್ಲಿದ್ದ ಇಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಬುಧವಾರ ನಂಜನಗೂಡು ತಾಲೂಕಿನ ಗಣೇಶಪುರದ ಬಳಿ ನಡೆದಿದೆ.

ತಾಲೂಕಿನ ಬಳ್ಳೂರುಹುಂಡಿ ನಿವಾಸಿ ಕೇಶವಶಿವಮೂರ್ತಿ ಹಾಗೂ ಇವರ ಸೋದರತ್ತೆ ಹಾದನೂರು ನಿವಾಸಿ ಚಂದ್ರಮ್ಮ ಗಾಯಗೊಂಡರು. ಕೇಶವಶಿವಮೂರ್ತಿ ತಮ್ಮ ಸೋದರತ್ತೆಯೊಂದಿಗೆ ಬಳ್ಳೂರುಹುಂಡಿಯಿಂದ ಗಣೇಶಪುರದಲ್ಲಿರುವ ಜಮೀನಿಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ದಾರಿಮಧ್ಯೆ ನುಗ್ಗಿದ ಕಾಡುಹಂದಿ ಬೈಕ್‌ಗೆ ಡಿಕ್ಕಿ ಹೊಡೆದಿದೆ. ಇದರಿಂದ ಬೈಕ್‌ನಿಂದ ಕೆಳಗೆ ಬಿದ್ದ ಇಬ್ಬರು ತೀವ್ರವಾಗಿ ಗಾಯಗೊಂಡರು. ಕೂಡಲೇ ಗಾಯಾಳುಗಳನ್ನು ಮೈಸೂರಿನ ಕೆಆರ್.ಆಸ್ಪತ್ರೆಗೆ ದಾಖಲಿಸಲಾಯಿತು. ಹೆಚ್ಚಿನ ಚಿಕಿತ್ಸೆಗಾಗಿ ಕೇಶವಮೂರ್ತಿಯನ್ನು ಬೆಂಗಳೂರಿನ ನಿಮ್ಹಾನ್ಸ್‌ಗೆ ರವಾನಿಸಲಾಗಿದೆ.

ಹೆಡಿಯಾಲ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದ್ದು, ಜನರು ಭಯಭೀತರಾಗಿದ್ದಾರೆ. ರೈತರು ಬೆಳೆದ ಬೆಳೆಗಳನ್ನು ಕಾಡಾನೆಗಳು ನಾಶ ಮಾಡುತ್ತಿವೆ. ಇದಕ್ಕೆ ಅರಣ್ಯ ಇಲಾಖೆಯ ನಿರ್ಲಕ್ಷ್ಯವೇ ಕಾರಣ. ಕೂಡಲೇ ಇದಕ್ಕೆ ಕಡಿವಾಣ ಹಾಕಿ, ಗಾಯಾಳುಗಳಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್ ಒತ್ತಾಯಿಸಿದ್ದಾರೆ.



ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರ ಸರ್ಕಾರಿ ಪಿಯು ಕಾಲೇಜಿನ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಅಮೋಘ ವರ್ಷ ಅಮೃತವರ್ಷಿಣಿ ಸೇವಾ ಪ್ರತಿಷ್ಠಾನ, ಸಿರಿಗನ್ನಡ ಗೆಳೆಯರ ಬಳಗದಿಂದ ಲೇಖನ ಸಾಮಗ್ರಿ ವಿತರಿಸಲಾಯಿತು. ಕಿತ್ತೂರು ಅಣ್ಣಯ್ಯ ಶೆಟ್ಟಿ, ಉಪ ಪ್ರಾಂಶುಪಾಲ ಬಿ.ಎಸ್.ರೇವಣ್ಣ, ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ಶಿಕ್ಷಕರಾದ ನಿಂಗರಾಜು ಬಳಗದ ಗೌರವ ಕಾರ್ಯದರ್ಶಿ ಆಲನಹಳ್ಳಿ ಕೆಂಪರಾಜು, ಮಮತ ನಾಯಕ್, ಸೋಮಯ್ಯ ನಾಯಕ್ ಇತರರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷಾ ಕೊಠಡಿ ಗೊಂದಲ ; ಆಕಸ್ಮಿಕ ಸಾವು ಪ್ರಕರಣ

ಮೃತ ವಿದ್ಯಾರ್ಥಿನಿ ಅನುಶ್ರೀ ಕುಟುಂಬಕ್ಕೆ ಪರಿಹಾರ



ಅನುಶ್ರೀ

ತಿ.ನರಸೀಪುರ,ಮಾ.30(ಎಸ್‌ಕೆ)– ಪರೀಕ್ಷಾ ಕೊಠಡಿ ಬದಲಾಗಿದ್ದರಿಂದ ಗೊಂದಲಕ್ಕೆ ಸಿಲುಕಿ ಆಕಸ್ಮಿಕವಾಗಿ ಸಾವಿಗೀಡಾದ ವಿದ್ಯಾರ್ಥಿನಿ ಅನುಶ್ರೀ ಮನೆಗೆ ಭೇಟಿ ನೀಡಿದ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಾಮಚಂದ್ರ ರಾಜೇ ಅರಸ್ ಕುಟುಂಬಕ್ಕೆ ಲಕ್ಷ ರೂ. ಸಹಾಯಧನ ವಿತರಿಸಿ, ಸಾಂತ್ವನ ಹೇಳಿದರು.

ತಾಲೂಕಿನ ಅಕ್ಕೂರು ಗ್ರಾಮದ ವಿದ್ಯಾರ್ಥಿನಿ ಕೆಂಪರಾಜು ಅವರ ಪುತ್ರಿ ಅನುಶ್ರೀ ತಾಲೂಕಿನ ಮಾದಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ವ್ಯಾಸಂಗ ಮಾಡುತ್ತಿದ್ದಳು.

ಸೋಮವಾರ ಆರಂಭಗೊಂಡ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದ ಪರೀಕ್ಷೆ ಬರೆಯಲು ಪಟ್ಟಣದ ವಿದ್ಯೋದಯ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಬೇಕಿತ್ತು. ಈ ವೇಳೆ ಗೊಂದಲಕ್ಕೀಡಾಗಿ ಅನುಶ್ರೀ ಪಕ್ಕದಲ್ಲೇ ಇದ್ದ ಶಿವಾನಂದ ಶರ್ಮಾ ಆಂಗ್ಲ ಮಾಧ್ಯಮ ಶಾಲಾ ಕೇಂದ್ರದಲ್ಲಿ ಪರೀಕ್ಷೆ ಬರೆಯಲು ಮುಂದಾಗಿದ್ದಳು. ಇದನ್ನು ಅರಿತ ಮೇಲ್ವಿಚಾರಕರು ಆಕೆಯ ಗಮನಕ್ಕೆ ತಂದು ಮತ್ತೊಂದು ನಿಗದಿತ ಕೇಂದ್ರಕ್ಕೆ ಕರೆದೊಯ್ಯುತ್ತಿದ್ದ ವೇಳೆ ಹಠಾತ್ತನೆ ಕುಸಿದು ಬಿದ್ದು ಸಾವನ್ನಪ್ಪಿದ್ದಳು. ಮುಖಂಡರು, ಶಾಸಕರು, ಶಿಕ್ಷಣ ಸಚಿವರು ಆಕೆಯ ಸಾವಿಗೆ ವಿಷಾದ ವ್ಯಕ್ತಪಡಿಸಿದ್ದರು.



ಆಕಸ್ಮಿಕವಾಗಿ ಮೃತಪಟ್ಟ ವಿದ್ಯಾರ್ಥಿನಿ ಅನುಶ್ರೀ ಮನೆಗೆ ಭೇಟಿ ನೀಡಿದ ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಕುಟುಂಬಕ್ಕೆ ಸಾಂತ್ವನ ಹೇಳಿ, ಪರಿಹಾರ ವಿತರಿಸಿದರು.

ಈ ಹಿನ್ನೆಲೆಯಲ್ಲಿ ಇಂದು ಅಕ್ಕೂರು ಗ್ರಾಮದಲ್ಲಿರುವ ಅನುಶ್ರೀ ಮನೆಗೆ ಸರ್ಕಾರದ ಪರವಾಗಿ ಭೇಟಿ ನೀಡಿದ ಡಿಡಿಪಿಐ ರಾಮಚಂದ್ರರಾಜೇ ಅರಸ್, ಶಿಕ್ಷಣಾಧಿಕಾರಿ ಮರಿಸ್ವಾಮಿ ಸೇರಿದಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಆಕೆಯ ಪೋಷಕರಿಗೆ ಸಾಂತ್ವನ ಹೇಳಿದರು. ಬಳಿಕ ವಿದ್ಯಾರ್ಥಿ ಕಲ್ಯಾಣ ನಿಧಿಯಿಂದ ನೀಡಲಾಗುವ 1 ಲಕ್ಷ ರೂ. ಪರಿಹಾರದ ಚೆಕ್ ಅನ್ನು ಹಸ್ತಾಂತರಿಸಿದರು.

ಈ ವೇಳೆ ಮಾತನಾಡಿದ ರಾಮಚಂದ್ರರಾಜೇ ಅರಸ್, ಆಗಬಾರದ ಘಟನೆ ನಡೆದು ಹೋಗಿದೆ. ಕುಟುಂಬಸ್ಥರು ಆಕೆಯ ಅಗಲಿಕೆಯ ನೋವನ್ನು ಸಹಿಸಿಕೊಂಡು ಮುಂದೆ ಇರುವ ಮತ್ತೊಬ್ಬ ಮಗನ ಭವಿಷ್ಯದ ಹಿತದೃಷ್ಟಿಯಿಂದ ಶಿಕ್ಷಣದ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ಪೋಷಕರಲ್ಲಿ ಮನವಿ ಮಾಡಿದರು. ಸರ್ಕಾರದಿಂದ ಒಂದು ಲಕ್ಷ ರೂ. ಪರಿಹಾರ ಧನ ನೀಡಲಾಗುತ್ತಿದೆ ಅವಶ್ಯಕತೆ, ಅವಕಾಶ ಇದ್ದಲ್ಲಿ ಇನ್ನೂ ಹೆಚ್ಚಿನ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಶಿಕ್ಷಣ ಸಚಿವರ ಭರವಸೆ: ಇದೇ ವೇಳೆ ಡಿಡಿಪಿಐ ರಾಮಚಂದ್ರ ರಾಜೇ ಅರಸ್ ಮೊಬೈಲ್‌ನಲ್ಲಿ ಶಿಕ್ಷಣ ಸಚಿವರೊಂದಿಗೆ ಸಂಪರ್ಕ ಸಾಧಿಸಿ ಮೃತ ಅನುಶ್ರೀ ಕುಟುಂಬದವರಿಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟರು. ಈ ವೇಳೆ ಶಿಕ್ಷಣ ಸಚಿವ ಬಿ.ಸಿ.ನಾಗೇಶ್‌ರೊಂದಿಗೆ ಮಾತನಾಡಿದ ಕುಟುಂಬದ ಮುಖ್ಯಸ್ಥರು ನಾವು ಕಡು ಬಡವರಾಗಿದ್ದು, ಅನುಶ್ರೀಗೆ ಕಷ್ಟಪಟ್ಟು ಶಿಕ್ಷಣ ಕೊಡಿಸುತ್ತಿದ್ದೆವು. ಈಗ ಆಕೆಯು ಸಾವನ್ನಪ್ಪಿದ್ದಾಳೆ. ದಯವಿಟ್ಟು ಕುಟುಂಬಕ್ಕೆ ಹೆಚ್ಚಿನ ಸಹಾಯ ಮಾಡಿಕೊಡಿ ಎಂದು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಸಚಿವರು, ಸರ್ಕಾರದಿಂದ ಮಾಡಬಹುದಾದ ಎಲ್ಲಾ ಸಹಾಯ ನೀಡಲು ಸಿದ್ಧನಿದ್ದೇನೆ. ನೀವು ಧೃತಿಗೆಡದೆ, ಇರುವ ಮತ್ತೊಬ್ಬ ಮಗನಿಗೆ ಶಿಕ್ಷಣ ಕೊಡಿಸಿ ಎಂದು ಸಲಹೆ ನೀಡಿದರಲ್ಲದೆ, ಅನುಶ್ರೀ ಸಾವು ನಮಗೂ ದುಃಖ ತಂದಿದೆ ಎಂದು ವಿಷಾದಿಸಿದರು.

ಈ ವೇಳೆ ಮಾಲಂಗಿ ಸುರೇಶ್, ಮಾದಾಪುರ ಶಾಲೆ ಮುಖ್ಯಶಿಕ್ಷಕ ರಾಜು, ಶಿಕ್ಷಕಿಯರಾದ ಚಿತ್ರ, ವಿಶಾಲಾಕ್ಷಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಿವಶಂಕರಮೂರ್ತಿ, ಜಿಲ್ಲಾ ಖಜಾಂಚಿ ಮಹದೇವು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾದಪ್ಪ ಲೋಕೇಶ್ ಮತ್ತಿತರರಿದ್ದರು.

ಕೆಕೆಆರ್ ವಿರುದ್ಧದ ಹೋರಾಟದಲ್ಲಿ ಆರ್‌ಸಿಬಿಗೆ ರೋಚಕ ಜಯ



ಮುಂಬೈ, ಮಾ.30– ವಾನಿಂದು ಹಸರಂಗ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ರಾಯಲ್ ಚಾಲೆಂಜರ್ಸ್ ಬೆಂಗಳೂರು 3 ವಿಕೆಟ್‌ಗಳ ರೋಚಕ ಗೆಲುವು ಸಾಧಿಸಿದೆ. ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ 18.5 ಓವರ್‌ಗಳಲ್ಲಿ 128 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಆಂಡ್ರೆ ರಸೆಲ್ 25, ಉಮೇಶ್ ಯಾದವ್ 18, ಸ್ಯಾಮ್ ಬಿಲ್ಲಿಂಗ್ಸ್ 14, ಶ್ರೇಯಸ್ ಅಯ್ಯರ್ 13 ರನ್ ಗಳಿಸಿದರು. ಆರ್‌ಸಿಬಿ ಪರ ಮಾರಕ ಬೌಲಿಂಗ್ ದಾಳಿ ನಡೆಸಿದ ವಾನಿಂದು ಹಸರಂಗ 4 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿಕೊಂಡರು. ಉಳಿದಂತೆ ಆಕಾಶ್ ದೀಪ್ 3, ಹರ್ಷಲ್ ಪಟೇಲ್ 2, ಮೊಹಮ್ಮದ್ ಸಿರಾಜ್ 1 ವಿಕೆಟ್ ಕಬಳಿಸಿದರು.

129 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸಹ ಗೆಲುವು ಪಡೆಯಲು ತಿಣುಕಾಡಿತು. ತಂಡದ ಮೊತ್ತ 17 ರನ್ ಆಗುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಒಂದಾದ ಡೇವಿಡ್ ವಿಲ್ಲಿ, ರುದರ್‌ಫೋರ್ಡ್ 4ನೇ ವಿಕೆಟ್‌ಗೆ 45 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ ಈ ವೇಳೆ ಉತ್ತಮವಾಗಿ ಆಡುತ್ತಿದ್ದ ವಿಲ್ಲಿ 18 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಶಹಬ್ಬಾಸ್ ಅಹಮ್ಮದ್ 3 ಸಿಕ್ಸರ್ ಒಳಗೊಂಡ 27ರನ್ ಗಳಿಸಿ ಔಟಾದರು. ಮತ್ತೊಂದೆಡೆ ಇನ್ನಿಂಗ್ಸ್ ಕೊನೆಯಲ್ಲಿ ರುದರ್‌ಫೋರ್ಡ್ 28 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಅಂತಿಮ ಓವರ್‌ಗಳಲ್ಲಿ ತಾಳ್ಮೆ ಹಾಗೂ ಸಮಯೋಚಿತ ಬ್ಯಾಟಿಂಗ್ ಮಾಡಿದ ದಿನೇಶ್ ಕಾರ್ತಿಕ್ 14 ರನ್ ಗಳಿಸುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಅಂತಿಮವಾಗಿ ಆರ್‌ಸಿಬಿ 19.2 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 132 ರನ್ ಗಳಿಸುವ ಗೆಲುವಿನ ನಗೆ ಬೀರಿತು. ಕೆಕೆಆರ್ ಪರ ಬೌಲಿಂಗ್‌ನಲ್ಲಿ ಟೀಮ್ ಸೌಥಿ 3, ಉಮೇಶ್ ಯಾದವ್ 2, ಸುನೀಲ್ ನರೇನ್ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಕಬಳಿಸಿದರು. ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ವಾನಿಂದು ಹಸರಂಗ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ತಿ.ನರಸೀಪುರ ಪರೀಕ್ಷಾ ಕೇಂದ್ರದಲ್ಲಿ ಮೃತಪಟ್ಟ ವಿದ್ಯಾರ್ಥಿನಿ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ ನೀಡಲು ಪರಿಷತ್‌ನಲ್ಲಿ ಮಂಜೇಗೌಡ ಒತ್ತಾಯ



ಬೆಂಗಳೂರು, ಮಾ.30–ಪರೀಕ್ಷಾ ಕೇಂದ್ರದ ಗೊಂದಲದಿಂದ ಆಘಾತಗೊಂಡು ಪರೀಕ್ಷೆ ಕೇಂದ್ರದಲ್ಲೇ ಕುಸಿದು ಬಿದ್ದು ಸಾವನ್ನಪ್ಪಿದ ತಿ.ನರಸೀಪುರ ತಾಲೂಕು ಅಕ್ಕೂರು ಗ್ರಾಮದ ವಿದ್ಯಾರ್ಥಿನಿ ಅನುಶ್ರೀ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ ನೀಡಬೇಕೆಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ಇಂದು ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, ಅನುಶ್ರೀ ಕುಟುಂಬಕ್ಕೆ ಶಿಕ್ಷಣ ಇಲಾಖೆ ಕೇವಲ ಒಂದು ಲಕ್ಷ ರೂ. ಪರಿಹಾರ ನೀಡಿದ್ದು, ಇದು ಸರಿಯಲ್ಲ. ಇತ್ತೀಚೆಗೆ ಕೆಲವು ಘಟನೆಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ 10 ರಿಂದ 25 ಲಕ್ಷ ರೂ. ಪರಿಹಾರ ನೀಡಲಾಗಿದೆ. ಹಾಗಿರುವಾಗ ಪರೀಕ್ಷಾ ಕೇಂದ್ರದಲ್ಲೇ ಮೃತಪಟ್ಟ ದಲಿತ ವಿದ್ಯಾರ್ಥಿನಿ ಕುಟುಂಬಕ್ಕೆ ಕೇವಲ ಒಂದು ಲಕ್ಷ ರೂ. ನೀಡಿರುವುದು ಖಂಡನೀಯ. ಕನಿಷ್ಠ 15 ಲಕ್ಷ ರೂ.ಗಳನ್ನಾದರೂ ನೀಡಬೇಕು ಎಂದರು.

ರಾಜ್ಯಾದ್ಯಂತ ಮೊನ್ನೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಪ್ರಾರಂಭವಾಗಿರುವುದು ಸಂತಸದ ಸಂಗತಿ. ಕಳೆದ ಎರಡು ವರ್ಷಗಳಿಂದ ಕೊರೊನಾ ಹಿನ್ನೆಲೆಯಲ್ಲಿ ಪರೀಕ್ಷಾ ಕೇಂದ್ರದಿಂದ ದೂರ ಉಳಿದಿದ್ದ ಮಕ್ಕಳು, ಈ ಬಾರಿ ಪರೀಕ್ಷೆ ಬರೆದಿರುವುದು ಮಕ್ಕಳು ಮತ್ತು ಪೋಷಕರಲ್ಲಿ ಆನಂದವನ್ನುಂಟು ಮಾಡಿದೆ ಎಂದು ತಿಳಿಸಿದರು.

ಈ ಬಾರಿಯೂ ಸುಲಲಿತವಾಗಿ ಪರೀಕ್ಷೆ ನಡೆಯುವುದೋ ಇಲ್ಲವೋ ಎಂಬ ಚರ್ಚೆ ನಡೆದಿತ್ತಾದರೂ, ಪರೀಕ್ಷೆಗೆ ಮಕ್ಕಳು ಹಾಜರಾಗಿರುವುದು ಎಲ್ಲಾ ಚರ್ಚಿತ ವಿಷಯಗಳಿಗೆ ಪೂರ್ಣ ವಿರಾಮವನ್ನು ನೀಡಿದಂತಾಗಿದೆ. ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಶೇ. 97.57ರಷ್ಟು ಮಕ್ಕಳು ಹಾಜರಾಗಿ, ನಾವುಗಳು ಯಾವುದೇ ವಿಚಾರಗಳಿಗೆ ಕಿವಿಗೊಡುವುದಿಲ್ಲ. ನಮ್ಮ ಜೀವನ ನಮ್ಮ ಭವಿಷ್ಯವನ್ನು ರೂಪಿಸುವ ಕಡೆಗಿದೆ ಎಂಬುದನ್ನು ತೋರ್ಪಡಿಸಿದ್ದಾರೆ. ಇದು ರಾಜ್ಯದ ಜನತೆಗೆ ಒಳ್ಳೆಯ ಸಂದೇಶವಾಗಿದೆ ಎಂದರು.

ಪ್ರಸ್ತುತ ಪ್ರಾರಂಭವಾಗಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಒಬ್ಬ ಶಿಕ್ಷಕ ಹಾಗೂ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿನಿ ಸಾವನ್ನಪ್ಪಿರುವುದು ದುಃಖಕರವಾದ ಸಂಗತಿಯಾಗಿದೆ. ಅವರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬ ವರ್ಗದವರಿಗೆ ದುಃಖ ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇನೆ ಎಂದು ತಿಳಿಸಿದರು.

ನಾಳೆ 'ಯಶಸ್ವಿನಿ'ಗೆ ಮರು ಚಾಲನೆ

ಬೆಂಗಳೂರು, ಮಾ.30–ಏಪ್ರಿಲ್ ಒಂದರಿಂದ ರಾಜ್ಯಾದ್ಯಂತ 'ಯಶಸ್ವಿನಿ ಯೋಜನೆ' ಆರಂಭವಾಗಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ ಘೋಷಿಸಿರುವಂತೆಯೇ ಈ ಯೋಜನೆಗೆ ಕೇಂದ್ರ ಸಹಕಾರ ಸಚಿವ ಅಮಿತ್ ಷಾ ಬೆಂಗಳೂರಿನಲ್ಲಿ ಏ.1ರಂದು ಚಾಲನೆ ನೀಡಲಿದ್ದಾರೆ. ಈ ಯೋಜನೆಯಿಂದ ಲಕ್ಷಾಂತರ ಬಡವರಿಗೆ ಉಪಯೋಗವಾಗಲಿದೆ. ಈ ಹಿಂದೆ ಇದ್ದ ಈ ಯೋಜನೆಯನ್ನು ಕೆಲವು ವರ್ಷಗಳ ಹಿಂದೆ ಕೈಬಿಡಲಾಗಿತ್ತು. ಇದೀಗ ಮತ್ತೆ ಚಾಲನೆ ಕೊಡಲಾಗುತ್ತಿದೆ.

ಭಾರತೀಯ ಸೇನೆ ಮೇಲೆ ಬುರ್ಖಾ ಧರಿಸಿದ್ದ ಮಹಿಳೆಯಿಂದ ಬಾಂಬ್ ಎಸೆತ

ಸೋಪೋರ್(ಜಮ್ಮು ಮತ್ತು ಕಾಶ್ಮೀರ), ಮಾ. 30– ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಸೋಪೋರ್ ಪಟ್ಟಣದಲ್ಲಿರುವ ಕೇಂದ್ರೀಯ ಮೀಸಲು ಪೊಲೀಸ್ ಪಡೆ(ಸಿಆರ್‌ಪಿಎಫ್) ಶಿಬಿರದ ಮೇಲೆ ನಿನ್ನೆ ಸಂಜೆ ಬುರ್ಖಾ ಧರಿಸಿದ ಮಹಿಳೆಯೊಬ್ಬರು ಬಾಂಬ್ ಎಸೆಯುತ್ತಿರುವುದು ಕ್ಯಾಮರಾದಲ್ಲಿ ಸೆರೆಯಾಗಿದೆ.

ಲಭ್ಯವಾಗಿರುವ ಸಿಸಿಕ್ಯಾಮೆರಾ ದೃಶ್ಯಾವಳಿಗಳಲ್ಲಿ ಮಹಿಳೆಯು ರಸ್ತೆಯ ಮಧ್ಯದಲ್ಲಿ ನಿಂತು ತನ್ನ ಬ್ಯಾಗ್‌ನಿಂದ ಬಾಂಬ್ ತೆಗೆದು ಸಿಆರ್‌ಪಿಎಫ್ ಶಿಬಿರದ ಮೇಲೆ ಎಸೆದಿದ್ದಾಳೆ. ನಂತರ, ಸ್ಥಳದಿಂದ ಓಡಿಹೋಗುತ್ತಾಳೆ. ಭದ್ರತಾ ಶಿಬಿರದ ಹೊರಗೆ ಬಾಂಬ್ ಬಿದ್ದಿದ್ದು ಯಾವುದೇ ನಷ್ಟ ಅಥವಾ ಗಾಯಗಳಾಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ದಾಳಿಯ ನಂತರ ಪ್ರದೇಶವನ್ನು ತಕ್ಷಣವೇ ಸುತ್ತುವರಿಯಲಾಯಿತು. ಮಹಿಳೆಯನ್ನು ಗುರುತಿಸಲಾಗಿದೆ ಮತ್ತು ಆಕೆಯ ಪತ್ತೆಗೆ ಬೃಹತ್ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಅವರನ್ನ ಶೀಘ್ರದಲ್ಲೇ ಬಂಧಿಸಲಾಗುತ್ತೆ ಎಂದು ಎಂದು ಕಾಶ್ಮೀರದ ಐಜಿಪಿ ವಿಜಯ್‌ಕುಮಾರ್ ಹೇಳಿದ್ದಾರೆ.

ಸಂಗೀತ ಕಾರ್ಯಕ್ರಮ

ಮೈಸೂರು: ಹೊಸಚಿಗುರು–ಹಳೇಬೇರು ಯುಗಾದಿ ಸಂಗೀತ ಕಾರ್ಯಕ್ರಮವನ್ನು ಕುವೆಂಪುನಗರದ ನೃಪತುಂಗ ರಸ್ತೆ ಎಂ–ಬ್ಲಾಕ್‌ನಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಏ.2ಸಂಜೆ 6.30ಕ್ಕೆ ಏರ್ಪಡಿಸಲಾಗಿದೆ. ಸಂಗೀತ ವಿಧುಷಿ ಶ್ರುತಿ ರಂಜನಿ ಮತ್ತು ಕು. ಬಿಂದುಮಾಲಿನಿ ಅವರಿಂದ ಹಾಡುಗಾರಿಕೆ, ವಿದ್ವಾನ್ ಹೆಚ್.ಎಸ್‌ತಾಂಡಮೂರ್ತಿ ಪಿಟೀಲು, ವಿದ್ವಾನ್ ಹೆಚ್.ಕೆಯಾದವ್ ಮೃದಂಗ, ವಿದ್ವಾನ್ ಲಕ್ಷ್ಮೀಕಾಂತ್ ಘಟಂ ಸಾಥ್ ನೀಡಲಿದ್ದಾರೆ.

PUBLIC NOTICE

This is to inform the general public that my client proposes to purchase of the immovable property (more fully described in the Schedule given below and hereinafter referred as the "Schedule Property"), with its owner namely, Mr. M. Nagaprasanna, son of Mr. M. Maheshan, Residing at No. 1689, 15th Main, 31st Cross, Banashankari 2nd Stage, Bengaluru-560 070.

All persons having or claiming any right, title, estate or interest by waiver, inheritance, share, sale, mortgage, transfer, lease, tenancy, lien, charge, trust, maintenance, easement, gift, devise bequest, exchange, pre-emption, possession or encumbrance or otherwise howsoever into or upon the Schedule Property described herein below are called upon to intimate the same in writing to the undersigned at the below given address along with all the documents relating to such claim within 15 days from the date of publication of this notice, failing which, any such claim of any party shall be deemed to have been waived for all legal practical purposes and shall not be entertained after such period and my client will proceed with the proposed purchase of the Scheduled Property on the basis that there are no claims whatsoever with respect thereto.

SCHEDULE

All that piece and parcel of the immovable Residential Property bearing House No. 8, measuring East to West 60 ft and North to South 110 ft, totally measuring 6600 sq.ft., together with RCC roofed building constructed on ground and first floor, situated at 4th Main, 2nd Block, Jayalakshmipuram, Devaraja Mohalla, Mysuru City and bounded as follows: East by: Property bearing No. 9 ; West by: Property bearing No. 7 ; North by: 4th Main Road ; South by: Property bearing No. 3.

Sd/- Rohith K.C., Advocate, KAR 277/2005
Sri Raghavendra Associates, Office: No. 254, 1st Floor, Old Kantharaje Urs Road, K.G. Koppal, Mysore-14.
Mob: 9945748684
email: kcrohithlaw@gmail.com
Place: Mysuru

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಚಾಮರಾಜನಗರ ವಿಭಾಗ, ಚಾಮರಾಜನಗರ

ಇ–ಟೆಂಡರ್/ಸಂಧಾನ ಪ್ರಕಟಣೆ ಸಂಖ್ಯೆ: 07/2021–22

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಚಾಮರಾಜನಗರ ವಿಭಾಗದ ವ್ಯಾಪ್ತಿಯ ಚಾಮರಾಜನಗರ, ಟಿ. ನರಸೀಪುರ, ಗುಂಡ್ಲುಪೇಟೆ, ಬೇಗೂರು, ಹನೂರು, ಹುಲ್ಲಹಳ್ಳಿ, ಸುತ್ತೂರು, ನಂಜನಗೂಡು ನೂತನ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಮತ್ತು ಖಾಲಿಯಾಗಲಿರುವ ವಾಣಿಜ್ಯ ಸ್ಥಳಗಳಾದ ಶಾಶ್ವತ ಮಳಿಗೆ, ಕೊಠಡಿ ಮತ್ತು ತೆರೆದ ಸ್ಥಳಗಳಲ್ಲಿ ಜನರಲ್ ಸ್ಟಾಲ್ ನಡೆಸಲು ಹಾಗೂ ವಿಭಾಗದ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಜಾಹೀರಾತು ಹೋರ್ಡಿಂಗ್ಸ್‌ಗಳಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡುವ ಸಲುವಾಗಿ ಇ–ಟೆಂಡರ್/ಸಂಧಾನ ಪ್ರಕಟಣೆ ಸಂ.07/2021–22 ದಿನಾಂಕ: 29.03.2022 ಅನ್ನು ಹೊರಡಿಸಲಾಗಿದೆ.

ಶಾಶ್ವತ ಮಳಿಗೆಗಳನ್ನು ಐದು (05) ವರ್ಷಗಳ ಅವಧಿಗೆ ಮತ್ತು ತೆರೆದ ಸ್ಥಳಗಳನ್ನು ಮೂರು (3) ವರ್ಷಗಳ ಅವಧಿಗೆ ಎಲ್ಲಿದೆಯೋ ಹಾಗೂ ಯಾವ ಸ್ಥಿತಿಯಲ್ಲಿವೆಯೋ ಹಾಗೆಯೇ ಇರುವ ಆಧಾರದ ಮೇಲೆ ಪರವಾನಗಿಯನ್ನು ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಮುಖಾಂತರ ನೀಡಲಾಗುವುದು. ಇ–ಟೆಂಡರ್/ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಜಿದಾರರು ಷರತ್ತು ಹಾಗೂ ನಿಬಂಧನೆಗಳನ್ನು ಖಚಿತಪಡಿಸಿಕೊಂಡು ಭಾಗವಹಿಸಲು ತಿಳಿಸಿದೆ.

1) ಮ್ಯಾನ್ಯುವಲ್ ಟೆಂಡರ್ & ಸಂಧಾನ ಅರ್ಜಿ ಪಡೆಯಲು ಕಡೆಯ ದಿನಾಂಕ: 20.04.2022, ಸಮಯ: ಕಛೇರಿ ಅವಧಿ. 2) ಸಂಧಾನ ಅರ್ಜಿ & ಇ.ಎಂ.ಡಿ ಡಿ.ಡಿ ಸ್ವೀಕರಿಸಲು ಕಡೆಯ ದಿನಾಂಕ: 20.04.2022, ಸಮಯ: ಕಛೇರಿ ಅವಧಿ. 3) ಮ್ಯಾನ್ಯುವಲ್ ಟೆಂಡರ್ ಮತ್ತು ಸಂಧಾನ ಸಭೆಯ ದಿನಾಂಕ: 21.04.2022, ಸಮಯ: ಮಧ್ಯಾಹ್ನ: 12.30 ಗಂಟೆಗೆ. 1) ಇ–ಟೆಂಡರ್‌ಗಾಗಿ ಕಛೇರಿಯಲ್ಲಿ ಸಲ್ಲಿಸಬೇಕಾದ ಇ.ಎಂ.ಡಿ ಡಿ.ಡಿ ಸಲ್ಲಿಸಲು ಕಡೆಯ ದಿನಾಂಕ: 26.04.2022, ಸಮಯ: ಕಛೇರಿ ಅವಧಿ. 2) ಇ–ಟೆಂಡರ್‌ಗಾಗಿ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ: 26.04.2022, ಸಮಯ: ಕಛೇರಿ ಅವಧಿ. 3) ಇ–ಟೆಂಡರ್ ತೆರೆಯುವ ದಿನಾಂಕ: 28.04.2022, ಸಮಯ: ಬೆಳಗ್ಗೆ 11.00 ಗಂಟೆಗೆ.

ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ (ಸಂಚಾರ ಶಾಖೆ), ದೂರವಾಣಿ ಸಂ: 7760990302, 7760990311, ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ಚಾಮರಾಜನಗರ ವಿಭಾಗ

ವಾ.ಸಾ.ಸಂ.ಇ/ವಾಪ್ರ/3979/ಆಕಾರ/21–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

Science	B.Sc., B.Ed	2 Nos
Maths	B.Sc., B.Ed	2 Nos
Computer	As per the required qualification	1 No
Music		1 No
Physical Education	B.A., B.P.Ed	1 No


S.S.BHAT


KORANI

ಕಾಣೆಯಾಗಿದ್ದಾರೆ



ಇವರು ಮಾನಸಿಕ ಅಸ್ವಸ್ಥರಾಗಿದ್ದು ದಿ.26.02.2022ರಂದು ಮಧ್ಯಾಹ್ನ 1.30ರ ಸಮಯದಲ್ಲಿ ಆರ್.ಎಸ್.ನಾಯ್ಡು ನಗರದ ಮನೆಯಿಂದ ಹೊರ ಹೋದವರು ವಾಪಸ್ ಬಂದಿರುವುದಿಲ್ಲ. ಇವರನ್ನು ಕಂಡವರು ಕೂಡಲೇ ಎನ್.ಆರ್. ಪೋಲಿಸ್ ಠಾಣೆ ಗಾಗಲಿ ಅಥವಾ ಕೆಳಕಂಡ ಮೊಬೈಲ್ ನಂಬರ್‌ಗೆ ಕರೆ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಮೊಹಮ್ಮದ್ ಸಾಬಿರ್
ವಯಸ್ಸು 47 ವರ್ಷ

9342799544
9916902061
8095194495

13ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 13 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಸುನೀತಿ, ಕೃತಿಕಾ, ವಿಕ್ರಮ್, ಬಿಪಿನ್, ಸವಿತ

ಶ್ರೀ ಎಂ.ಆರ್. ಸತ್ಯನಾರಾಯಣ
ಮ್ಯಾನೇಜರ್, ಎಕ್ಸಿಕ್ಯೂಟಿವ್, ಇಂಜಿನೀಯರ್ ಕಛೇರಿ, ಎಂ.ಡಿ.ಪಿ. ಮೈಸೂರು

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಗರಸಭಾ ಕಾರ್ಯಾಲಯ, ಕೊಳ್ಳೇಗಾಲ, ಚಾಮರಾಜನಗರ ಜಿಲ್ಲೆ

Phone No. 08224-252016 Website: www.kollegalacity.gov.in
Helpline No. 08224-252626 E-mail: cmckollegal@yahoo.co.in

ನಂ:ಮುನಿ/ಕೊನಸ/ತಾ.ವಿ./ಟೆಂಡರ್/06/2021–22 ದಿನಾಂಕ: 28.03.2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕೊಳ್ಳೇಗಾಲ ನಗರಸಭೆಯ ವಿವಿಧ ಅನುದಾನಗಳಡಿಯಲ್ಲಿ ಕನಿಷ್ಠ ಮತ್ತು ಗರಿಷ್ಟ ರೂ. 0.905 ಲಕ್ಷ ಮತ್ತು ರೂ. 42.31 ಲಕ್ಷಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ 4ನೇ ದರ್ಜೆ ಮತ್ತು ಮೇಲ್ಪಟ್ಟ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಗುತ್ತಿಗೆದಾರರುಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ https://www.eproc.karnataka.gov.in/ ಪೋರ್ಟಲ್ (ಕೆಪಿಪಿಪಿ) ಮೂಲಕ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು KW-1 ಮತ್ತು KW-2 ನ ನಿಯಮಗಳಂತೆ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ವಿವರವಾದ ಟೆಂಡರ್ ಪ್ರಕಟಣೆಯನ್ನು, ಕೊಳ್ಳೇಗಾಲ ನಗರಸಭಾ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.kollegalacity. mrc.gov.in ನಲ್ಲಿ ವೀಕ್ಷಿಸಬಹುದು.

ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 15.04.2022 upto 5.30 pm.
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ತೆರೆಯುವ ದಿನಾಂಕ: 18.04.2022 at 11.00 am.

ಸೂಚನೆ: ಕ್ರಮ ಸಂಖ್ಯೆ : 02, 06, 20, 24, 25, 29, 33, 43 ಮತ್ತು 49ರ ಕಾಮಗಾರಿಗಳಿಗೆ ಅನುಸೂಚಿತ ಜಾತಿಗಳ ವರ್ಗಕ್ಕೆ ಸೇರಿದ ಟೆಂಡರ್‌ದಾರರು ಮತ್ತು ಕ್ರಮ ಸಂಖ್ಯೆ 11, 22, 32 ಮತ್ತು 37ರ ಕಾಮಗಾರಿಗಳಿಗೆ ಅನುಸೂಚಿತ ಪಂಗಡಕ್ಕೆ ಸೇರಿದ ಟೆಂಡರ್‌ದಾರರು ಮಾತ್ರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ.

01	DMA/2021-22/OW/WORK_INDENT128112	02	DMA/2021-22/OW/WORK_INDENT128113
03	DMA/2021-22/RD/WORK_INDENT128118	04	DMA/2021-22/RD/WORK_INDENT128115
05	DMA/2021-22/RD/WORK_INDENT128123	06	DMA/2021-22/RD/WORK_INDENT128125
07	DMA/2021-22/OW/WORK_INDENT128137	08	DMA/2021-22/OW/WORK_INDENT128134
09	DMA/2021-22/OW/WORK_INDENT128146	10	DMA/2021-22/OW/WORK_INDENT128142
11	DMA/2021-22/RD/WORK_INDENT128138	12	DMA/2021-22/RD/WORK_INDENT128140
13	DMA/2021-22/RD/WORK_INDENT128143	14	DMA/2021-22/RD/WORK_INDENT128136
15	DMA/2021-22/RD/WORK_INDENT128653	16	DMA/2021-22/RD/WORK_INDENT128652
17	DMA/2020-21/EL/WORK_INDENT129177	18	DMA/2021-22/OW/WORK_INDENT129750
19	DMA/2021-22/EL/WORK_INDENT129758	20	DMA/2021-22/EL/WORK_INDENT127819
21	DMA/2021-22/RD/WORK_INDENT127785	22	DMA/2021-22/RD/WORK_INDENT127805
23	DMA/2021-22/RD/WORK_INDENT127792	24	DMA/2021-22/RD/WORK_INDENT127924
25	DMA/2021-22/OW/WORK_INDENT128005	26	DMA/2021-22/RD/WORK_INDENT128037
27	DMA/2021-22/OW/WORK_INDENT128011	28	DMA/2021-22/OW/WORK_INDENT127813
29	DMA/2021-22/RD/WORK_INDENT128033	30	DMA/2021-22/RD/WORK_INDENT128032
31	DMA/2021-22/OW/WORK_INDENT128026	32	DMA/2021-22/RD/WORK_INDENT128062
33	DMA/2021-22/RD/WORK_INDENT128044	34	DMA/2021-22/RD/WORK_INDENT128025
35	DMA/2021-22/RD/WORK_INDENT128034	36	DMA/2021-22/RD/WORK_INDENT128024
37	DMA/2021-22/RD/WORK_INDENT128035	38	DMA/2021-22/OW/WORK_INDENT129794
39	DMA/2021-22/BD/WORK_INDENT129808	40	DMA/2021-22/OW/WORK_INDENT129430
41	DMA/2020-21/FP/WORK_INDENT112197/Call-2	42	DMA/2021-22/EL/WORK_INDENT129458
43	DMA/2021-22/RD/WORK_INDENT129435	44	DMA/2021-22/RD/WORK_INDENT129445
45	DMA/2021-22/RD/WORK_INDENT129448	46	DMA/2021-22/RD/WORK_INDENT129437
47	DMA/2021-22/EL/WORK_INDENT129934	48	DMA/2021-22/OW/WORK_INDENT130025
49	DMA/2021-22/EL/WORK_INDENT129904	50	DMA/2020-21/BD/WORK_INDENT122616/Call-2
51	DMA/2020-21/EL/WORK_INDENT112213/Call-4	52	DMA/2021-22/EL/WORK_INDENT115421/Call-3
53	DMA/2021-22/WS/WORK_INDENT124506/Call-2		

ಸಹಿ/– ಅಧ್ಯಕ್ಷರು (ಪ್ರಭಾರ) ನಗರಸಭೆ, ಕೊಳ್ಳೇಗಾಲ
ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಕೊಳ್ಳೇಗಾಲ
ಸಹಿ/– ಪೌರಾಯುಕ್ತರು ನಗರಸಭೆ, ಕೊಳ್ಳೇಗಾಲ

ವಾಸಾಸಂಇ:ಚಾ.ನಗರ:618:2021–22